ಇತಲಿಯೊಳಗೆ ನೈಸೆಂಬ ಪಟ್ಟಣದಲ್ಲಿ ಒಂದು ನಾಟಕ ಗ್ರಹಕ್ಕೆ ಬೆಂಕಿ ಹತ್ತಿ ನೂರು ಜನ ಸಂತ್ರಿತೆಬ ಖೇದದ ವರ್ತಮಾನವು ಬಂದಿದೆ.

ಪೆರಗುಲ್ಲಿಯಿಂದ ಮುಂಬಯಿಗೆ ಹೋಗುವ ಪ್ರತಿ ಒಂಬ್ಬ ಮನುಷ್ಯನಿಗೆ ಹೊಗೆ ಹಡಗದ ಬಾಡಿಗೆಯು ಈ ಪೂರ್ವದಲ್ಲಿ ನಾಲ್ಕು ರುಪಾಯಿಗಿಂತ ಹೆಚ್ಚಿತ್ತು. ಆದರೆ ಅದು ಈಗ ನಾಲ್ಕು ಆಣ್ಣೆಗೆ ಬಂದಿದೆ!

———

ಈ ತಿಂಗಳಿನ ೧೨ನೇ ತಾರೀಖಿನಲ್ಲಿ ನಾಮದಾರ ಗವರ್ನರ ಧೊರೆಗಳವರು ಧಾರವಾಡಕ್ಕೆ ಬಂದಿದ್ದರು. ಅವರ ಸನ್ಮಾನಾರ್ಥವಾಗಿ ಮಂಗಳವಾರ ಪೇಟೆಯ ನಡುಬಾಜಾರಿನಲ್ಲಿ ಊರವರು ಭವ್ಯವಾದ ಮಂಟಪವನ್ನು ಹಾಕಿಸಿದ್ದರು. ಅದೇ ಮಂಟಪದೊಳಗೆ ದರ್ಬಾರು ಆಗಿತ್ತು. ಆ ದರ್ಬಾರಿನೊಳಗೆ ನಾ

ಪುಟಾರ ಥೊರೆಗಳು. ಮಾತಾಡುವಾಗ ಧಾರವಾಡದೊಳಗೆ ಒಂದು ಕಾಲೇಜಪ್ಪು ಸವಡಿನ ಪ್ರಕಾರ ಆಗುವದೆಂಬ ಅಭಿಪ್ರಾಯ-ವನ್ನು ಪ್ರಕಟಿಸಿದರು.

———

ನಾಮುಡಾರ ಸಾಹೇಬರು ಬಂದಾಗ ಮೆ, ರನೆಲ್ ಥೊರೆಗಳು ಇಲ್ಲಿ ಬಂದು ಕಾರವಾಡದ ಕಡೆಗೆ ಹೋದರು.

—o—

ಧಾರವಾಡದ ಹಾಯಸ್ಕೂಲಿನ ಹೆಡ್‌ಮಾಸ್ತರರಾದ ರಾ. ರಾ. ವಿಠಲ ನಾರಾಯಣ ಮೊಕಾಸಿ ಇವರನ್ನು ಸಾತಾರೆಯ ಹಾಯಸ್ಕೂಲಿಗೆ ನೇಮಿಸಿ, ಇಲ್ಲಿಯ ಹಾಯಸ್ಕೂಲಿಗೆ ಕೇಶವ ಬಾಪೂಜೀ ಬಾಳ ಎಂಬವರನು ನೇಮಿಸಿದ ವರ್ತಮಾನ ಉಂಟು.

—o—

ಧಾರವಾಡ ಜಿಲ್ಲೆಯಲ್ಲಿ ಎರಡನೇಯವನೊಬ್ಬ ಅಸಿಷ್ಟಾಂಟ ಡೆಪ್ಯುಟೀ ಇನಸ್ಪೆಕ್ಟರನಾಗತಕ್ಕವನುಂಟೆದು ಕೇಳ-ತ್ತೇವೆ. ಆವನು ಈ ಜಿಲ್ಲೆಯ ಶಾಲೆಗಳಲ್ಲದೆ ಕೆಲವು ಕಲಾವಧಿಗೆ ಜಿಲ್ಲೆಯ ಶಾಲೆಗಳನ್ನೂ ತಪಾಸಿಸತಕ್ಕವನು.

—o—

ಟ್ರೇನಿಂಗ ಕಾಲೇಜಡಲ್ಲಿ ಅಸಿಷ್ಟಾಂಟ ಮಾಸ್ತರರಾದ ಸ. ಬ್ಬರಾವ ಯಾತಗಿರಿ ಎಂಬವರಿಗೆ ಜೇಗ ಒಂದು ಅಸಿಷ್ಟಾಂಟ ಡೆಪ್ಯುಟಿಯ ಸ್ಥಳವು ನೇಮಕವಾಗತಕ್ಕದ್ದುಂಟೆಂದು ಸುದ್ದಿಯುಂಟು.

—o—

ಟ್ರೇನಿಂಗ ಕಾಲೇಜದ ವಿದ್ಯಾರ್ಥಿಯಾದ ಕೃಷ್ಣಾಜೀ ಅನಂತ ಜಕಾತಿ ಎಂಬುವನು "ಗಣಿತ ಸಂಗ್ರಹ" ಎಂಬ

ಕೊಂಡು ಸಂಗ್ರ ಅಂಕಗಣಿತದ ಪುಸ್ತಕವನ್ನು ಈ ತಂಗಳಲ್ಲಿ ಪ್ರಸಿದ್ಧಿಸಿವ್ವಾನೆ. ಇದರಲ್ಲಿ ಮಾಸ್ತರ ಜನರಿಗೆ ಅತ್ಯುಪಯುಕ್ತವಾಯ ಹೊಸ ಜಾತಿಯ ೨೬೦ ಲೆಕ್ಕಗಳೂ ಅವುಗಳ ರೀತಿಗಳೂ ಹೇಳಲ್ಪಟ್ಟಿವೆ. ಈ ಪುಸ್ತಕದಲ್ಲಿ ಅಪ್ಪ ಸಕ್ರೀ ೧೦೨ ಪುಟಗಳುಂಟು. ಕ್ರಯ ೧೫॥ ಆಣಿ. ಮಾಲ ಹಾಸಲು ೧೫ಆಣೆ.

—o—

Notices.

ನೋಟೀಸುಗಳು.

ಪರಸಗಡ ತಾಲೂಕ ಪೈಕಿ ಹೊಸೂರ ಶಾಲೆಯು ವಿಷಯವಾಗಿ ಬೆಳಗಾವಿಯ ಘ. ಅ. ಕಲೆಕ್ಟರರಾದ ಮೆ. ಫ್ಲೀಟ ಥೊರೆಗಳು ಬರದದ್ದು

" ನಾನು ಈ ವರ್ಷ ನೋಡಿದ ಶಾಲೆಗಳಲ್ಲಿ ಈ ಶಾಲೆಯು ವಿಶೇಷಾರ್ಥಗಳು ಎಲ್ಲಕ್ಕೂ ಹೆಚ್ಚಿಗೆ ಲಕ್ಷ್ಯದಲ್ಲಿ ಇದುವಂತೆ ಕೆಟ್ಟರೀತಿಯಿಂದ ಓದುತ್ತಾರೆ. ಇವರು ಓದುವಾಗ ಬಹಳ ದೊಡ್ಡ ಧ್ವನಿಯಿಂದ ಅತಿ ತ್ವರೆಯಾಗಿ ವಿರಾಮಚಿನ್ನೆಗಳಿಗೂ ಅರ್ಥಕ್ಕೂ ಲಕ್ಷ್ಯ ಕೊಡದೆ ಓದುತ್ತಾರೆ. ಯುರೋಪಿಯನ್ ಅಧಿಕಾರಸ್ಥರು ಈ ಪ್ರಕಾರದ ದೇಶ ಭಾಷೆಯ ಶಾಲೆಗಳನ್ನು ಪರೀಕ್ಷಿಸಲಿಕ್ಕೆ ಬಹಳ ಬೇಸರುತ್ತಾರೆ. ಈ ಪ್ರಕಾರ ಓದುವದರಿಂದ, ಯಾವಸೊಂದು ವಾಕ್ಯವನ್ನು ಒಮ್ಮೆ ಶುದ್ಧ ಕೂಡಲೆ ಅದರ ಅರ್ಥವು ಹುಡುಗರಿಗೆ ಎಷ್ಟು ಮಾತ್ರವೂ ತಿಳಿಯುವುದಿಲ್ಲ. ಈ ರೀತಿಯಿಂದ ಓದುತ್ತ ಸಾಗಿದ ಹುಡುಗನು ಕೆಲವೊಂದು ವಾಕ್ಯವನ್ನು ಮುಗಿಸಿದಕೂಡಲೆ ಅವನಿಗೆ ತಿಳ್ಳು ಪಾಡಲಿಕ್ಕೆ ಆಸ್ಪದವೇ ಆಗುವದಿಲ್ಲ. ಯ

ಕಂಡರೆ " ನಿಲ್ಲು " ಎಂಬ ಶಬ್ದವನ್ನು ಉಚ್ಚರಿಸುವಷ್ಟರೊಳಗೆ ಅವನು ಮುಂಯಿನ ವಾಕ್ಯವನ್ನು ಅರ್ಥಮಾರ್ಥ ಓದಿ ಹೋಗಿರುತ್ತಾನೆ. ಇಷ್ಟೇ ಅಲ್ಲ, ಒಬ್ಬ ಹುಡುಗನು ನಿಂತ ನೀರಿನಲ್ಲಿ ಮುಂಯಿನ ಹುಡುಗನು ಓದಲಿಕ್ಕೆ ಆರಂಭ ಮಾಡಿ ಆಯೇ ಪ್ರಕಾರ ಓದುತ್ತ ಸಾಗುತ್ತಾನೆ; ಹಿಂಪಕ್ಕೆ ಹೋಗಿ ವಾಕ್ಯದ ಆರಂಭದಿಂದ ಓದುವ ವಿಚಾರವು ಅವನ ಮನಸಿನಲ್ಲಿ ಎಷ್ಟುಮಾತ್ರವೂ ಬರುವುದಿಲ್ಲ. ದೇಶಭಾಷೆಯ ಶಾಲೆಗಳ ಶಿಕ್ಷಣದಲ್ಲಿ ಕಂಡು ಬರುವ ದೊಡ್ಡ ಸೊಡ್ಡ ದೋಷಗಳಲ್ಲಿ ಇದು ಹಿಂದಾಗಿರುತ್ತದೆ. ಈ ದೋಷವು ಬಹುತರ ಯಾವತ್ತು ಶಾಲೆಗಳಲ್ಲಿ ದೃಷ್ಟಿಗೆ ಬೀಳುತ್ತದೆ. ಇದನ್ನು ತಿದ್ದಲಿಕ್ಕೆ ಡೆಪ್ಯುಟೀ ಇನ್‌ಸ್ಪೆಕ್ಟರರಿಗೆ ಹುಕಾವು ಪ್ರಾಪ್ತಿಸಲಿಕ್ಕೆ ಬೇಕೆಂದು ನನಗೆ ತೋರುತ್ತದೆ. ನಮಾಧಾನದಿಂದ ಕೆಳಗಿನ ಸ್ವರದಲ್ಲಿ ಸಾವಕಾಶವಾಗಿ, ಅರ್ಥಕ್ಕೂ, ಸ್ವರಕ್ಕೂ, ವಿರಾಮಕ್ಕೂ ಲಕ್ಷ್ಯಕೊಟ್ಟು ಓದಿ, ವಾಕ್ಯದ ಕಡೆಯಲ್ಲಿ ಸಕ್ಕ ಮಟ್ಟಿಗೆ ನಿಲ್ಲಲಿಕ್ಕೆ ಹುಡುಗರಿಗೆ ಕಲಿಸುವಬಗ್ಗೆ ಯಾವತ್ತು ಮಾಸ್ತರ ಜನರ ಮೇಲೆ ಡೆಪ್ಯುಟೀ ಇನ್‌ಸ್ಪೆಕ್ಟರರು ಸಕ್ತಿಯನ್ನು ನಡಿಸಲಿಕ್ಕೆ ಬೇಕು. ಈ ಪ್ರಕಾರ ಓದಲಾರದಂಥ ಹುಡುಗರು ಯಾವಪೊಂದು ಇಯತ್ತೆಯಲ್ಲಿ ಮಾಸಾಡರೆಂದು ಎಣಿಸಬಾರದು; ಮತ್ತೂ ಈಗಿನ ಪದ್ಧತಿಯಂತೆ ಮುಂಪೆ ಸಹ ಹುಡುಗರಿಗೆ ಓದ ಗೊಡವಂಥ ಮಾಸ್ತರನು ಲಾಯಿಕನಾದ ಮಾಸ್ತರನೆಂದು ಎಣಿಸಬಾರದು."

ನಂಬರು ೪೭೨೫

ಬೆಳಗಾವಿ. ತಾ. ೭ನೇ ಮಾರ್ಚ ೧೮೮೧.

ಡೆಪ್ಯುಟೀ ಇನ್‌ಸ್ಪೆಕ್ಟರ ಜನರ ಕಡೆಗೆ ತಹಿವಾಳಿಗಾಗಿ ಸರ

ಈ ಅಭಿಪ್ರಾಯದ ನಕಲು ಕಳುಹಲ್ಪಟ್ಟಿದೆ. ಫ್ಲೀಟ್ ಸಾಹೇ ಬರ ಕಡೆಯ ವಾಕ್ಯದಂತೆ ಪಂಪಾಟು ಇಡತಕ್ಕದ್ದು. ಸದರೀ ಅಭೀಪ್ರಾಯವು ಪುಸ್ತಕ, ಕೈ ಬರಹದ ಕಾಗದ, ಇವೆರಡುಗಳ ವಾಚನಕ್ಕೂ ಸಂಬಂಧಿಸುತ್ತದೆ. ಪುಸ್ತಕ, ಕೈ ಬರಹದ ಕಾಗದಗಳ ವಾಚನ ವಲ್ಲದೆ, ಹುಡುಗರ ಅಕ್ಷರ, ಬಾಯಿಲೆಕ್ಕ, ಇವುಗಳಿಗೂ ಸದರೀ ಕಡೆಯ ವಾಕ್ಯವು ಸಂಬಂಧಿಸುತ್ತದೆ. ಇವು ಮೂರು ಜನರಿಗೆ ಜೇಕಾಗದ ಮುಖ್ಯವಿಷಯಗಳುಂಟು. ಇವುಗಳಲ್ಲಿ ಚನ್ನಾಗಿ ಅಭ್ಯಾಸಿಸಿದ ಹೊರ್ತು ಯಾವ ಹುಡುಗನನ್ನೂ ಇಯತ್ತೆಗಳಲ್ಲಿ ಪಾಸುಮಾಡಲಾಗದು.

[signed] W. A. Russell.
ಇ. ಇನ್‌ಸ್ಪೆಕ್ಟರ ದ. ಭಾಗ.

—o—

ಸರಕ್ಯುಲರ ನಂಬರು. ೨೬೬೭

ಅಜಂ ಥಾರವಾಡ ಜಿಲ್ಹೇಯೊಳಗಿನ ಸ್ಕೂಲಮಾಸ್ತರರಿಗೆ ಮೇಹಬಾನ ಎಜ್ಯುಕೇಶನಲ್ ಇನಸ್ಪೇಕ್ಟರ ಸಾ. ಬಾಹಾದ್ದುರ ದಕ್ಷಣಭಾಗ ಇವರ ಹುಕ್ಕುಮಿನಿಂದ ತಿಳಿಸುವದೇನಂದರೆ ಯಾವ ಹುಡುಗರು ಬಿಲಟ್ಟಿನ ಕಾಗದಗಳನ್ನು ಮತ್ತು ತಂಮು ಕ್ಲಾಸ ಪುಸ್ತಕಗಳಂದು ಪಿರಾಮು ಚಿನ್ಹಗಳ ಕಡಿಗೆ ಲಕ್ಷ್ಯ ಕೊಟ್ಟು ಅರ್ಥ ತಿಳಕೊಂಡು ಚನಾಗಿ ಒದಲಿಕ್ಕಿಲ್ಲ, ಹಾಗೂ ಅಕ್ಷರ ಚಂನಾಗಿ ಬರಿಯಲಿಕ್ಕಿಲ್ಲ, ಪ ಯಾರಿಗೆ ಬಾಯಿಲೆಕ್ಕ ಬರಲಿಕ್ಕಿಲ್ಲ ಇಂಥಾ ಹುಡುಗರು ಈ ವಿಷಯಗಳಲ್ಲಿ ಸಾವಾಸಾಸಾಗಿ ಬಾಕೀ ವಿಷಯಗಳಲ್ಲಿ ಪಾಸಾದಾಗ್ಯೂ ಅವರು ಪೂರಾ ಪಾಸಾದಂತೆ ತಿಳಿಯಲಿಕ್ಕಿಲ್ಲ. ಕಾರಣ ಈ ವಿಷಯಗಳಕಡಿ

ಗೆ ಮಾಸ್ತರರು ಚಂನಾಗಿ ಲಕ್ಷಕೊಡಬೇಕು. ತಾ. ೧೨|೩|೧೯೦೧

S. K. Rodda.
ಡಿ. ಎ. ಇ. ಜಿ. ಧಾರವಾಡ

—೦—

ಬಕ್ಷೀಸು ಕೊಡುವ ಸಮಾರಂಭವು.

ಹೋದ ತಿಂಗಳ ೨೪ನೇ ತಾರೀಖಿನ ದಿವಸ, ಸಾಯಂಕಾಲದ ೫½ ಘಂಟೆಗೆ ಮುಗಟಖಾನ ಹುಬ್ಬಳ್ಳಿಯ ಸಾಲಿಯಲ್ಲಿ, ಈ ವರ್ಷದ ವಾರ್ಷಿಕಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಇನಾಮು ಹಂಚುವ ಸಮಾರಂಭವಾಯಿತು. ಈ ಸಮಾರಂಭಕ್ಕೆ ಮೆ. ಟಿ. ಡಿ. ಮೇಕಂಜಿ ಸಾಹೇಬ ಬರುವಾಡ್ದೂರ, ಕಲೆಕ್ಟರ ಜಿ. ಬೆಳಗಾವ; ಮೆ. ಕರ್ನಲಗುಡ್ಡ ಸ್ಪೆಲೋ ಸಾಹೇಬ ಬಾಹದ್ದೂರ; ಎಗ್‌ರಿಕ್ಲ್ಯೂಟಿವ ಇಂಜಿನೇರ; ಹಾಗೂ ರಾವಸಾಹೇಬ ಕಲ್ಯಾಣ ಶೇತಾರಾಮ ಬಿತ್ರೇ ಮಾಮುಲೇದಾರ ತಾ. ಸಂಪಗಾಂವ; ಮುಖ್ಯ ಸಾಲಿಯ ಕಮಿಟಿದಾರರೂ, ಶೆಟ್ಟಿಸಾವಕಾರ ಮುಂತಾದ ಪೌರಜನರೂ, ಬಂದಿದ್ದರು. ಅಧ್ಯಕ್ಷಸ್ಥಾನವನು ಮೆ. ಕಲೆಕ್ಟರ ಸಾಹೇಬರವರು ಅಲಂಕರಿಸಿದ್ದರು. ಸಾಲಿಯ ಕಮಿಟಿದಾರರು ತಮ್ಮ ಸ್ವಂತ ಖರ್ಚಿನಿಂದ ೩೦ ಪುಸ್ತಕಗಳನ್ನು ತಂದಿದ್ದರು. ಸರಕಾರದಿಂದ ೭ ಪುಸ್ತಕಗಳು ಬಂದಿದ್ದವು ಅಂತೂ ೩೭ ಪುಸ್ತಕಗಳು, ಪಾಸಾದ ೩೭ ಹುಡುಗರಿಗೆ ಮೆ. ಕಲೆಕ್ಟರ ಸಾಹೇಬರವರ ಕೈಯಿಂದ ಹಂಚಲ್ಪಟ್ಟವು. ಈ ಥೋರೆಗಳವರ ಲಕ್ಷವು ವಿದ್ಯಾಭಿವೃದ್ಧಿಯಕಡೆಗೆ ವಿಶೇಷವಿದೆ. ಇವರು ಈ ಸಾಲಿಯು ಇಂಗ್ಲಿಶ ವರ್ಗದ ವಿದ್ಯಾರ್ಥಿಗಳ ಪರೀಕ್ಷೆಯನ್ನು ತೆಗೆದುಕೊಂಡು ಅವರು ಮಾಡಿದ ಅಭ್ಯಾಸದಿಂದ ಬಹಳ ಸಂತುಷ್ಟರಾಗಿ ಹ್ಯಾಜರ್ಡ ಬುಕ್ಕಿನಲ್ಲಿ ಉತ್ತಮ ಲೇಖವನ್ನು ಬರೆದದ್ದಲ್ಲದೆ ಯಾ

ಪತ್ರ ವಿದ್ಯಾರ್ಥಿಗಳಿಗೆ ಮಿತಾಯಿ ಹಂಚುವದಕ್ಕಾಗಿ ಯು
ಡು ರೂಪಾಯಿಗಳನ್ನು ಕೊಟ್ಟು ಸಭೆ ವಿಸರ್ಜನ ಮಾಡಿ, ಒ
ಹಳ ಸಂಭ್ರಮದಿಂದ ಹೊರಟು ಹೋದರು.

ಇದರಂತೆ ದೊಡ್ಡದೊಡ್ಡ ಕಾವುದಾರರು ಉತ್ತೇಜನ ಕೊ
ಡುತ್ತ ಹೋದಲ್ಲಿ ಸಾಲಿಗಳಸ್ಥಿತಿಯು ಸುಧಾರಿಸುವದು. ಶಾ. ಶ
ಮೂರ್ಚ ೧೮೮೧ ಇಸವಿ.

Raoj B. Karandikar
ಯು. ಎ. ಇ. ಜಿ. ಬೆಳಗಾವ.

—೦—

Death of Sambhaji.
ಸಂಭಾಜೀ ರಾಜನ ವಧ. ಸನ್ ೧೬೮೯

೩೬ನೇ ಪುಟದಿಂದ ಮುಂದಕ್ಕೆ ಸಾಗಿದ್ದು.

ಸಾವಿತ್ರ ತಾಯಿಯ ಸಂತೋಷಕ್ಕಾಗಿ ವನವಾಸಕ್ಕೆ ಹೋ
ದಂಥ ದಾಶರಥೀ ರಾಮನ ಭಕ್ತನಾದ ರಾಮದಾಸ ಸ್ವಾ
ಮಿಯ ಶಿಷ್ಯ ನೆನಿಸಿಕೊಳ್ಳುವ ಶಿವಾಜಿಯ ಮಗನಾದ ಈ
ಸಂಭಾಜೀಯು, ಪ್ರಪಂಥ ವರ್ತಮಾನದಿಂದ ನೋಡುವ್ರಿರ
ಲಾಗಿ ಸೊಯಿರಾಬಾಯಿಯನ್ನು ಸಂತೋಷ ಪಡಿಸತಕ್ಕ
ದ್ದು. ಅದಲ್ಲದೆ ಅವಳನ್ನು ಹೀಗೆ ಫಜೀತಿ ಮಾಡ
ಬೇಕೇ? ಅಹಹ! ಹಿಂಸೆ ಎಂಬುವದೇ ಮಹಾಪಾಪ,
ಅದರೊಳಗೆ ಆಕೆಯು ಅಬಲಾ, ಹಾಗು ಅವನ ಪ್ರತ್ಯ
ಕ್ಷ ಸಾವಿತ್ರ ತಾಯಿ ಅದಮೇಲೆ ಈ ವಿಷಕ್ಕೆ ಸರಿ
ಯಾದದ್ದು ಮತ್ತೊಬ್ಬರುಂಟೆ? ಆದರೆ ಜಮತ್ಕಾರ ನೋ
ಡಿ ದೇವರು ದೂರಿಲ್ಲ. ಅವನು ಇಂಥ ಪಾಪವನ್ನು
ಮಾಡಿದವರಿಗೆ ತಕ್ಕ ಶಿಕ್ಷೆ ಮಾಡದೆ ಇರುವನೇ? ಇಂ

ಘೋರ ಕೃತ್ಯಕ್ಕೆ ಒಪ್ಪುವ ಹಾಗೆ ದೇವರು ಅವನಿಗೆ
ಶಾಸನ ಮಾಡಿದನು. ಹಾಗೂ ಅದನ್ನು ಇಡಲೋ
ದಲ್ಲಿಯೇ ಮಾಡಿದನು. ಯಾಕಂದರೆ. ಅದನ್ನು ನೋಡಿ
ಜನರ ಮನಸ್ಸಿನಲ್ಲಿ ಭೀತಿ ಉಳಿಯಬೇಕು. ಆ ಶಿಕ್ಷೆಯು
ಯಾವದೆಂದರೆ: — ದಿಲ್ಲಿಯ ಪಾತಶಹನಾದ ಅವರಂಗ
ಜೇಬನು ದಕ್ಷಿಣ ದಿಕ್ಕಿನ ರಾಜ್ಯ ಸಂಪಾದಿಸುವ ಉದ್ದೇಶ್ಯ
ದಿಂದ ಸೈನ್ಯ ಸಮೇತವಾಗಿ ಇತ್ತಕಡೆಗೆ ಹಿಂದಿರ ಹಿಂಬೊಂದು ಮ್ರಾಂ
ತರಾಳನ್ನು ಜಯಿಸುತ್ತ ನಡೆದನು. ಆವಾಗ್ಗೆ ಸಂಭಾಜಿ
ಯು ತನ್ನ ಪ್ರಿಯ ಪ್ರಧಾನನಕೂಡ ನಾಚು, ರಂಗು, ಆ
ಮಲು ಇವ್ರಗಳಲ್ಲಿ ಏಮಗ್ನ ನಾಗಿದ್ದನು. ತನ್ನ ಮೇಲೆ
ಅಥವಾ ತನ್ನ ರಾಜ್ಯದ ಮೇಲೆ ಇಂಥ ಆಪತ್ತು ಬಂದ
ದೆಂಬುವದು ಆಪ್ರಾಣಿಯ ಮನಸ್ಸಿನಲ್ಲಿ ಸಹ ಬರಲಿಲ್ಲ.
ಅವರಂಗ ಜೇಬನ ಸರದಾರರು ಯಾವಗಲೂ ಅವನ ತೋ
ಷಖಾನೆಯಲ್ಲಿಯೇ ಇರುತ್ತಿದ್ದರು. ಅವರಲ್ಲಿ ಒಬ್ಬ ತಕರೀಬ ಖಾ
ನನೆಂಬವನು ದೇಶವನ್ನು ಜಯಿಸುತ್ತ ಕೊಲ್ಹಾಪುರಕ್ಕೆ ಬಂ
ದನು. ಅವನಿಗೆ ಹೀಗೆ ತಿಳಿಯಿತಲ್ಲ — ಸಂಭಾಜಿಯು ಸ್ವ
ಲ್ಪ ಜನರನ್ನು ಸಂಗಡಲಿಟ್ಟುಕೊಂಡು ಸಂಗಮೇಶ್ವರದ
ಲ್ಲಿ ಎಥೇಚ್ಛ ಕ್ರೀಡಾ ಮಾಡುತ್ತಿದ್ದಾನೆ — ಆಮೇಲೆ ತಕರೀ
ಬ ಖಾನನ ತ್ವರೆ ಯಷ್ಟಿಂತ ಹೇಳಬೇಕು? ಅವನು ಅಂದನು —
ತನಗೂ ತಂನ ಸೈನ್ಯಕ್ಕೂ ಒಂಮೇಲೆ ಹಾರಿ ಹ್ರೋಗುವದ
ಕ್ಕೆ ರೆಕ್ಕೆಗಳು ಇರುತ್ತಿದ್ದರೆ ಬಹಳ ನೆಟ್ಟಗಾಗುತ್ತಿತ್ತು. ಆ
ಖಾನನು ತನ್ನ ಮಗನಾದ ಇಬಲಾಸ ಖಾನನನ್ನೂ ಕೇವಲ ಮೇ
ಲಾದ ಕುದುರೆ ಸವಾರರನ್ನೂ ತೆಗೆದು ಕೊಂಡು ಒಂಮೇ
ಲೆ ಸಂಗಮೇಶ್ವರದ ಬಳಿಯಲ್ಲಿ ಬಂದನು. ಈ ಸಂಗತಿಯ

ನ್ನು ಸಂಭಾಜಿಯ ಕಡೆಯ ಜನರು ಕೇಳಿದ, ಕೂಡಲೆ ತ
ಮ್ಮ ಯಜಮಾನನ ಕಿವಿಗೆ ಹಾಕಿದರು. ಆ ವೇಳೆಯಲ್ಲಿ ಸಂ
ಭಾಜಿಯು ಮುನ್ಸೂಫ ಮಾನವೊಳಗೆ ಗುಂಗಾಗಿದ್ದ ಸುರೇಂಪ್ರ
ನಕ್ಕಿಂತ ತಾನು ಹೆಚ್ಚೆಂದು ಬಡ ಬಡಿಸುತ್ತಿದ್ದನು. ಈ ಪ
ರ್ಧಮಾನವನ್ನು ಹೇಳಿದಮನುಷ್ಯನಿಗೆ ಅಂದನಲ್ಲಾ -- ಛೀ, ದ
ಡ್ಡ, ಹೋಗು ಇಂಥ ಮೂರ್ಖತನದ ಮಾತು ಈ ಸಂಭಾ
ಜಿಯ ಮುಂದೆ ಹೇಳಬೇಡ. ಮುಸಲ್ಮಾನರಂದರೇನು?
ಅವರು ಇಲ್ಲಿಗೆ ಬರುವ ಬಿನಾತ ಏನು, ಇನ್ನು ಮುಂದೆ ಇಂ
ಥ ಮೂರ್ಖತನದ ಮಾತು ಆಡಿದರೆ ಮೂಗನ್ನೇ ಕೊಯಿ
ದೇನು. ಬಚ್ಚಿರೆ ಧೊರಿಯೆ? ಶತ್ರು ಸಂಹಾರಕ್ಕೆ ಬಂದ ನು
ಡ್ಡೀ ಹೇಳಿದವರ ಮೂಗು ಕೊಯ್ಯುವುದೇ? ಯೋಗ್ಯ? ಸಾ
ಯುವವನಿಗೆ ಒಳ್ಳೆಪಥ ತೆಗೆದು ಕೊಂಬುವ ಇಚ್ಛೆಯು ಹಾ
ಗ ಹುಟ್ಟಿತು? ಈ ಮೂರ್ಖತನದಿಂದ ಆ ಮನುಷ್ಯನ. (ಹೇರಿನ)
ಮೂಗು ಉಳಿಯಿತು. ಆದರೆ ರಾಜನ ಮೂಗು ಮಾತ್ರ ಕೊ
ಯಲ್ಪಟ್ಟಿತು. ಈ ಎರಡೂ ಮೂಗುಗಳನ್ನು ಸರಿಮಾಡಿ ನೋ
ಡಲಾಗಿ ಹೇರಿನ ಮೂಗು ಅಂದರೆ ಹಿಟ್ಟಿನ ಮೂಗು ರಾ
ಜನ ಮೂಗು ಅಂದರೆ ಎಲ್ಲ ದೇಶದ ಮೂಗು.

ತಕರೀಬಖಾನನು ತೀರ ಸಮೀಪಕ್ಕೆ ಬಂದ ಮೇಲೆ
ಸಂಭಾಜಿಗೆ ಸ್ವಲ್ಪ ಎಚ್ಚರ ಹುಟ್ಟಲಾರಂಭಿಸಿತು. ಆದರೆ
ಅಷ್ಟರಲ್ಲಿ ಆ ತಕರೀಬಖಾನನ ಮಗನು ಅರ್ಧಮಿಸುತ್ತ ಅರ
ಮನೆಯನ್ನು ಹೊಕ್ಕು ಅಲ್ಲಿ ಇರುವ ಎಷ್ಟೋ ಜನರನ್ನು
ತಾರಹೊಡೆದನು. ಅಷ್ಟರಲ್ಲಿ ತಕರೀಬಖಾನನು ಅಲ್ಲಿಗೆ ಬಂ
ದನು. ಆಗ್ಗೆ ಎಲ್ಲರು ಓಡಿ ಹೋಗಿ ಕಲುಷನ ತಿಪಾಯ
ರಲ್ಲಿ ಕೆಲವರು ಮಾತ್ರ ಉಳಿದರು. ಆವರು ಸಂಭಾಜಿಯ ಕ

ಕ್ಷಣಕ್ಕಾಗಿ ಮುಸಲ್ಮಾನರ ಸಂಗಡ ಕಾದ ಹತ್ತಿದರು. ಕಲುಷನಿಗೆ ಬಾಣ ತಾಕಲಾಗಿ ಅವನ ಜನರು ಓಡಿದರು. ಆ ಪೀಲೆ ಮುಹಾರಾಜನ ಮೇಲೆಯೇ ಪ್ರಸಂಗ ಬಂತು. ಆಗ ಅವನು ಎಚ್ಚರಿದು ಪೇಷ ಬದಲಿಸಿ ಒಡಯತ್ನ ಮಾಡಿದನು ಆದರೆ ಇದಕ್ಕೆ ಸ್ವಲ್ಪ ತಪಪಾದ್ದರಿಂದ ತಪ್ಪಿಸಿ ಹೋಗೋಣವಾಗದೆ ತಕರೀಬಖಾನನ ಕೈಯಲ್ಲಿ ಸಿಕ್ಕನು.

ಈ ಸಂಗತಿಯನ್ನು ಪರ್ಶಿಯಾಗ್ಗೆ ಗ್ರಾಂಟಡಫ ಸಾಹೇಬನು ತಂದು ಇತಿಹಾಸದಲ್ಲಿ ಹೇಳಿತಾರ್ತಲ್ಲ —— ಅವನ ಮೈಮೇಲೆ ಅಮೋಲಿಕ ಆಭರಣಗಳಿದ್ದವು. ಅವುಗಳನ್ನು ಲೋಭದಿಂದ ಬಿಡಲಿಲ್ಲ ಆಪಡಿದ ಖೂನ ಸಿಕ್ಕ ತಾತ್ಕಾಲಿಕ್ಕೆ ಹಿಂಡಿಯಲ್ಲಟ್ಟನು. ಇದು ಯಾವ ಆಧಾರದಮೇಲಿಂದ ಹೇಳಿದ್ದಾನೆಂಬುವದು ತಿಳಿಯಬರಲಿಲ್ಲ. ಒಂದು ವೇಳೆ ನಿಜವಾಗಿದ್ದರೂ ಇರಬಹುದು.

ಸಂಭಾಜಿಯು ತಕರೀಬಖಾನನ ಕೈಯಲ್ಲಿ ಸಿಕ್ಕನು. ಕೂಡಲೆ ಅವನಪ್ರೀಯ ಪ್ರಧಾನಿಯಾದ ಕಲುಷನೂ ಹಿಡಿಯಲ್ಪಟ್ಟನು. ತಕರೀಬಖಾನನಿಗೆ. ಬಹಳ ಆನಂದವಾಯಿತು. ಅವನು ತಾತ್ಕಾಲ ಈ ಸಂಗತಿಯನ್ನು ತುಳಾಪುರಕ್ಕೆ ಅವರಂಗಜೀಬನಿಗೆ ಹೇಳಿ ಕಳುಹಿಸಿದನು. ಅದಕ್ಕೆ ಅವನು ಹ್ರುಕುಮು ಕೊಟ್ಟನಲ್ಲ —— ಕೈದಿಯನ್ನು ತುಳಾಪುರಕ್ಕೆ ತರಬೇಕು. ಆ ಮೇರೀಗೆ ಸಂಭಾಜೀ, ಕಲುಷಾ ಹಾಗೂ ಅವರ ಕೂಡಾ ಸಿಕ್ಕ ೨೦, ೩೦ ಜನರನ್ನೂ ಒಂಟಿಯ ಮೇಲೆ ಕಟ್ಟಿ ಹಿಂದೆ ಬಜಂತ್ರಿ ಊದಿಸುತ್ತ ಮೆರಿಸುತ್ತ ತುಳಾಪುರಕ್ಕೆ ಔರಂಗಜೀಬನ ಲಷ್ಕರ ಠೊಳಗೆ ತಂದು ಬಂದೋಬಸ್ತಿನಿಂದ ಪ್ರತಿಬಂಧದಲ್ಲಿಟ್ಟಿರು.

ಆ ವೇಳೆಯಲ್ಲಿ ಅವರಂಗ ಜೇಬನ ಮುಸ್ಸದ್ದಿಯರು ಅ

ವರಿಗೆ ಹೀಗೆ ಹೇಳಿದರಲ್ಲ.— ಸಂಭಾಜಿಯು ಪ್ರಾಣ ಕೊಡಿ ಮೂಡದೆ ಅವನನ್ನು ಶರೆಯಲ್ಲಿಟ್ಟರೆ ಪ್ರಾಣದ ಭೀತಿ ಯಿಂದ ತಂನ ಎಲ್ಲ ಕೋಟೆಗಳನ್ನು ಸರಕಾರಕ್ಕೆ ಬಿಟ್ಟು ಕೊಡು ವನು. ಇದಕ್ಕೆ ಅವರಂಗ ಜೀಬನು ಒಡಂಬಟ್ಟು ಸಂಭಾ ಜಿಗೆ ಹೇಳಿ ಕಳುಹಿಸಿದನಲ್ಲ --- ನೀನು ಮುಸಲ್‌ಮಾನನಾದ ರೆ ನಿನ್ನ ಜೀವ ಉಳಿಯುವದು. ಇಲ್ಲದ್ದಿರೆ ಮರಣ ಕ್ರೊಂದುವಿ. ಈ ನಿರೋಪ ಕೇಳಿ ಹಾಗೂ ತನ್ನ ಸಂಕಟದ ವೇಳೆ ಲಕ್ಷಕ್ಕೆ ತಂ ದು ನಮ್ರತೆಯಿಂದ ಚಲೋಉತ್ತರ ಕೊಡಬೇಕಾಗಿತ್ತು. ಅಥವಾ ನುಮ್ಮಗೆ ಇರಬೇಕಾಗಿತ್ತು. ಹಾಗೆ ಮಾಡದೆ ಆ ಮೂರ್ಖನು ಅವ ಯ್ಯಾದ ಬಾಯಿಗೆ ಬಿಟ್ಟು ಅವರಂಗ ಜೀಬನಿಗೆ ಹೇಳಿಕಳುಹಿಸಿದ ನಲ್ಲ— ನೀನು ನಿಂನ ಮಗಳನ್ನು ನನಗೆ ಮದುವೆ ಮಾಡಿಕೊಟ್ಟರೆ ನಾನು ಮುಸಲ್‌ಮಾನನಾಗುವೆನು. ಇದಲ್ಲದೆ ಅವನ ಪೈಗಂ ಬರನಿಗಾದರೂ ಕಾರಣವಿಲ್ಲದೆ ಬೈಗಳ ಮಳೆ ಸುರಿದನು. ಈ ವರ್ತಮಾನವನ್ನು ಆ ಧರ್ಮಾಭಿಮಾನಿಯಾದ ಪಾತಶಹನು ಕೇ ಳಿದಕೂಡಲೆ ಅತಿ ಸಿಟ್ಟಾಗಿ ಅಪ್ಪಣೆ ಹೊರಡಿಸಿದನಲ್ಲ— ಆ ದುಷ್ಟ ಸಂಭಾಜಿಯನ್ನು ಧರ ಬಾಜಾರದೊಳಗೆ ತಂದು ಮೊದಲು ಕ ಬ್ಬಿಣದ ಬರೆಯಿಂದ ಕಣ್ಣುಗಳನ್ನು ಸುಟ್ಟು ನಾಲಿಗೆಯನ್ನು ಕೊಯ್ಸಿದು ತಲೆಹೊಡಿಯಬೇಕು. ಆಮೇರಿಗೆ ಶಿಕ್ಷೆಯು ಆ ಮಲನಲ್ಲ ಬಂತು. ಈ ಪ್ರಕಾರ ಫಜೀತಿಪಟ್ಟು ಸಂಭಾಜಿಯು ಮರಣಹೊಂದಿದನು.

ಈ ಶಾಸನ ಬಹಳ ಕ್ರೂರವಾದದ್ದು ಆದಾಗ್ಯೂ ಸಂಭಾಜಿಯು ತನ್ನ ತಾಯಿಗೆ ಮಾಡಿದ ಮಾನಭಂಗವನ್ನು ಶಿಕ್ಷಕ್ಕೆ ತಂದರೆ ದೇವರು ಕೇವಲ ನ್ಯಾಯ ಮಾಡಿದನು ಆ ನ್ಯಾಯ ಮಾಡಲಲ್ಲ ಎಂಬುವದು ಯಾರಿಗಾದರೂ ಹೋರ

ಹ್ಯನು. ಯಾವ ಕಣ್ಣಿಂದ ಸ್ವಮಾತೆಯ ವಧವನ್ನು ನೋ
ದನೋ ಹಾಗೂ ಸರ್ವ ಭೋಗ ರಾಜನ ಮಗಳ ಸೌಂ
ಯ್ಯದ ಅಭಿಲಾಷೆ ಮಾಡಿದನೋ ಆ ಕಣ್ಣುಗಳನ್ನು ಒಲೆ
ಯಿಂದ ಸುಟ್ಟದ್ದು ಯೋಗ್ಯವಾಯಿತು. ಮತ್ತು ಯಾವನಾಲ
ಯಿಂದ ಸ್ವಮಾತೆಗೆ ಹಾಗೂ ಭೂಮಿಯು ಪವಿತ್ರ ಪೈ
ಯಿರನಿಗೆ ಬೈಯಿಸಿದನೋ ಆ ನಾಲಿಗೆ ಕೊಯಿದರೇನು ಹೆ
ಚ್ಚಿನದಲ್ಲ. ಸರ್ವೇಷು ಗಾತ್ರೇಷು ಶಿರಪ್ರಧಾನವು ಎಂಬಂ
ತೆ ಸರ್ವ ಅವಯವಗಳಿಗೆ ಶ್ರೇಷ್ಠವಾದ ತಲೆ ಇದನ್ನು ಹೊ
ತೆಯು ಆ ನಾವಿತ್ರ ದೇಹದಿಂದ ಆಗತಕ್ಕ ಪಂಶ ಛೇದ ಮಾಡಿ
ದ್ದು ಯಥಾ ಯೋಗ್ಯವೇ ಆಯಿತು.. ಸಾರಾಂಶ ಸಂಭಾಜಿ
ಯು ತನ್ನ ಪಾಪಕ್ಕೆ ತಕ್ಕ ಫಲ ಅನುಭೋಗಿಸಿದನೆಂದು ನ
ಮಗೆ ಕಾಣುತ್ತದೆ.

ಈ ಮೇಲಿನ ಸಂಗತಿಯಿಂದ ಮನುಷ್ಯರಿಗೆ ತಮ್ಮ ದು
ರಾಚರಣದ ಫಲ ಹ್ಯಾಗೆ ಅನುಭೋಗಿಸ ಬೇಕಾಗುತ್ತದೆಂ
ಬುದು ಸ್ಪಷ್ಟವಾಗಿ ಧ್ಯಾನದಲ್ಲಿ ಬರುವದು. ಕೆಲವು ಗು
ರಾಚರಣಿಗಳು ಸುಖೋತ್ಪ ಭೋಗ ಮಾಡತ್ತಿರೆಂಬುವದು ಹಿಂ
ಸೆಯಿಂದು ಮೇಲೆ ದೃಷ್ಟಿಗೆ ಬಿಳುತ್ತಿದೆ. ಆದರೆ ಅದು ಅವರ ಕೆ
ಟ್ಟ ಆಚರಣೆಯ ಫಲವೆಂತ ತಿಳಿಯ ಲಾಗದು. ಯಾಕಂ
ದರೆ ಅಪರಾಧಿಗೆ ಗಲ್ಲಿಗೆ ಹಾಕೋಮುಂದೆ ಸೀ ಷದಾರ್ಥಗ
ಳನ್ನು ಎಥೇಚ್ಛ ತಿನಿಸುವ ಪದ್ಧತಿ ಕೆಲವು ದೇಶಗಳಲ್ಲಿ
ಯುಂಟು ಆದೇಮೇರಿಗೆ ದೇವರ ದಂಬಾರದಲ್ಲಾದರೂ ಈ ನ
ಡತೆ ಇರಲಕ್ಕಿಲೆಂದು ಹ್ಯಾಗೆ ತಿಳಿಬೇಕು. ಬೇವಿನ ಬೀಜ
ಹಾಕಿದರೆ ಮಾವಿನ ಫಲ ಆಗದು ಎಂಬಂತೆ– ಎಂದಾದರೂ
ಹಿಂದು ಜನರ ಕೆಟ್ಟನಡತೆಯ ಪರಿಣಾಮಗಳು ಕೆಡಕಾಗುವದೇ

ಹ್ರೋತ್ರ ಎಂದೂ ಬಿಳಿತ್ರಆಗಲಾರದು ಇದು ಶಿದ್ಧಾಂತವು

—o—

Correspondence.

ಪತ್ರ ವ್ಯವಹಾರವು.

ರಾ. ಸಾ. ಕನ್ನಡಶಾಲಾಪತ್ರಿಕದ ದಕ್ಷಣಭಾಗದ ಎಡಿಟರಸಂವ
ಸ್ಥಾನಕ್ಕೆ

ವಿ. ವಿ. ಕೆಳಗೆಬರಿದ ನಾಲ್ಕು ಪಂಗ್ತಿಗಳನು ತಂಪುಕಾಪಿಗೆ
ಕಳುಹಿಂಸಿದ್ದೇನೆ ಆಪ್ರಗಳಿಗೆ ಸಂಸ್ಥಾನದಿಂದ ಹ್ರೋರಡುವ ಬೆ
ಲೆಯುಳ್ಳ ಇದೇ ತಿಂಗಳ ಮುಫಪತ್ರಿಕೆಯಲ್ಲಿ ಸ್ವಲ್ಪ ಸ್ವಳ
ಕೊರಯೀತೆಂದು ಹೂರ್ಣ ಆಶಯುಳ್ಳವನಾಗಿದ್ದೇನೆ—

ಥಾರವಾಡ ಜಿಲ್ಲಾ ಹಾನಗಲ್ಲ ತಾಲುಕ ಪೈಕಿ ಆ
ಡೂರ ಎಂಬ ಗ್ರಾಮದೊಳಗೆ ನಾಮೂರು ೨೦ ಮಿಷಸದ ಕೆ
ಳಗೆ ಒಂದು ಚಿಮುತ್ಕಾರಪಾಯಿತು ಆದೇನಂದರೆ ಆಡೂರ,
ಕೊಡಿಯಲ್ಲಾಪೂರ ಈ ಎರ್ಡು ಗ್ರಾಮಗಳ ಹುಧ್ಯದಲ್ಲಿ
ಒಂದು ಕೆರಿಯು ಅದೆ ಅದರ ಕ್ಷೇತ್ರಫಲ ಅಜಮಾಸು ಪೂ
ರ್ವ ಪಶ್ಚಿಮ ಮೊಳವು ೮೦೦ ಉತ್ತರ ದಕ್ಷಣ ಮೊಳವು ೧೨೦೦
ಇರ್ದ್ದು ಅದರ ಭೂಮಿಯು ಸಪಾಟುಪಾಗಿದೆ ಇದರೊಳಗೆ
ನೀರು ಮಳ ೨೦೦ ಉದ್ದವು ೩೦ ಮಳ ಅಗಲವು ಈ ಕ್ಷೇತ್ರ
ರೊಳಗೆ ೧ ಮೊಳವು ತಗ್ಗಾಗಿ ನೀರು ನಿಂತಿತ್ತು ಅದು
ಈಗ ೨೦ ಮಿಷಸದ ಕೆಳಗೆ ಹಗಲು ೪ ಘಂಟೆಕ್ಕೆ ಉಳ್ಳಲಿಕ್ಕೆ
ಸುರವು ಆದದ್ದು ೩ ಮಿಷಸ ಒಂದೇ ಸವನೆ ಉಕ್ಕಿ ಪಶ್ಚಿಮ
ದಿಕ್ಕಿಗೆ ಸುಮಾರು ನಾಲ್ವತ್ತು ಮಳವು ಅಗಲವು ಅ
ರವತ್ತು ಮಳ ಉದ್ದವು ಈ ಪ್ರಕಾರ ನೀರು ೨ ಅಂ
ಗುಲ ತಗ್ಗಾಗಿ ಪೋಸಲಿದ್ದ ಜಾಗಾ ಬಿಟ್ಟು ಮುಂದಕ್ಕೆ

ಬಂದಿತ್ತು ಅಲ್ಲಿಂದ ಊರೊಳಗಿನ ಗ್ರಾಮಸ್ಥರು ಕೆಲವು ರೈತರು ಕೂಡಿ ಆ ಸ್ಥಳಕ್ಕೆ ಬಂದು ವಿಧಾನೋಕ್ತ ಪೂಜೆಯಂನು ಮಾಪಲಾಗಿ • ಮಾರನೇ ದಿವಸವೇ ಮುದಲಿನಂತೆ ನೀರು ಹಾನಿದ್ದ ಸ್ಥಳದಲ್ಲಿ ನಿಂತದ್ದು ನೋಡಿದೆನು. ಈ ಚಮತ್ಕೃತಿಯು ಹೇಗೆಯಿಂದಾಗಿರಬಹುದೆಂದು ಯೋಚಿಸಬೇಕೆಂದರೆ ಆ ದಿವಸ ವಿಶೇಷವಾಗಿ ಹೊಳೆಯು ಇದ್ದಿಲ್ಲ. ಪ್ರವಾಹವು ಕೆರೆಯ ಸುತ್ತಲೂ ನೀರು ಸ್ವಲ್ಪವಾದರೂ ಉಕ್ಕಿಸಿ ಶುದ್ಧ ಪಶ್ಚಿಮದಿಕ್ಕಿಗೆ ಉಕ್ಕಿತು ಇಂಜೀನಿಯರ್ ಪ್ರಕಾರ ಈ ಕೆರೆಯು ಸಿಳ ಆವರ್ತ ಉಕ್ಕಿರುತ್ತದೆಂದು ಇಲ್ಲಿಯ ಜನರು ಹೇಳುತ್ತಾರೆ. ಈ ಚಮತ್ಕೃತಿಯು ಯಾತರಿಂದ ಉಂಟಾಗಿದ್ದೀತೆಂದು ನಿಶ್ಚಯಿಸುವ ಶಕ್ತಿ ನನಗೆ ಇಲ್ಲದಿರಿಂದ ಮುಂಬಯಿ ಪತ್ರಿಕೆಯ ದ್ವಾರದಿಂದ ಪ್ರಸಿದ್ಧ ಮಾಡಬೇಕೆಂದು ಶ್ರುತ ಪಡಿಸಿದ್ದೇನೆ. ಐಯ್ಯಾ! ನಂನ ಮಿತ್ರರೇ ಯಾರಾದರು ಇಂಥಾ ಚಮತ್ಕೃತಿಯಂನು ನೋಡಿದವರಿದ್ದರೆ ತಂವು ಅಭಿಪ್ರಾಯ ಹ್ಯಾಗೆಎಂಬುವನನ್ನು ಇದೇ ಮುಖಪತ್ರಿಕೆಯ ದ್ವಾರದಿಂದ ತಿಳಿಸಿ ನನಗೆ ಸಮಾಧಾನ ಪಡಿಸಬೇಕೆಂದು ಬಯಿಸುತ್ತೇನೆ.

ಎಂಟರ ಮಹರಾಯರೆ ತಪ್ಪಿಗೆ ಶ್ರಮವಾಗಿರಬಹುದು ಕ್ಷೇಮ ಹೊಂದಬೇಕು. ತಾ. ೫ನೇ ಜೂಲೈ ೧೮೮೯.

ಅಂಗೂಜಿ ಭಿಕ್ಕಾಜಿ ತೇರಗಾಂವ ಸ್ಕೂಲಮಾಸ್ತರ ಆಡೂರ

—೦—

ಕಂನಡ ತಾಲಾಪತ್ರಿಕೆ ಕರ್ತರ ಸಂನಿಧಿಗೆ—

ವಿ. ಕೆಳಗೆ ಬರೆದ ಉಪಯುಕ್ತ ಸೂಚನೆಯಂನು ಭಾವಿಸಿ ಪ್ರಸಿದ್ಧಿಸುವಿರೆಂದು ತುಂಬಾ ಆಶೆಯುಂಟು.

ಉಪಯುಕ್ತ ಸೂಚನೆಯು.

ಮೂರ್ಪಡಲ್ಲಿ ದಕ್ಷಿಣ ಭಾಗದ ದೇಶಭಾಷೆಯು ಸರಕಾರ ಸಾಲೆಗಳಲ್ಲಿ, ಅಂಕೆಗಳೂ, ಪೊಗ್ಗೆಗಳೂ, ಮುಂತಾದ ಅಂಕಲಿಪಿಯ ವಿಷಯಗಳೂ, ವಿಶೇಷವಾಗಿ ಓದ ಬರಹಾ ಸಹಾ, ಮರಾಠಾರಾಷ್ಟ್ರ ಭಾಷೆಯಲ್ಲಿಯೇ ಕಲಿಸುತಿದ್ದರು, ಆದರೆ ಇತ್ತೀಚಿಗೆ ಯಾವ ಯಾವ ದೇಶದಲ್ಲಿ, ಯಾವ ಯಾವ ಭಾಷೆಯು ನಡಿಯುವವೋ ಅದೇ ಭಾಷೆಯು ಸಾಲೆಗಳಲ್ಲಿ ಕಲಿಸಬೇಕೆಂಬದಾಗಿ, ಸರಕಾರ ತರಾವ ಆಜ್ಞಾಪ್ರಯುಕ್ತ, ಅದರಂತೆ ದಕ್ಷಿಣಭಾಗದ ಎಲ್ಲಾ ಸಾಲೆಗಳಲ್ಲಿ ಕಂನಡ ಅಭ್ಯಾಸ ನಡಿಯಲಾರಂಭಿಸಿತು. ಆ ವಲಿಲಕಾ ಸರಕಾರದವರು ಸಾಲೆಉಪಯೋಗಕ್ಕಾಗಿರುವ, ಮರಾಠ್ರ ಪುಸ್ತಕಗಳಲ್ಲಿ ಅಂಕಲಿಪಿ ಹೊರ್ತು, ಕಂನಡಿನಲ್ಲಿ ಭಾಷಾಂತರಮಾಡಲ್ಪಟ್ಟು, ಅಭ್ಯಾಸ ನಡಿಯು ತೊಡಗಿತು. ಪರಂತು ಅಂಕಲಿಪಿಯು ಭಾಷಾಂತರ ವಿಷಯವಾಗಿ ಇಂನುವರಿಗೂ ಸರಕಾರದ್ಯಪ್ಪಿಯು ಏನು ಕಾರಣ ಬಿಳಲಿಲ್ಲವೋ, ತಿಳಿಯದು,—

ಇತ್ತೀಚಿಗೆ ಹೊಸಎತ್ತೆ ತರಾವು ಆದರಲ್ಲಿ ಯಂತೂ, ಮೊದಲನೇ ಎತ್ತೆಡಲ್ಲಿನೇ, ಅಂಕಲಿಪಿ ಸಂಪೂರ್ಣ ಅಭ್ಯಾಸವಾಗಬೇಕು. ಎಂಬ ತರಾವ ಇನ್ನಕಾರಣ ಮಾಸ್ತರರು ತಮ್ಮ ತಮ್ಮ ತಿಳುವಳಿಕೆ ಪ್ರಕಾರ ಮರಾಠಾರಾಷ್ಟ್ರ ಅಂಕಲಿಪಿಯ ಕಂನಡಿನಲ್ಲಿ ಭಾಷಾಂತರಿಸಿ, ಅಭ್ಯಾಸ ನಡಿಸಿರುತ್ತಾರೆಂದು, ಪೂರ್ಣವಾಗಿ ಮನಸಿನಲ್ಲಿ ಖಾತ್ರಿಯಾಗುತ್ತದೆ.

ಇದರಿಂದ ದಂಹಿಬ್ಬು ಮಾಸ್ತರನ ಭಾಷಾಂತರ ಬೇರೆಬೇರೆ ರೀತಿಯಾಗಿ, ಮಂದಿ ಸಾಲೆಯಲ್ಲಿ ಓದಿಸುವರೀತಿಯು, ಮಂದಿ

ಕಾಲು ಕಾಲು, ಎರಡುಕಾಲುವರಿ, ಅಂತಾ ನಡಥಿದ್ದರೆ ಮು
ತ್ತೊಂದುನಾಲೆಯಲ್ಲಿ ಇದು ಮಾವು ಮತ್ತು ತಿಎರಡು ಮಾ
ಲು ಅರ್ಥಾ, ಇವರಂತೆ ಅರ್ಥಾಕ್ಕೆ ವರಿ, ಅಥವಾ ಇರ್ಮಾ
ಲು, ಈ ಪ್ರಕಾರ ಮುಕ್ಕಾಲು, ಐಕಾಲು ಮಂದುವರಿ, ಎರ
ಡುವರಿ, ಮೂರುವರಿ, ಮುಂತಾಯಪ್ರಯೋಗಳು ದರವಾದು ನಾಲೆ
ಯ ಮಾಸ್ತರರೂ ಬೇರೆಬೇರೆ ರೀತಿಯಾಗಿ ಭಾಷಾಂತರಿಸಿ
ಓದಿಸುವ ಅಭ್ಯಾಸ ನಡತಿರುತ್ತಾರೆಂಬದಾಗಿ ತೋರುತ್ತದೆ.

ಇದರಿಂದ ಒಂದು ನಾಲೆಇಂದ ಹಿಬ್ಬ ವಿದ್ಯಾರ್ಥಿಯು
ಮತ್ತೊಂದು ನಾಲೆಗೆ ಬಂದರೆ ಅಲ್ಲಿ ಮತ್ತು ಇಲ್ಲಿ ನಡ
ಪುವ ರೀತಿಯು ಬೇರೆ ಬೇರೆ ಯಾಗುವದರಿಂದ ತೊಂದರೆ
ಗುಟಾಗುತ್ತದೆ. ಇದು ಮಾಸ್ತರ ಜನರು ಪೂರ್ಣವಾಗಿ ವಿ
ಚಾರಮಾಡಿರಬೇಕೆಂಬದು ಇವರ ಈ ಬಗ್ಗೆ ಮರಾತಿ ಅಂಕಲಿಪಿ ಭಾ
ಷಾಂತರವು ಕನಪಿಸಲ್ಲಿ ಅವಶ್ಯ ಇಂತಕ್ಕದೆಂದು ಯೋಗ್ಯ
ವಾಗಿ ತೋರುತ್ತದೆ. ಇವರ ಕಂಡತ ಪ್ರಸಾರಕ್ಕಾಗಿಯೆ ಕಮಿತಿ
ಯವರಿಂದ ಈ ಉಪಯುಕ್ತ ನಿರ್ಣಯನೆಯನ್ನು ಮಾನ್ಯಮಾಡ
ಲ್ಪಡುವದೆಂದು ಪೂರ್ಣವಾಗಿ ಅಪೇಕ್ಷಿಸುತ್ತೇನೆ.

ತಾ ೨೬।೩।೧೯೧೩.

ಶಂಭುನಾಥ ಬಾಬುನಾಥ ಜೊಡ ಬ್ಯಾಂಚಸ್ಕೂಲ,
ಮಾಸ್ತರ ಗದಗ ತಾ, ಗದಗ ಜಿಲ್ಲಾ ಧಾರವಾಡ.

—o—

ರಾ. ರಾ. ಕನ್ನಡ ಶಾಲಾಪತ್ರಕರ್ತರ ಸನ್ನಿಧಿಗೆ.

ವಿ. ವಿ. ಕೆಳಗೆ ಬರೆದ ಮನೋಹರವಾದ ಸಂಗತಿಯನ್ನು ಕ
ರಿತು ತಮ್ಮ ಅಂದಸಾದ ಪತ್ರದಲ್ಲಿ ಮುದ್ರಿಸಬೇಕೆಂ
ಕಾಂಕ್ಷೆಯಿಂದ ಶ್ರುತಪಡಿಸಿದ್ದೇನೆ. ತಾ. ೧೪ನೇ ಮಾರ್ಚ ೧೯

ಪರವಾರಿ ದಿವಸಾ, ಮಿಶ್ರೀಕೋಟಿ ಸಾಲಿಗೆ ಮೆ. ಮ್ಯೂರ
ಸಾಹೇಬ ಬರಾಮ್ಮರ ಘಷ್ಟ ಅಶಿಷ್ಟಾಂಟ ಕಲೇಕ್ಟರವು, ಮ
ರಾ.. ಸಾ. ಮಾಮುಲೇದಾರ ಕಲಷಟಿಗಿ ಇವರೂ, ಮ ಲೋಕ
ಲಷಂಡ ಕಮೀಟಿಯ ಮೆಂಬರರಾದ ಗೋವಿಂದ ರಾಯರು
ಮ ಶಾಲೆಯ ಪಂಡಿತು ಸಹಿತರಾಗಿ ಬಂದು ಪರೀಕ್ಷೆಯನ್ನು
ತೆಗೆದುಕೊಂಡು ಬಹು ಆನಂದಪಟ್ಟು ಅದರಂತೆ ರಿಪೋರ್ಟ
ಬುಕ್ಕನಲ್ಲಿ ಬರೆದು ಹೆಡ್ಡಮಾಸ್ತರ ಮ ಅಶಿಷ್ಟಂಟರಿಗೆ ಶಿಫಾರಸು
ಕೊಟ್ಟರು. ಪರಂತು ಆಗ್ಗೆ ಇಲ್ಲಿಯ ಆರನೇ ಸ್ಟಾಂಡರ್ಡ
ಲಿಯು ಹುಡುಗರ ಮೈಕೆ ಒಬ್ಬನು ಇಂಗ್ಲೀಷ ಸರಕಾರದವರ
ಮಹತ್ವದ ಪುರುಷಾರ್ಥವನ್ನೂ, ಉದಾರಗುಣಗಳನ್ನು, ಪ
ರೋಪಕಾರದ ಕೀರ್ತಿಯನ್ನೂ, ಪ್ರಜರಿಗೆ ಕಲ್ಯಾಣಾರ್ಥ ಸು
ಖಕೊಡುವದನ್ನೂ, ಮ ಮ್ಯೂರಸಾಹೇಬರವರ ಉತ್ತಮಗುಣಗ
ಳನ್ನೂ, ರಾ. ಸಾ. ಮಾಮುಲೇದಾರರ ಶಾಂತಿಯನ್ನೂ ಕುರಿ
ತು ಕವಿತಾರೂಪದಿಂದ ಸ್ವಂತ ರಚನೆಯನ್ನು ಮಾಡಿ ಉತ್ತ
ಮ ಸ್ವರದ ಧಾಟಿಯಿಂದ ಅಂದಿನ ಕಂದಾ ಸಭಾರಿಗೆ ಬಹ
ಳ ಆನಂದವಾಯಿತು. ಅದರ ಮೈಕ ಕೆಲವು ಕವಿತ್ವಗಳನ್ನು ಇ
ಲ್ಲಿ ಬರೆದಿರುತ್ತೇನೆ.

ಇಂಗ್ಲಿಷ ಸರಕಾರದವರ ಬಗ್ಗೆ -

॥ ಕಂದ ॥

ಚಿರಕಾಲದ ಬೂಪಥುವಿಗೆ ।
ಪರರಾಜರ್ ಪ್ರಭುಗಳಂದಿನಗಣ್ಯ ಪಾತ್ರರು ॥
ಉದಾರಶೌರ್ಯರು ಮಿಸ್ರೋಪ್ತಿ ।
ಕರುಣಾಪರಲೆಂದು ಕೃಜಿಸಿಪರಮಿದಳಂಗ್ಲರ ॥ ೧ ॥
ಆರ್ಯಾವರ್ತಕೆಬಂದರು ।

ಕಾರ್ಯಾರ್ಥಗಳಾಗಿ ಸುರತಪಟ್ಟಣಕೆ ಮೊದಲುಂ ।।
ಶೌರ್ಯದ ಬಲದಿಂ ಮೆಲ್ಲನೆ ।
ತೀರ್ಥಪ್ರಭುಗಳನು ಜಯಿಸಿನೆ ಅಸಿಧರಿಂದಿಗೆ ।। ೨ ।।

।।ಭಾಮಿನಿ ಪಟ್ಟಿದಿ ।।

ಧರಣೀಗರಸರುಯುವನರಾಯರು ।
ಪರಮ ಶೌರ್ಯದಿ ಆಳಿಪೋದರು ।
ಕರುಣಿದಯವಿಲ್ಲದಲೆಪ್ರಜರನುಕಷ್ಟಪಡಿಸಿದರು ।।
ಗುರುದಯಾಪರರಂಗ್ಲಪ್ರಭುಗಳು ।
ಆರು ಹ್ರರ್ಷ ಪ್ರಜರೆಡರುಗಳನು।
ಪೊರೆದರಿಂದಿಗೆ ರಾಷ್ಟ್ರವನು ಬಹು ಸೌಖ್ಯದಿಂಯರಿಸಿ।।೩।।

।।ಕಂದ।।

ಇಲಾಖೆ ಧೊರೆಗಳವರ ವರ್ಣನೆ.

ಮೂರ್ಯರ ಪ್ರಭುಗಳ ದೇಹವ।
ನೀರಜ ಭವತಾನೇ ರಚಿಸಿ ಜಗದುಪಕಾರದ।।
ಮೂರುತಿಯೆಂದಿಟ್ಟನು ತಾಂ।
ಧಾರುಣಿ ಗಿಪ್ಪಾರ್ಥವಿತ್ತು ಸಲಹಲೆನೆಂದು।।೧।।

।। ಪುಲ್ಲಿಕಾ ಮಾಲಾವೃತ್ತಂ ।।

ರಕ್ಷಣಾಕಾರ್ಯಾ ಭರ್ತ ದೇಶಕ್ಕೆ, ತಂತುವಾಟಕ ಮುಖ್ಯರಂ।
ದಕ್ಷರಾಗಿ ಬಂದರಲ್ಲಿಗೆ ವ್ಯಾಪಾರನಾಮಕ ಧೊರೆಗಳುಂ।।
ಕುಕ್ಷಿಯೋಳಗಿಕ್ಕ ಧಾರುಣಿ ಸಲವು ಈಶ್ವರನಂದದಿಂ।
ರಕ್ಷಿಸಿಂದಿಗೆ ಕೀರ್ತಿಗೊಂಡರು ನ್ಯಾಯಾನ್ಯಾಯ ವಿಚಾರದಿಂ।೨

ಮೂಮುಲೇಂದಾರ ಸಾಹೇಬರವರ ವರ್ಣನೆ.

।।ಕಂದ।।

ತಾಂತಾ ಧರ್ಮಿಯ ನಾಮವ।

ಶಾಶ್ವತದ ಜನಮೆಚ್ಚುವಂತೆ ಧರಿಶಿಹರಿಂದಿಗೆ॥
ಎಂತಿವರಿಂದವ ಪೇಳಲಿ।
ಕಾಂತಿಯ ಮುಖದಲ್ಲಿ ತುಂಬಿಸೂಸುವ ಧೊರೆಗೆ॥೧॥

॥ಧಾಮಿನಿ॥

ಬರಿದೆ ನಾಮವ ಧರಿಸಲಿಲ್ಲವ।
ರುದುತರದ ಸೌಜನ್ಯ ಗುಣಕ್ಕೆ।
ಪರಮ ಶೋಭಿತವಾಗಿ ನೆರಿವದು ಶಾಂತನಾಪುರಿಗೆ॥
ಕರುಣ ಹೃದಯರು ಬುಧ್ಧಿವಂತರು।
ಉರುತ ರಾಪೇಕ್ಷಿತರು ಬುಧರಲಿ।
ಅರಿದು ನೋಡಿ ಬೊಡಿಲ್ಲಿ ಪರಸರಿ ಧೊರೆಗಳೀ ಜಗದಿ॥೨॥

ಪ್ರಕಾರ ಸುಸ್ವರದಿಂದ ಕವಿತ್ವವನು ಅಂದಬಳಿಕಾ ಸರ್ವರು ಸಂತೋಷ ಹೊಂದಿ ಉತ್ತೇಜನವನ್ನು ಕೊಟ್ಟು ಪ್ರೋರಟು ಹೋದರು. ಪತ್ರ ವಿಸ್ತಾರದಬಗ್ಗೆ ಕ್ಷಮಿಸಬೇಕು. ಇಂತಿ ವಿನ್ನಹ

ತಾ. ೨೨ನೇ ಮಾ. ಫೆಬರವಾರಿ ಸಂನ ೧೮೮೮ ಇ.

} "ಸಹಿ ವಿಶ್ರೀಕೊಟಿ ನಾಲಯ ಕವಿಮೊಟಿದಾರ."

ಪುು. ವಿಶ್ರೀಕೋಟಿ ತಾ. ಕಲಘಟಗಿ ಜಿ. ಧಾರವಾಡ

ಸಿವಾಜಿ ಅಂಣ್ಣಾಜಿ ಹೆಪ್ಡಮಾಸ್ತರ ವಿಶ್ರೀಕೋಟಿ

—೦—

ರಾವಸಾಹೇಬ ಕಂಡಶಾಲಾಪತ್ರದ ಎಡಿಟರ ಚರಣ ಕಮಲಗಳಿಗೆ——

ವಿ. ವಿ. ಕೆಳಗೆ ಬರದ ನಾಲ್ಕು ಪಳಿಯನ್ನು ತಮ್ಮ ಅಂದವಾದ ಪತ್ರದಲ್ಲಿ ಧಾಪಿಸುವರೆಂದು ಬಹಳ ಕಾಂಕ್ಷೆಯುಳ್ಳವನಾಗಿದ್ದೆನೆ. ವೇಕ ನಾಮದಾರ ಸರಜೀವ್ಯ ಧರ್ಮ್ಯ ಸಂನ ಗವರ್ಮೆಂಟರ ಆಗಮ ನೋಪ್ಯವ ಪ್ರದರ್ಶಿತ ಕವಿತೆಗಳು.

ಪಚನ ॥ ಮುಂಬಾಕಟಕ ಪ್ರಕಟ ಪಟು ಮಕುಟ ಘಟಿತ ನ
ಟ್ ಸರಜೇತ್ಸ ರಾಷ್ಟ್ರಗರ್ ಸರ್ಗ ಘರ್ಗ್ಯ್ ಸನ್ ರಾಗ
ನಥಿಂ ಚಂದ್ರನಾಂಧ್ರ ರುಚಿರುಂದ್ರ ಚಂದ್ರಿಕಾ ಚಂಚ್ಚ
ಕೋರಾಯಮಾನ ಮಾನಪಗಣಗಣಿತ ಪ್ರಲ್ಹಾದಾಲ್ಹಾದವರ
ಹಾಪತಂ ಸನರಹಂಸ ಪ್ರತ್ಯಹಂ ಪ್ರತ್ಯಹಂ ಮಿಲತ ತಲ
ಸಿಗಳ್ ಮೇಲ್ ಕಮಿಂಗ ಪಿತಂಗ ಪರಾಂಗಾಂಕರುಚಿಮೂಗ
ಡು.

ಉತ್ಸವೋತ್ಸಕ ಪತ್ಸಸತ್ಸಭೂಭೃತ್ಸಪಿಷ್ಯಾಶ್ರೀಪಾ್ಮ ಗ
ತ ಗುಣಮಣಿ ಕ್ಷಣಿತೃಷ್ಣೋರ್ಣಾಪ್ರವಿಣ ಪಾಂಡಚಕ್ರಾಣಿ
ಕ್ರಾಣಿ ಸರಸರ್ತಾವಿಪಸ್ಪಾರ್ಸರ್ಗಾಸನ್ ಘರ್ಗ್ಯಾಸನ್ ರಾಜಸಿಂ
ಗಣಿತ ಮುಂಗ ಗುಣಸಿಧೇ—ಅಭೀಷ್ಣ ಸರಿಂಪ್ಲು ತೂಷ್ಣಕೃಷ್ಣ
ಂಕೀರ್ಣ ವರ ಸಂಸರ್ಣ ಕರಣರಣೋದ್ಧರಣಭೂಪತಪ್ಪಿದೆ
ಹಿಮ್ ಹಿಮ್ ಹಿರಾಹಿರಾ" ಎಂಬಪರನುಡಿಯೇ ನಶಿಶಯ
ಸೋ.

ಕುರಂಗ ಮುಂಗ ಕಂಗಳಂಗ ಶೃಂಗಾಂತ ಕಾತಂಕ ಮಿಲ್ಲ
ೀಕ್ಷಿಸಲ್ ಕಮನೊಪ್ಪುಪಪ್ಪಳೀಕಕಲ್ಮಂಜಲಾಭಿಷಂಗ ಪತಂಗ
ಬೃಂಡಾರಕ ಪಾಂಡರೀಕಗಂಳ್ ಧರದಳಿಸಿದನೇ ನಚ್ಚರ್ಯವೆಸೋ.

ಈ ವಚನವನ್ನು ಕೃಷ್ಣಾಜಿ ಅನಂತ ಜಕಾತ ಬ್ರಿ. ಕಾ.
ವಿದ್ಯಾರ್ಥಿ ಇವರು ರಚಿಸಿ ನಾಮದಾರವರ ಆಗಮನೋತ್ಸವದ
ಅಂಗರು.

॥ಉತ್ಪಲಮಾಲಾ॥

ಮುಂಬಯುಮಿಂಗನರ್ನ ಘರಗ್ಯೂಸರ ಭೂಸುರಚೇಲ್ಸ್ ಮುಂಗ
ಸೋಳ್ । ಸಂಭ್ರಮಚೈತ್ರನೆಂಬವರ ರಾಜನ ಮೌಲ್ಯದ ಸು
ಪ್ರಿಯಾಣದಿಂ ॥ ಧರಿಬಿಸ್ಸೆ ಕೀರ್ತ ಶಮಮೂರುತ ವೆಂಬು

ಪ ಕೀರ್ತಿಪರ್ಬಿತೈ । ಹಂಬಲಿಸುತ್ತೆ ಸದ್ಭುಮ ಸುಲೋಕ
ದ ಸೌಖ್ಯವು ಪೆಚ್ಚಿತೈಕಣ್ಣಾ ॥ ೧ ॥

॥ ಮಲ್ಲಿಕ ಮಾಲಾ ॥

ಇಂದ್ರರಾಜನ ಶ್ರೀಯಕಾಂತಿಯೊ ಸುಂದರಾಸ್ಯದ ಕಾಂತಿಯೋ।
ಚಂದ್ರಸೂರ್ಯರ ಶಾಂತಿತಾಪವೊ ರತ್ನಬಿಂಬಿತ ಛಾಯವೋ ॥
ಬಂದ ಸರ್ಜೆಮಷಗರ್ಗಸನ್ನರ ತಾಪಶಾಂತಿ ಸುಕಾಂತಿಗಳ್ ।
ಮಂದ್ರರಾಧ್ರಿಯಸಂಗ್ಮಿಯೋಸಲೆಧ್ರೈರ್ಯಮಿಶ್ರಿತದೇಹವೊ ।೨।

ಈ ಕವಿತೆಗಳನ್ನು ಶಿವಾಜಿ ಯಜ್ಞೇಶ್ವರ ಜಪೆ ಟ್ರೇ. ಕಾ. ವಿದ್ಯಾರ್ಥಿ ಇವರು ರಚಿಸಿ ಗವರ್ನರವರ ಆಗಮನೋತ್ಸವಕಾಲದಲ್ಲಿ ಅಂದರು.

ಪತ್ರವಿಸ್ತಾರಕ್ಕೆ ಕ್ಷಮೆಇರಬೇಕು. } ಶಿವಾಜೀ ಯಜ್ಞೇಶ್ವರ ಜಪೆ
ತಾ. ೨೯ ಮಾರ್ಚಿ ಸ.೧೯೨೧ } ಟ್ರೇ. ಕಾ. ವಿದ್ಯಾರ್ಥಿ

—o—

ಶಾಲಾಪತ್ರಿಕೆ.

ಪುಸ್ತಕ ೧೬] [ಸಂಚಿಕೆ ೪

ಏಪ್ರೀಲ ೧೮೬೧

Education and Improvement

ವಿದ್ಯಾಸುಧಾರಣೆಗಾಸಂಬಂಧವಾದ ಸಂಗತಿಗಳು.

ಮೈಸೂರಿನ ಹೊಸ ಮಹಾರಾಜರಪಟ್ಟಕ್ಕೆ ಜಯಮಹಾರಾಜೇಂ
ದ್ರ ಹಿಡಿಯಂ ಬಹಾದ್ದೂರ ಎಂಬ ಹೆಸರಿಟ್ಟು, ಮೊದಲು
ಹೊತ್ತು ಮೂಡಿದಂತೆ ಹೋದತಿಂಗಳಿನ ೨೫ನೇ ತಾರೀಖಿನ
೨೫ ರಾಜ್ಯಾಭಿಷೇಕವಾಯಿತು. ಈ ಸಮಾರಂಭಕ್ಕೆ ಮದ್ರಾ
ಸಿನ ಗವರ್ನರ ಧೊರೆಗಳು ಬಂದಿದ್ದರು— ಮಹಾರಾಣಿಯ
ವರು ಈ ರಾಜ್ಯಾಭಿಷೇಕವನ್ನು ಉದ್ದೇಶಿಸಿ ಆಂದ
ಪ್ರದರ್ಶಕವಾದ ಸಂದೇಶವನ್ನು ತಂತಿಮಾರ್ಗದಿಂದ ಕಳುಹಿಂ
ಡಿದ್ದರು; ಅದನ್ನು ಸಮಾರಂಭದ ಸಮಯದಲ್ಲಿ ಓದಿದರು.
ಮಹಾರಾಜರು ಮಾಡಿಸಿದ ಪ್ರಕಟಿಸಿದ ಜಾಹೀರನಾಮೆಯಲ್ಲಿ,
ಸಂಸ್ಥಾನದ ದಿವಾಣರೂ ಬೇರೆ ಕೆಲವರು ಬುದ್ಧಿವಂತರೂ
ಸೇರಿ ಒಂದು ಸಭೆಯುಂಟಾಗುವದೆಂತಲೂ, ಆ ಸಭೆಯ
ವರು ಹೊಸ ಕಾಯಿದೆಗಳನ್ನು ಮಾಡಿ ರಾಜ್ಯಕಾರಭಾರ ನಡಿ
ಸುವರೆಂತಲೂ ಬರೆದಿದ್ದಾರೆ.

—*—

ಜಗತ್ಕರ್ತನಾದ ಪರಮೇಶ್ವರನು ಒಬ್ಬನೇ ಉಂಟು.

ಅನೈಕ್ಯತೆಗಳಿಲ್ಲ ನುಳ್ಳ, ಈ ಪ್ರಕಾರದಿಂದು ಏಕೇಶ್ವರ
ಧರ್ಮ ಮತವು ನಮ್ಮ ದೇಶದೊಳಗೆ ಈಗ ಬಹಳ ಕಡೆ
ಯಲ್ಲಿ ಪ್ರಚಲಿತವಾಗಿತ್ತು ನಡಯ್ತ. ಇದಕ್ಕೆ ಮುಂಬಯಿ ಇಲಾಖೆ
ಯಲ್ಲಿ ಪ್ರಾರ್ಥನಾಸಮಾಜವೆಂತಲೂ, ಬಂಗಾಲ ಇಲಾಖೆ
ಯಲ್ಲಿ ಬ್ರಹ್ಮಸಮಾಜವೆಂತಲೂ ಹೆಸರುಗಳುಂಟು. ಆದರೆ
ಈ ಏಕೇಶ್ವರ ಧರ್ಮವು ಯುರೋಪಿಖಂಡದಲ್ಲಿ ಸಹ ಬ
ಹಳ ಬೆಳಯಿತ್ತನಿದಿದೆ— ಲಂಡನ ಪಟ್ಟಣದಲ್ಲಿ ಈ ಮತ
ದವರು ಬಹುಜನರುಂಟು. ಅವರು ಹಿಂದು ಪ್ರಾರ್ಥನಾಮಂ
ದಿರವನ್ನು ಆ ಪಟ್ಟಣದಲ್ಲಿ ಕಟ್ಟಿಸಿದ ಉದ್ಯೋಗ ನಡಿಸಿದ್ದಾರೆ.

—*—

ಕರ್ನೂಲ ಜಿಲ್ಲೆಯಲ್ಲಿ (ಮದ್ರಾಸ) ಒಬ್ಬ ಪೋಸಗಾರನ
ಶಾಲೆಗಳ ಇನಸ್ಪೇಕ್ಟರನ ಸೋಗು ತಕೊಂಡು ಹಿಂದು
ಲಗೆ ಹೋಗಿ ವಿದ್ಯಾರ್ಥಿಗಳ ಪರೀಕ್ಷೆ ತಕೊಂಡು, ಊ
ರ ಕೈಯಿಂದ ಯಥಾಸ್ಥಿತವಾಗಿ ಸರಬರಾಯಿಯನ್ನು ಇ
ದಿಸಿ ಕೊಂಡು, ಪುಸ್ತಾರವನ್ನು ಹೆದರಿಸಿ ಅವನ ಕೈಯಿ
ಕೆಲವು ಹಣ ಉಚ್ಚಿಕೊಂಡು ಪಾರಾಗಿ ಹೋಗಿದ್ದನು
ದರೆ ಅವನ ಮೋಸವು ಬೇಗ ಜೈಲಿಗೆ ಬಂದು,
ನು ಶಿಕ್ಷಿಸಲ್ಪಟ್ಟನು.

—೧—

ಅಮೇರಿಕದಲ್ಲಿ ಬುಕು ಮಂಡಾಷನಕಾಲಯೊಂದು ಮರ
ನ್ನು ಒಳಗಡೆಯಲ್ಲಿ ಕಡಿಯರು. ಅದರ ಬೊಡ್ಡೆಯು ಪ
ಳ್ಳಾಗಿತ್ತು. ಆ ಪೊಳ್ಳನೊಳಗೆ ೩೦ ಮಂದಿ ಪ್ರಾಶಸ್ತ್ಯವ
ಕೂಡ್ರಲಕ್ಕೆ ಬರುವಷ್ಟು ಸ್ಥಳವಿತ್ತು. ಆ ಮರವು ಳಲಿ
ವರ್ಷಗಳ್ತಿಂದು ಹೇಳುತ್ತಾರೆ.

ನಾಶೀಕಕ್ಕೆ ಒಬ್ಬ ಲಿಂಗವಂತರ ಗುರು ಬಂದಿದ್ದಾನೆ. ಅವನು ಸಂಸ್ಕೃತ ಭಾಷೆಯಲ್ಲಿ ಪಿಪ್ಲಾಶಸಿದ್ದಾನೆ, ಮತ್ತು ಶಂಕರಾಚಾರ್ಯರೇ ತನ್ನ ಗುರುಗಳೆಂದು ಹೇಳಿಕೊಳ್ಳುತ್ತಾನೆ.

—೧—

ಕೊಲ್ಲಾಪುರದ ರಾಜಕುಮಾರ ಕಾಲೇಜಿಕ್ಕೆ ಈಗ ನಾಲ್ಕು ಜನ ಕಾರಣಕಾರಣ ಸಹಗೂರ ನಬಾಬ ಸಾಹೇಬರು ತಮ್ಮ ರಾಜಧಾನಿಗೆ ಬಂದಿದ್ದಾರೆ.

—೦—

ಕೆಲವು ಹಾಯಸ್ಕೂಲಗಳಲ್ಲಿ ಒಕ್ಕಲತನದ ವಿಷಯವನ್ನು ಕಲಿಯುವ ವರ್ಗಗಳುಂಟು. ಆ ವರ್ಗಗಳ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಟ್ಟಿಯು ಪ್ರಸಿದ್ಧವಾಗಿದೆ. ಬೆಳಗಾವಿಯ ವರ್ಗದವರು ೯ ಜನ ಪಾಸಾಗಿದ್ದು ತಿಳಿಯುತ್ತದೆ.

—೦—

ಮೈ. ರನೆಲ್ ಥೊರೆಗಳು ಈಗ ಕಾರವಾಡದಲ್ಲಿ ಇದ್ದಾರೆ.

—೦—

Counsels to youth.

ಸುಕ್ಷೇಪಾಪೇಕ್ಷಾ ಪ್ರೇರಿತ
ತರುಣ ಹಿತೋಪದೇಶದ.

ವಿಷಯ ನಿಬಂಧವು

—ಶ್ಲೋಕ—

ಅತಸ್ತ್ವಾ ಲೋಕ ಸಹಾಯ್ಯ ಮಹಾಯ್ಯಂ ಸೂಯ್ಯರಶ್ಮಿಭಿಃ।
ಧೃಷ್ಟಿರೋಧಕರಂ ನೃಣಾಂಲಯಸ್ಥಾನ ಪ್ರಭವಂ ತಮಃ ॥

ಅರ್ಥ — ಮನುಷ್ಯರಿಗೆ ಯಶಸ್ಥಾನದಲ್ಲಿ ಉಂಟಾಗುವ ತ

ಮನಸ್ಸು ರತ್ನ ಪ್ರಕಾಶದಿಂದ ಸಂಹರಿಸಕೂಡದ್ದು, ಸೂರ್ಯ ರಶ್ಮಿಗಳಿಂದ ನಿವಾರಿಸಕೂಡದ್ದು, ಅದು ದೃಷ್ಟಿಯನ್ನು ತಡೆಯುವಂಥಾದ್ದೇ.

—ಭಾಮಿನಿ—

ಹರಕೆಗೆಂದೇ ತಂದ ಕುರಿತಾನ್ । ಅರಿಯರಕಟಾ! ಕೊಲ್ವರೆಂಬುದ । ಹರಿದು ಹಸಿವಿಗೆ ತಳಿರ ಮೆಲ್ಲುತ್ ಇಹುದುತೋದಣಪಾ ॥ ನರಕುರಿಗಳದರಂತೆ ತಮಗಹ । ಮರಣವನು ತಾಪ್ ಅರಿಯರಿಸದೆ—। ಸರಣಿ ಭೋಗದಿ ಮುಗ್ಧರಾಗಿಯೆ ಮೃತ್ಯುವಶವಪ್ಪರು ॥

ಈ ಸಬಂಧದಿಂದ ಗೃಹಸ್ಥಾಶ್ರಮ ಹೊಂದಿದ ತಾಂಪತ್ಯ ಸ್ಥಿತಿಯುಳ್ಳವರೆಲ್ಲರೂ ವಿಚಾರದಿಂದಲೂ, ಬಹು ಎಚ್ಚರದಿಂದಲೂ, ನಡೆಯತಕ್ಕದ್ದು ಅತಿ ಅವಶ್ಯವೇ. ಯಾಕಂದರೆ:— ಇದರಿಂದ ಎಷ್ಟೋ ಪೃಥ್ವಿ ಪತಿಗಳೂ, ಸುಕುಮಾರ ಸತಿಯರೂ, ತಮ್ಮ ರಾಜ್ಯವಾಡಳಿತೆಯನ್ನೂ ಧನಕನಕಾಭರಣಗಳನ್ನೂ, ಸೀಗಿ ಎಲ್ಲ ಸೌಖ್ಯಕ್ಕೆ ಮುಖ್ಯವಾದ ಶರೀರ ಮೆಂಬ ಸುಪ್ರಕ್ಷವನ್ನೇ ಕೊರಿದು ಕೆಡಿಸಿಬಿಡುವ ಸುಳಿಗಳಂತಾಗಿ ಮೇಲಿನ ದೃಷ್ಟಾಂತದಂತೆ ಕುರಿಗಳೆಂಬ ಮನುಷ್ಯರು ಮೃತ್ಯು ವಶವಾದದ್ದು ಅನೇಕ ಪುರಾಣ ಶ್ರುತಿಯಿಂದ ಎಲ್ಲರ ಕಿವಿ ಕೇಳಿರಬಹುದು. ಆದರೆ, ಉತ್ತಮ ಹಿತೋಪದೇಶವನ್ನು ಸೂಚಿಸಿಕೊಡುವ ಉದಾಹರಣೆಗಳಿಲ್ಲವೆಂದಲ್ಲ:—

ತರುಣರೇ ಅಯೋಧ್ಯಾಧಿಪತಿಯಾಗಿ, ಕೋಸಲರಾಜ್ಯವಲಿ ಪಾಲಕನಾಗಿ ದಶರಥರಾಯನ ಕುಮಾರನಾದ ರಾಮನುಯುವರಾಜನು ದಂಡಕಾರಣ್ಯದಲ್ಲಿ ವನವಾಸ ಮಾಡುತ್ತಿದ್ದ ಸಮಯದಲ್ಲಿ ಮಾರಿಷೋಪಾಖ್ಯಾನದ ಉಗರುಗಳೂ, ವಿಕಾರವಾದ ಹಿಂದಲ

ಉಳ್ಳಂಥಾ ರಾಕ್ಷಸಿ ಶೂರ್ಪನಖಿಯು ರಾಮನ ಏಕ ನಾರಾವೃತ
ವನ್ನು ಭಂಗಮಾಡಸಲಿಕ್ಕಾಗಿ ಕಾಪುರೂಪಿಯಾಗಿ ರೂಪ ಲಾವ
ಣ್ಯವತಿಯ ಆಕಾರವನ್ನು ಧರಿಸಿಕೊಂಡು ಬಂದದ್ದೂ; ರಾಕ್ಷಸ
ನಾದ ಮಾರೀಚನು ಪಂಚರತ್ನಮಯವಾದ ಜಿಂಕೆಯ ರೂಪ
ವನ್ನು ಧರಸಿ, ಸೀತಾ ರಾಮರ ಮುಂದೆ ಬಂದು ಸುಳಿದಾಡಿ,
ಸೀತೆಯನ್ನು ತನ್ನ ಸೌಂದರ್ಯಕ್ಕೆ ಮೋಹಿತಳಾಗಮಾಡಿ,
ರಾಮ ಲಕ್ಷ್ಮಣರು ಸೀತೆಬಳಿಯಿಂದ ಅಗಲಿ ಹೋದಸಕ್ಕೆ ಕಾ
ರಣವಾದದ್ದೂ, ರಾಕ್ಷಸೇಶ್ವರನಾದ ದಶಮುಖನೆನ್ನಿಸಿ ಕೊ
ಳ್ಳುವ ರಾವಣನು ಸನ್ಯಾಸೀ ವೇಷವನ್ನು ಧರಸಿಕೊಂಡು,
ರಾಮನ ಪರ್ಣಶಾಲೆಯನ್ನು ಹೊಕ್ಕು, ಸೀತೆಯನ್ನು ಅಪ
ಹರಿಸಿ ಕೊಂಡದದ್ದೂ, ನಿಮ್ಮೆಲ್ಲರ ಕಿವಿಗೆ ಬಿದ್ದ ಕಥೆಯಾಗಿ
ದ್ದೀತು.

ಯವನರ ಪುರಾಣ ಕಥೆಗಳಲ್ಲಿ ವಿಚಿತ್ರವಾದದ್ದೊಂದುಂ
ಟು. ಯಾವದಂದರೆ:--- ಯವನ ಸಮುದ್ರಕ್ಕೆ ಶೇರುವ ಇತಲೀ
ದೇಶದ ದಕ್ಷಿಣಾಗ್ರದ ಕದೆಯಲ್ಲಿ ಸಿರೇನಗಳೆಂಬ ಜಲ ಕ
ನ್ಯೆಗಳು ಇರುತಿದ್ದರಂತೆ. ನೀರಿನಮೇಲೆ ಅವರು ಕಾಣಿಸುತ್ತಿ
ದ್ದ ಅವರ ತಲೆಯು, ಮೋರೆಯು ಎದೆಯೂ,
ನಡುಮೈಯೂ, ಕಾಲಗಳೂ, ಶುದ್ಧ ದಿವ್ಯಶೋಭ
ನಾಂಗಿಗಳಂಥವುಗಳಂತೆಯೇ ಕಾಣುತ್ತಿದ್ದವಂತೆ. ಆದರೆ ಹಂ
ಸಪಕ್ಷಿಯ ಮುಂಡವೂ, ಪುಚ್ಛವೂ, ಆಗಿರುವಂತಾ ದಂಥವೆ
ಬ್ಬಿಟಿಯೂ, ಬಾಲವೂ, ಆ ಸಿರೇ ನಗಳಿಗೆ ಇದ್ದದ್ದಲ್ಲದೆ ಮ
ಹಾ ರಣ ಹದ್ದಿನವುಗಳಂತಾದ ಉಗುರುಗಳಿಂದ ಸಂಯುಕ್ತ
ವಾದ ಚರಣದ್ವಯವು ಇತ್ತು. ಈ ಪರದ ಪಕ್ಷೀ ರೂಪವು
ಳ್ಳ ತಮ್ಮ ಅರ್ಧೋಭಾಗವನ್ನು ಆ ಜಲಕನ್ನಿಕೆಗಳು ನೀರಿನಲ್ಲಿ

ಮುಚ್ಚಿಹಾಕಿ ಕೊಂಡು, ಕಾಣಿಸಿಕೊಳ್ಳದಿರುತ್ತಿದ್ದರು ನಾವೆಗಳು ಕಂಡರೆ, ಅವರು ದಿವ್ಯ ಗಾಯಕಿಗಳಹಾಗೆ ಅತ್ಯಂತ ಇಂಪಾದ ಸ್ವರದಿಂದ ಹಾಡುತ್ತಿರುವರು. ನಾವೆಯವರು ಅವರ ಹಾಡನ್ನು ಕೇಳಿ, ನೀರಿನ ಮೇಲೆ ತೋರಕಿಡ್ಡವನ್ನು ಅವರ ರೂಪವನ್ನು ಕಂಡು ಮರಳುಗೊಂಡ, ನಾವೆಯಲ್ಲಿಂದ ನದ್ರಕ್ಕೆ ಹಾರುವರು. ಈರಿಯವರನ್ನು ಅವರು ಹಿಡಿದು ತಿನ್ನುವರು. ಹೀಗೆ ಮೋಸಹೋಗಿ ನಾಶವಾದವರ ಎಲುಗಳಿದ ಅವರು ತಮಗೆ ದಂತದ ಮಹಲುಗಳಂತಾದ ಮನಿಗಳನ್ನು ಕಟ್ಟಿಕೊಂಡು ಇದ್ದಾರಂತೆ. ಈ ಜಲಕನ್ಯೆಗಳು ವಿಲಾಸಗೊಂಡಿದ್ದ ದಿಕ್ಕಿನ ಸಮುದ್ರವನ್ನು ಯವನ ಯುವರಾಜನಾದ ಒಡಿಸ್ಸೈಸೆಂಬವನು ಸಹಾತ್ಮನ ಖಲಾಸಿಭಟರಜತರೊಂದಿಗೆ ದಾಟಿ ಹೋಗಬೇಕಾಯಿತು. ಆದರೆ ಮಹಾ ಜಯಶಾಲಿಯು ಪಾತ್ರವಲ್ಲ, ಮಹಾ ಬುದ್ಧಿಶಾಲಿಯೂ, ಆಗಿದ್ದ ಅವನು ಆ ಸಿರೇನಗಳಪೆಶಿಯಿಂದ ಮೋಸಹಾಗದ ಹಾಗೆ ಮಾಡತಕ್ಕ ಉಪಾಯವೇನೆಂದು ಚಿಂತಿಸಿ, ಯೋಚಿಸಿ ತನ್ನ ಕಡೆಯ ಜನರ ಕಿವೀ ದ್ವಾರಗಳಲ್ಲಿ ಅರಳಿಯನ್ನು, ಮೇಣವನ್ನು, ಚನ್ನಾಗಿ, ತೂರಿಸಿ ಜಡಿಸಿ, ಅವರ ಕಿವಿಗೆ ಏನೂ ಕೇಳದಹಾಗೆ ಮಾಡಿಸಿ, ತನ್ನನ್ನು ನಾವೆಯ ಕುಮೆ ಮರಗಳಲೊಂದಕ್ಕೆ ಕಟ್ಟಿ ಹಾಕಿಸಿ ಕೊಂಡನಂತೆ. ಈ ಯುಕ್ತಿಯಿಂದ, ಅನನ್ನು ಅವನ ಭಟರೂ, ಖಲಾಸಿಗಳೂ, ಮೋಸಗೊಳ್ಳದೆ ಸುರಕ್ಷಿತರಾಗಿ ದಾಟಿಹೋದರಂತೆ.

ಪ್ರಿಯ ತರುಣರೇ! ಸೀತಾರಾಮರ ಕಥೆಯೂ, ಈ ಯವನ ದೇಶದವನ ಹಾಗು ಆ ಜಲ ಕನ್ಯೆಗಳ ಕಥೆಯೂ,

ಭವಸಾಗರ ಮೆಂಬುದನ್ನು ಉತ್ತರಿಸಿ ಪಾರಾಗ ಬೇಕಾದ ನಿಮ್ಮ
ಲ್ಲರಿಗೆ ತಕ್ಕ ದೃಷ್ಟಾಂತವೇ. ಇದು ಅಲ್ಪಕಾರ್ಯವೂ, ಪಿ
ತೋದಪ ಸಂಗತಿಯೂ, ಅಲ್ಲಾ! ಮಹಾ ಪ್ರಯಾಸವೂ, ಗಂ
ಭೀತರವೂ, ಉಳ್ಳಯಾತ್ರೆಯೇ! ಈ ಸಮುದ್ರವನ್ನು ದಾಟಲಿಕ್ಕೆ
ಬಳ್ಳೀ ನಾವೆಯು ಮಾತ್ರವಲ್ಲ. ಬಹಳ ಎಚ್ಚರವೂ, ಜಾ
ಗ್ರತೆಯೂ, ಸಹ ಅಗತ್ಯಗತ್ಯವೇ. ಯಾಕಂದರೆ:— ಸಮು
ದ್ರಾನ ದಾರಿಗೆ ತಪ್ಪು, ದಿಕ್ಕು ಕಾಣಿಸೆ, ಪ್ರಚಂಡ ಘಾಳಿ
ತುಫಾನುಗಳಲ್ಲಿ ಬಿದ್ದು ಬಂಡೆಗಳಿಗೆ ತಾಕಿ, ಮುಳುಗಿ ಹೋ
ಗುವ ಭಯ ವಿರುವದಲ್ಲದೆ ಸಮುದ್ರಗಳ್ಳರು ಮೊದಲಾದ
ವಿವಿಧವಾದ ಮೋಸ ಅಪಾಯ ನಷ್ಟಗಳನ್ನು ಗೊಳ್ಳಿಸುವ ಹೇ
ರಳ ಕೆಡಕರು ಇದ್ದಾರಲ್ಲಾ! ಈ ಭೊಲೋಕಾರಣ್ಯದಲ್ಲಿ ಪಯ
ಣಿಸವನ್ನು ಮಾಡುವವರಾಗಿದ್ದೀರಿ. ನೀವು ನೀತಿ, ಗತಿ ಭ್ರ
ಷ್ಟಾಜಾಕರಾಗಿ ಮೊಹಗೊಳ್ಳಿಸುವಂಥಾದಕ್ಕೆ ನೀವು ನೋತು ವ
ಶರಾಗಿ ಹೋಗಬಾರದು. ನಿಮ್ಮ ಬುದ್ಧಿ ಎಂಬುವದು ನೀತಿ
ಎನ್ನಿಸಿಕೊಳ್ಳುವ ನಿಮ್ಮ ಅರ್ಥಾಂಗಿಯೇ. ಅದನ್ನು ಅಪಹ
ರಿಸಿಕೊಳ್ಳಹೊಂಚಿ ನೋಡುವವನಿದ್ದಾನೆ. ದಶಮುಖನಾಗಿ, ದಶ
ದಿಕ್ಕುಗಳಲ್ಲಿ ತನ್ನ ದೃಷ್ಟಿಯನ್ನಿರಿಸಿ, ಮಹಾ ತಂತ್ರೋಪಾಯ
ಗಳನ್ನು ನಡಿಸಿ, ತ್ರಿಜಗಜ್ಜಯಶಾಲಿಯಾದ ರಾಕ್ಷಸೇಶ್ವರನೆಂತಲೂ,
ಪಾಪ ಪುರುಷನೆಂತಲೂ, ಎನ್ನಿಸಿಕೊಳ್ಳುವಾತನೇ. ಇವನ ಸ್ವ
ರೂಪವೆಂಥಾದ್ದೆಂಬದನ್ನು ಕೇಳಿ ಭಯ ಪಡಿರಿ. ಅದು ಹ್ಯಾ
ಗಂದ್ರ,— ದೇವದ್ರೋಹವೆಂಬ ಪ್ರಾಣದಿಂದ ಸತ್ಯವೇದ ವಿ
ನೋಧ ವೆಂಬ ಪುರುಷನಿಂದ ಭ್ರಷ್ಟತೆ ಎಂಬ ಬುದ್ಧಿ
ಯಿಂದ, ಅಪ್ರಮಾಣ್ಯವೆಂಬ ಚಿತ್ತದಿಂದ, ನಾಸ್ತಿಕ್ಯ
ವೆಂಬ ಅಹಂಕಾರದಿಂದ, ದುರ್ಜನ ಸಂಗತಿವೆಂಬ ಬಲದಿಂ

ದ ಲೋಕವೆಂಬ ಊರಿನೊಳಗೆ ದುರಾಶೆಯೆಂಬ ಅರಮನೆಯನ್ನು ಸೇರಿ, ದುರ್ನೀತಿಯೆಂಬ ಸಿಂಹಾಸನದಲ್ಲಿ ಕುಳಿತುಕೊಂಡು ಆಳುತ್ತಾನೆ. ಅವನ ಸ್ವರ ದುರ್ಮಾರ್ಗಗಳೇ, ಶಿರಸ್ಸು ಗರ್ವವೇ, ಕಂಠವು ಮನುಷ್ಯ ಹತ್ಯೆಯೇ, ಭುಜದ್ವಯ ಚೌರ್ಯ ಸ್ವರ್ಣಸ್ತ್ರೀಯರುಗಳೇ, ಎಸೆ ಪೃಥಿವಿಚಾರವೇ, ಉದರವು ಹೊಟ್ಟೆಕಿಚ್ಚೇ ಎಡ ತೋಡೆ ಪರಗ್ರಹಣಾಪಹವೇ, ಬಲತೊಡೆ ವಿಷಪ್ರದಾನವೇ, ಕಣ್ಣು ವಿಷಯ ತೋಲುವತ್ವವೇ, ನಾಲಿಗೆಯು ಕಪಟವೇ, ಅವನ ಮಾಂಸ ಅತಿ ಭೋಗವೇ, ನಾಡಿಗಳು ನೀಚಕಾರ್ಯಗಳೇ, ಅಪಮೃತ್ಯುಗಳು ಮಹಾಪಾತಕಗಳೇ, ಅವನ ನಿತ್ಯ ಕರ್ಮ ನಂಬಿಸಿ ಕೆಡಿಸುವುದೇ, ಅವನ ಆಭರಣಗಳು ದುರ್ಗುಣಗಳೇ, ಆಕಾರವು ಅಬ್ಬಾನವೇ, ಇಂತು ಭಕ್ತಿ ಎಂಬ ಪಟ್ಟಣವನ್ನು ಮುತ್ತಿ, ನಿತ್ಯ ಧರ್ಮಗಳೆಂಬ ಕೋಟೆಗಳನ್ನು ಸದೆಬಡಿದು, ಮನೋವಾಕ್ಕಾಯಗಳೆಂಬ ಬೊಕ್ಕಸವನ್ನು ವಶ ಪಡಿಸಿಕೊಂಡು, ವಿವೇಕನೆಂಬ ಗೋಡೆಯನ್ನು ಕೆಡವಿಹಾಕಿ, ವೈರಾಗ್ಯನೆ ಜಾಗ್ರತೆನಳೆಂಬ ಕಾವಲಿಗರನ್ನು ಜೈಸಿ ಕಾಲವೆಂಬ ತೀವ್ರಿಗಾಸನಾಗಿ, ಧರ್ಮದ್ವಾರವನ್ನು ಮುಚ್ಚಿ, ಕುರುಬನು ಕುರಿಗಳನ್ನು ಹೇರಿಯಿಸಿ ಕಟುಕನಿಗೆ ಕೊಟ್ಟು ಕೊಂಡಂತೆ, ಮನುಷ್ಯರನ್ನು ಈ ಪಾಪದ ಲೋಕವ್ಯವಹಾರದಿಂದ ಆಳಿ, ಮೃತ್ಯುವೆಂಬ ಸಂಹಾರಕನಿಗೆ ಒಪ್ಪಿಸಿ ಕೊಲ್ಲಿಸುವನು.

ಕಾಮ ಕ್ರೋಧಾದಿ ಅರಿಷಡ್ವರ್ಗದವರ ಯಜಮಾನನೂ, ನಾಯಿಕನೂ, ಅನರ್ಥ ಈ ಅಂಧಕಾರಾಧಿಪತಿಯು ಕೌಮಾರಯೌವನ ವಾರ್ಧಕದವರಿಗೆ ವಿಶೇಷವಾಗಿ ಕಾಮನೆಂಬ ತನ್ನ ಸಹಾಯಕನಿಂದ ಭಾಷಾತೀತವಾದ ಮೋಸ ನಷ್ಟಗಳನ್ನು ಮಾಡಿಸುತ್ತಿರುತ್ತಾನೆ. ತರುಣ ಸಖನ ವೇಷಧರಿಸಿಕೊಳ್ಳುವ ಕಾ

ು ಮೆಂಬ ನಿಮ್ಮ ಹಿತ ಶತ್ರು ಶಿಖಾಮಣಿಗೆ ನಂಬಬೇ
ರಿ! ಇವನು ಕೈಯಲ್ಲಿ ಹಿಡಿದು ತೋರಿಸುವಂಥಾದ್ದು ಹ
ನಾರು ಬಣ್ಣ ಉಳ್ಳ ಚೆಂದ ವ ವರಂಜಿಯಾದದ್ದೂ, ನಂಬ
ಡಿರಿ! ಚಿನ್ನದ ಚೂರಿ ಎಂದು ಕುತ್ತಿಗೆ ಕೊಯಿಸಿಕೊಳ್ಳ
ಡಿರಿ! ಕಾಮವು ಕಟ್ಟಿನ ಮೇಲಿಟ್ಟ ಜೇನತುಪ್ಪದಕಿಂತ
ು ಸವಿಯಾಗಿ ತೋರಿಸಿ ತಿಂನಿಸುವಂಥಾದ್ದು ಬರೇ ವಿಷ
ವೇ. ಈ ವಿಷವು ಮೂರುತರದ್ದು. ಅವು ಯಾವಂದರೆ:—ಜಾರ
ತ್ವ, ಸ್ವಭಾವ ವಿರೋಧಾನುಭೋಗ, ದುರ್ಭೋಗ ಎಂಬವುಗಳೇ.

(೧) ಜಾರತ್ವ ಅಂದರೆ:— ವಿವಾಹವಾಗದ ಪುರುಷನು
ನ್ನೇ ಸಂಗ, ವಿವಾಹವಾಗದ ಸ್ತ್ರೀಯು ಪುರುಷ ಸಂಗ ಮಾ
ಡುವದೇ (ಪರಸ್ತ್ರೀ ಗಮನ, ಸೂಳೆತನ ಮೊದಲಾದವುಗಳೇ)

(೨) ಸ್ವಭಾವ ವಿರೋಧಾನುಭೋಗವಂದರೆ:— ಸ್ತ್ರೀಯು
ಗೆ ಸ್ತ್ರೀಯರು ಪುರುಷರಿಗೆ ಪುರುಷರು ಸ್ಪರ್ಶನವಾಗಿ (ಗು
ಹ್ಯೆ ಮೈಥುನ ಮಾಡುವವರಾಗಿ) ಆಥವಾ ಸ್ತ್ರೀಯರಕಾಗಲಿ, ಪುರು
ಷರಾಗಲಿ, ಪಶುಗಳಿಗೆ ಸಂಯೋಗವಾಗಿ ಕಾಮೋತ್ತುರವನ್ನು ತೃ
ಪ್ತಿಪಡಿಸಿಕೊಳ್ಳುವದೇ. ಇದು ಸ್ವಭಾವಕ್ಕೂ, ಎಲ್ಲಾ ಧರ್ಮಕ್ಕೂ
ವಿರುದ್ಧಕರ್ತನಾದ ದೇವರ ಕರ್ಮಕ್ಕೂ ತೀರಾವಿರೋಧವಾದ್ದು.

(೩) ದುರ್ಭೋಗವಂದರೆ:— ಏಕಾಂತನಾಗಿ ಕಾಮುಕನೆಬ್ಬ
ನು ಯಾವನೊಂದು ವಸ್ತು ಸ್ತ್ರೀ ಎಂದು ಕಲ್ಪಿಸಿಯಾಗ
ಲಿ, ಪ್ರತ್ಯಕ್ಷದಿಂದ ಆಗಲಿ, ಶೃಂಗಾರವತನ ಮಾಡುವದೇ.
(ಇವುಗಳಿಂದಾಗುವ ಕೇಡಿನ ವಿಷಯ ಒಬ್ಬ ಇಬ್ಬ ವೈ
ದ್ಯರ ಅಭಿಪ್ರಾಯ ಮುಂದಿನ ನಿಬಂಧದಲ್ಲಿ ಬರೆಯುವೆನು.)

ಎಚ್ಚರಿಕೆ ಹೆಣ್ಣುಮಕ್ಕಳಲಾಲೆ ಪಂ. ೨ ಕಾಣುವಂತ ಭೀಮಶಿಂಗ
ಮಾಲಿಕರಾಗಿ ನೇ ಇಸವಿ (ಧಾರವಾಡ) ಹೆ. ಮಾ.

Correspondence.

ಪತ್ರ ವ್ಯವಹಾರವು.

ರಾ. ಸಾ. ಶಾಲಾಪತ್ರಿಕೆಯ ಎಡಿಟರ ದಕ್ಷಿಣ ಭಾಗ
ಚರಣಸನ್ನಿಧಿಗೆ ---

ವಿ. ವಿ. ಅಯ್ಯಾ ಎಡಿಟರರಾಯರೇ ತಮ್ಮ ಕರಕಂಜದಿ
ಉದ್ಭವಿಸುವ ಸುಂದರವಾದ ಮಾಸಪತ್ರಿಕೆಯಲ್ಲಿ ಇದೇ
ಗಳಲ್ಲಿ ಕೆಳಗೆ ಬರೆವ ನನ್ನ ನಾಲ್ಕು ಪದ್ಯಗಳಿಗೆ ಉ
ರಾಶ್ರಯವನ್ನೀಯುವಿರೆಂದು ಅತಿ ನಮ್ರತೆಯಿಂದ ಬೆ
ಕೊಳ್ಳುತ್ತೇನೆ.

ಇಲ್ಲಿಯ ಟ್ರೇನಿಂಗಕಾಲೇಜಿನ ಪ್ರಿನ್ಸಿಪಾಲರಾದ, ನ
ಸದ್ಗುರುಗಳಾದ ಹಾಗು ನಮ್ಮ ದೇಶಬಾಂಧವರ ಸದ್ಗುರುಗ
ಗಿದ್ದ ರಾ. ಸಾ. ಭುಜಂಗರಾವ ಕೃಷ್ಣ (ಹೃಯಲಗೊ
ಜಾಹಾಗಿರದಾರ) ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಧಾರವಾಡ
ಪರಿದೆ ಮೆಹಬ್ಬಾನ ಎಜ್ಯುಕೇಶನಲ್ ಇನಸ್ಪೇಕ್ಟರ ದಕ್ಷಿಣಭ
ಧೋರಗಳು ಕಳಿದ ಮಾರ್ಚ ತಿಂಗಳಿನಿಂದ ೫೦ ರೂಪಾಯಿ ಸ
ರವನ್ನು ಹೆಚ್ಚಾಗಿ ಮಾಡಿಸಿದರು. ಅಂದರೆ ರಾವಸಾಹೇಬ
೧೫೦ ರೂಪಾಯಿ ಪಗಾರ ವಿದ್ದದ್ದು ೨೦೦ ಪಗಾರವಾ
ತು. ಎಲ್ಲೆ ಪ್ರೀಯವಾಚಕಜನರೇ ಇಷ್ಟೆಂಥಾ ಆನಂದ
ವಾದ ಸುವಾರ್ತೆಯು. ಇಂಥಾ ಸುವಾರ್ತೆಯನ್ನು ಏಮ್ಮೆ
ರಿದೆ ತಿಳಿಸದಲೆ ಎನ್ನಮನಸ್ಸು ಎರಡಿಗೂ ಸಿಲ್ಲಲಾರದು.
ಕಾರಣ ಈ ಪಿಯ ಸುವಾರ್ತೆಯನ್ನು ತಮ್ಮ ಪಿಯ ಚಿತ್ತ
ಶ್ರುತ ಪಡಿಸಿಸ್ತೇನೆ. ಈ ಶುಭವಾರ್ತೆಯನ್ನು ಕೇಳಿ ಆ
ಗಾದರೂ ಆನಂದವಾಗಬಹುದು. ಯಾಕಂದರೆ ತಮ್ಮ ತ
ಗೆ ಸಂತೋಷವಾದಮೇಲೆ ಮಕ್ಕಳಿಗೆ ಸಂತೋಷವಾಗಲೆಕ್

ವೋಕೆ ಆಗೇಆಗುತ್ತದೆ. ಇದರಲ್ಲೇನು ಆಶ್ಚರ್ಯ ಉಂಟು? ಏನೂಇಲ್ಲ. ರಾ. ನಾ. ಪ್ರಿನಸಿಪಾಲ ಧೊರೆಗಳು ಈ ನಮ್ಮ ದಕ್ಷಿಣಭಾಗ ಕಾಲೇಜದ ಪ್ರಿನ್ಸಿಪಾಲರಾದಂದಿನಿಂದ ಕಾಲೇಜ ಪ್ರ ಪ್ರಶಿಕ್ಷಿಗೆ ಬರಹತ್ತಿತು ಅದಂತಿರಲಿ ಈ ಟ್ರೇನಿಂಗಕಾಲೇಜವು ಧಾರವಾಡಕ್ಕೆ ಬಂದನಂತರಂತೂ, ಬಹ್ರ ಪ್ರಸಿದ್ಧಿಪಟ್ಟದಲ್ಲಾಯಿ. ಅತ್ಯುತ್ತಮಸ್ಥಿತಿಯಲ್ಲಿರುತ್ತದೆ. ಹಾಗು ಮೊದಲಿನಕಿಂತ ಅಭ್ಯಾಸವಾದರೂ ಬಹ್ರ ಚನ್ನಾಗಿ ನಡಿಯುತ್ತದೆ, ಆದರೆ ನಾನೇ ಈ ಕಾಲೇಜದ ಪಾರ್ಸೆನೆಮಾಡುವದರಿಂದ ॥ಶ್ಲೋಕ ಆತ್ಮೋತ್ಕರ್ಷಂತಥಾನಿಂದಾಂಪರೇಷಾಂಪರಿವರ್ಜಯೇತ್॥ ಎಂಬ ಶ್ಲೋಕದ ಭಾವದ ಪ್ರಕಾರ ನನಗೆ ಅಹವಾಡ ಬರುತ್ತದೆ. ಅಂದರೆ ತಾನಿರ್ದ ಕಾಲಕ್ಕೆ ಕಾಲೇಜವು ಉತ್ತಮ ಸ್ಥಿತಿಯಲ್ಲಿ, ಹಾಗು ತನಗಿಂತ ಪೂರ್ವದವರಿದ್ದ ಕಾಲಕ್ಕೆ ಸಾಧಾರಣ ಸ್ಥಿತಿಯಲ್ಲಿ, ಎಂದು ಅದು ತೋರಿಸಿದಂತೆ ಆಗುತ್ತದೆ. ತಥಾಪಿ ಸತ್ಯ ಮಾತಿಗೆಎಂದೂ ನಾವಿಲ್ಲ ಇರಲಿ ಈಗ ಕಾಲೇಜವ್ರ ಯಾಕೆ ಉತ್ತಮಸ್ಥಿತಿಯಲ್ಲಿರುತ್ತದೆ ಮೊದಲು ಏನು ಕಾರಣ ಸಾಧಾರಣ ಸ್ಥಿತಿಯಲ್ಲಿತ್ತು ಎಂಬದಕ್ಕೆ ೩।೪ ಸಬಲವಾಡ ಕಾರಣಗಳುಂಟು. ಅವ್ರಗಳನ್ನೂ ಹಾಗು ಕಾಲೇಜದ ವಾಸ್ತವೀಕ ಸ್ಥಿತಿಯನ್ನೂ ಕುರಿತು ನಮ್ಮ ದೇಶಭಾಂಧವರ ಮನಸ್ಸಿನಲ್ಲಿ ಚೆನ್ನಾಗಿ ಬಂಬಿಸುವಂತೆ ಮುಂದಿನ ಸಾರೆ ನಿರೂಪಿಸುವೆನು ಮುಂತೆ ಹಾಗು ಇತರ ಸ್ಥಳಗಳಲ್ಲಿದ್ದ ಕಾಲೇಜದ ಸ್ಥಿತಿಯಂತೆ ಇಲ್ಲಿಯ ಕಾಲೇಜದ ಸ್ಥಿತಿಯಾದರೂ ಇದ್ದು ಅಲ್ಲಿಯಂತೆ ಅಭ್ಯಾಸವಾದರೂ ಬಹಳ ಉತ್ತಮರೀತಿಯಿಂದ ನಡಿಯುತ್ತದೆ. ಅಥವಾ ಅಲ್ಲಿಯ ಕಾಲೇಜಸ್ಥಿತಿಗಿಂತ ಇಲ್ಲಿಯ ಕಾಲೇಜದ ಸ್ಥಿತಿಯು ಎಲ್ಲದರಲ್ಲಿಯೂ, ಒಂದು

ಪಾಲು ಹಚ್ಚು ಎಂದು ಅಂಥವರೂ ಹೋಪ ಮೇನು ಬಾರದು. ರಾ. ಸಾಹೇಬರ ಅಧಿಕಾರಗುಣದಿಂದಲೂ, ಆಳಕೆಗುಣದಿಂದಲೂ, ವಿದ್ವತ್ತ್ವ, ಶಾಂತಿತನ ಹೊಡಾರ್ಯ, ದಯಾ, ವಿಷ್ಣುಕ್ಷಮಾತ ಮುಂತಾದ ಅನೇಕ ಸುಗುಣಗಳಿಂದಲೂ, ಧಾರವಾಡದ ಕಾಲೇಜಿನ ಪ್ರಸ್ತಿಗೆ ಬಂತಲ್ಲದೆ ಮತ್ತೊಂದೇನೂ ಕಾರಣವಿಲ್ಲ ಹೀಗಿದ್ದು ಪ್ರಿನ್ಸಿಪಾಲರ ಸ್ಥಳಕ್ಕೆ ತಕ್ಕ ಭೂಷಣವಾದ ಸಗರ ವಿದ್ದಿಲ್ಲ. ಇದು ನಮ್ಮ ದಕ್ಷಿಣಭಾಗ ಕಾಲೇಜಕ್ಕೆ ಲಾಂಛನ ವಿದ್ದಿಲ್ಲವೋ! ಪರಂತು ಆ ಲಾಂಛನವು ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಥೊರೆಗಳವರ ದಯಾ ದೃಷ್ಟಿಭಾವದಿಂದ ಕಿಂಚಿತ್ ದೂರಾದಂತಾಯಿತು ಇನ್ನೂ ಎಷ್ಟೋ ಪಾಲು ದೂರಾಗತಕ್ಕದ್ದಾಗುತ್ತು. ಆದಾದರೂ ಕಾಲಕ್ರಮೇಣ ದೂರವಾಯೀತೆಂದು ಪೂರ್ಣಕಾಂಕ್ಷೆಯುಳ್ಳವರಾಗಿದ್ದೇವೆ. ರಾ. ಸಾ. ಪ್ರಿನ್ಸಿಪಾಲರ ಯೋಗ್ಯತೆಯು ಬಹು ಅಮೋಲ್ಯ ಇರುತ್ತದೆ. ಇಷ್ಟೇಎಂದು ವರ್ಣಿಸಲಕ್ಕೆ ಬರುವಂತೆ ಇಲ್ಲ ಅಸ್ತು ಜಗದೀಶ್ವರನು ಕ್ರಮ ಕ್ರಮೇಣ ಅವರಿಗೆ ಹೆಚ್ಚಿನ ಯೋಗ್ಯತೆ ಕೊಟ್ಟು ನಿರಂತರ ಸುಖದಿಂದ ನಮ್ಮ ಸದ್ಗುರುಗಳನ್ನೂ, ಅವರ ಮೇಲಾಧಿಕಾರಿಗಳನ್ನೂ, ಹಾಗು ಉಳಿದ ನಮ್ಮ ಮೇಲಾಧಿಕಾರಿಗಳನ್ನೂ, ಕಾಪಾಡಲೆಂದು ನಾವೆಲ್ಲರೂ ಯಿನಾಲೂ, ಸೃಷ್ಟಿಕರ್ತನಿಗೆ ಬೇಡಿಕೊಳ್ಳುತ್ತೇವೆ.

ರಾ. ಸಾ. ಪ್ರಿನ್ಸಿಪಾಲರು ತಮಗಾದ ಆನಂದವನ್ನು ತಮ್ಮ ಎಲ್ಲ ಮಿತ್ರ ಸಮೂಹಕ್ಕೆ ತಿಳಿಸಿ ಅವರನ್ನೂ ಹಾಗು ತಮ್ಮ ಎಲ್ಲ ಪ್ರಿಯ ಶಿಷ್ಯರನ್ನೂ, ಸಂತೋಷ ಪಡಿಸುವದಕ್ಕೋಸ್ಕರ ಇದೇ ೬೦ಗಳ ೧೧ನೇ ತಾರೀಖಿನಯಿವಸ ಉತ್ತಮ ಸಮಾರಂಭವನ್ನು (ಪ್ರಸ್ಥವನ್ನು) ಮುಂಡಿಸಿ ಮಿತ್ರರಿಗೆ ಪರಿ ಪರಿ ಆ

ಗರ ಸತ್ಕಾರದಿಂದ ಭೋಜನಮಾಡಿಸಿ ತಮಗಾದ ಸಂತೋಷ
ಸಂತೆಯೇ ಅವರಲ್ಲಿಯೂ, ಸಂತೋಷವನ್ನುಂಟುಮಾಡಿದರು.
ಷನಂದದ ಪರಿಪಾಟಿಯು ಈ ಪ್ರಕಾರ ವಿರುತ್ತದೆ. ಆ ವೇಳೆ
ಯಲ್ಲಿ ಒಳ್ಳೇ ಹೊಡ್ಡಹೊಡ್ಡ ಸದ್ಗೃಹಸ್ಥರು ಭೋಜನಸಮಾ
ರಂಭಕ್ಕೆ ಬಂದಿದ್ದರು. ಆಗ್ಗೆ ನಾನು ವಂದನ ಮುಂದಮತಿಗನು
ಸಂತರವಾಗಿ ರಾ. ಸಾಹೇಬರಿಗೆ ಸಮಾಚಾರ ಹೇಚ್ಚಾದ ವಿಷಯದ
ಲ್ಲಿಯೂ, ಹಾಗು ರಾವಸಾಹೇಬ ಕನ್ನಡ ತ್ರಾನ್ಸ
ಲೇಟರ ಡಿ. ಎ. ಇನಸ್ಪೇಕ್ಟರ ಮುಂತಾದವರ ಮೇಲೆಯೂ
ಮಾಡಿದಕೆಲವು ಕವಿತೆಗಳುಂಟು ಅವುಗಳನ್ನು ನಮ್ಮ ದೇಶ
ವಾಂಧವರ ದೃಷ್ಟಿಗೆ ಹಾಕಬೇಕೆಂದು ನನ್ನ ಅಲ್ಪಮತಿ
ಯುಪಯೋಕ್ತವಾದದರಿಂದ ಅವುಗಳನ್ನು ಕೆಳಗೆ ಕೊಟ್ಟಿರುತ್ತೇನೆ.
ನಾನು ಅಲ್ಪಮತಿಯುಳ್ಳವನಿದ್ದಕಾರಣ ಅದರಲ್ಲಿ ಅನೇಕ ದೋ
ಷಗಳುಂಟು ಅವುಗಳನ್ನು ವಿದ್ವಜ್ಜನರು ಉಣಿಸದಲೆ ಬರೆಸಾ
ವನ್ನೇ ಮಾತ್ರ ಗ್ರಹಣ ಮಾಡುವರೆಂದು ಪೂರ್ಣಾಭಿಲಾಷೆ
ಯುಳ್ಳವನಾಗಿದ್ದೇನೆ ತಾ. ೧೪ । ೪ । ೮೧

ಶ್ಲೋಕಗಳು.

ಸುವಾರ್ತೆ ಬಂದದ್ದು.

ಕಾರ್ಪೂರ ವಿ.॥ ವಿದ್ಯಾಮುಂಡಿರಿ ಸುಂದರೀ ಸುಗುಣಪಾಲಾರ
ಕಂಧರೀಶ್ವಾರದಾಂ ।
ಸಭ್ಯಾ ಧೈರ್ಯಗಳೈದೆಸತ್ಸೈನುತೆಯಿಂ ಶಿಶಕ್ರಿಷ
ಯಂಗೈಯ್ದರೋಳ್ ।
ಸದ್ವಾರ್ತಾಸಲೆತಾನುಂದು ಮುದದಿಂ ಶಿಷ್ಯಾ
ಭ್ಯಾಯೇಕೇಳರೈ ।

ಭದ್ರಂಭದ್ರಮಿದುಂ ಸುಪಾರ್ತೆ ಸಖೀಸಂ
ನಂದ ಪಾನಂದವೈ ॥ ೧ ॥

॥ ಪಗಾರ ಹೆಚಾಡವಿಷಯುದಲ್ಲಿ ॥

ಪೀತ್ತೀಭ್ಯ ಮ.ಮ.ಸಪ್ಟೊ(ಥಹಿಂತೊರ್ಥಿಕಂನಡಡಕಾಲೆ(ಜಾಥಿಕಾ
ರೀಬುಥಂ ।
ಶನುಕಾಂತಾಯುತ ನೌಭುಜಂಗಥೊರೆಗೇ ಎಂಚಾ
ಶತಂವೇತನಂ ।
ಸಮುದರ್ ವಿದ್ಯಥಿಸದ್ರಸಲ್ಲಿ ಥೊರೆಗಳ್ ಪೆಚ್ಚಾಗಿಯು
ಮೂಡಿದರ್ ।
ಪ್ರಮುಖರ್ ಪಂಡಿತರಿಂಗೆ ಭೂಪ್ಯವಿದುವೇ ನಾಥ
ಕೃಸಾರ್ಥಕೃವೈ ॥ ೨ ॥

ಪಗಾರ ಹೆಚ್ಚಿದ್ದಕ್ಕೆ ಶಿಪ್ಯ ಕೋಟಿಯು ಸಲ
ಹಿದ ಪುಣ್ಯವೇ ನಿಜಕಾರಣವು.

ಪುಲ್ಲಿಕಾ ಮಲಾ॥ ಔವೃಪಾರ್ತಯಃ ಕಾರಣಂ ಭಕಪುಣ್ಯವೇ
ದುಮಿಥೃವೈ ।
ಭವೃಧೈವದ ಲೇಖವೇನಿದುಸತೃಮಾಗದ-ಪೆತ್ತಿ ।
ತ್ರವೃವೃಮತೆಸು ಮಿತ್ರಪುಣ್ಯವೆ ಥೇ ಬಿಡ್ಡೆಯೃದ
ವೇಳುವೇ ।
ಭಾವಪಿಂಸಲೆಶಿಪ್ಯಕೋಟಿಯು ಕಾಯ್ದ ಪುಣ್ಯವೆ
ಸತೃವೂ ॥ ೩ ॥

ರಾವಣಾಹೇಬ ತಾಮ್ರಸ್ಸಲೇಟರ ವಿಷಯುದಲ್ಲಿ ॥

ಕಾಮುದಾ॥ ಔವೃರೂಪಯಿಂ ಸತೃಥರ್ಮಯಿಂ । ಭವೃವಾಣಿಯಿಂ
ವಿದ್ಯಕಾಂಕರಿಂ ॥
ವೈಚಾರಯಿಂಲೋಕರಂಜಪಾ । ದೇವಪಾಹಿಸೀಂ

ತೆಲ್ರೆನ್ಸಲೇಟರಂ ॥ ೪ ॥

॥ರಾಜಾನಿಲ. ಪಿ. ಎ. ಇನಸ್ಪೇಕ್ಟರ ವಿಷಯಮಲ್ಲಿ ॥

ಉತ್ಪ್ರೇಷ॥ ಕಾಮರೂಪ ನಾಮಜ್ಞಾಪ ಸೋಪಕಾಂಕಶಾಂತಿ
ಯಿಂ । ಪಾಪಪಾಣಿ ಬುದ್ಧಿ ಶ್ರೇಣಿ ಪ್ರೋತ್ಸ
ಕಾಯದ್ವೈಪವಾನ್ । ಸೌಭ್ಯಭಾಗ್ಯ ವಿಧ್ಯುತಿ.ಲ ನ
ಷ್ಟಚಾರಧೀರರಂ । ಪಾಪಪೇವ ಪಾಹಿರೊಪ್ಪನಾ
ಭೂಪರುನಿಡಾ ॥ ೫ ॥

ಎಲೆಬರ ನಾಹೇಬರೇ ಪತ್ರವ್ಯವಹಾರವು ವಿಲಂಬವಾದದ್ದಕ್ಕೆ
ಕ್ಷಮಾಪಣೆಬೇಕೆಂದು ವಿನಯ ಪೂರ್ವಕ ಬೇಡಿಕೊಳ್ಳುತ್ತೇವೆ.
ತಾ. ೧೪ನೇ ಪೂಹೆ ಎಪ್ರೇಲ ಸನ್ ೧೮೮೧ ಇಸವಿ.

ಶಿವಾಶಿಜೀ ಯಜ್ಞೇಶ್ವರ ವಾಜಪೆ ಲಕ್ಷ್ಮೇಶ್ವ
ರ ಫರ್ಸ್ಟಕ್ಲಾಸ ವಿದ್ಯಾರ್ಥಿ ಟ್ರೇವಿಂಗಕಾಲೇಜ
ಧಾರವಾಡ.

—೦—

ಯಾವಿ ರಾವಸಾಹೇಬ ಕನ್ನಡ ಶಾಲಾಪತ್ರಿಕೆದ ಯಡಿಟ
ರ ಇವರಗೆ——

ಧಾ ಾಡ ಸ್ಕೂಲ ಕವಿಟಿದಾರ ಗೋವಿಂಡ ವೆಂಕಟೇಶ ಈತ
ನು ಮುಂಬಯಿಯಿಂದ ಕಲ್ಕ ಮಾಡುವದೇನಂದರೆ ಧಾರವಾ
ಡ ಪಹರದಲ್ಲಿ ಇರುವಾ ತಿನೇ ವಂಬರ ಸ್ಕೂಲ ಪರೀಕ್ಷೆ
ಮೆ. ರಸಲ್ ಸಾ. ಬಹಾದ್ದುರ ಎಜ್ಯುಕೇಶನಲ್ ಇನ್ಸ್ಪೇಕಟರ
ರ ಪ್ರಾಂತ ದಕ್ಷಿಣಭಾಗ ಇವರು ತೆಗಿದಕೊಂಡು ಸರಟಿಫಿ
ಕೇಟು ಬರದು ಇಟ್ಟಿದ್ದರ ನಕಲು ಇದರ ಕೆಳಗೆ ಬರದು ಇ
ಧ್ಹೇನೆ ಇದನ್ನು ಪ್ರೈಮಾರಿ ಪತ್ರ ಪ.ಶ ಪತ್ರಿಕೆಯಲ್ಲಿ ಛಾಪು
ಸೋಣ ಅಂತ ಆಶೆಯುಳ್ಳವನಾಗಿರ್ತೇನೆ. ಇದನ್ನು

ದ್ದೈಮೋಯಿ ತಮ್ಮ ಮಾತಪತ್ರಿಕೆಯಲ್ಲಿ ಭೂಮಿಸೋಧಣೆಯಿಲ್ಲದೆ ಆಶಯುಳ್ಳವನಾಗಿದ್ದೆನೆ. ಇದು ಭೂಮಿಸೋಧನದರಿಂದ ಯಾವತ್ತು ಇಲ್ಲಿಯ ಮಾಸ್ತರರು ಸುಧಾರಿಸಲಿಕ್ಕೆ ಮುಖ್ಯ ಕಾರಣವಾಗುತ್ತದೆ.

ಸಾಹೇಬ ಬಹಾದ್ದುರವರು ಬರದು ಇಟ್ಟಿದ್ದ ತಾ. ೧೮ ೩_೮೧ ಇಸವಿ ದಿವಸ ಈ ಸಾಲೆಯು ಪರಿಕ್ಷಿಸಿದೆವು ೧೪೧ ಹುಡುಗರಪೈಕಿ ೧೧೬ ಹುಡುಗರು ಹಾಜರಿದ್ದರು ಈ ಸಾಲೆಯು ಮಾಸ್ತರರು ಬಹಳ ಪ್ರತ್ತಮ ಇದಾರೆ ಅಶಿಷ್ಯರು ವಾಧ್ಯೆಮ ಇದ್ದಾರೆ ಸಾಲೆಯಸ್ಥಿತಿಯು ಪ್ರತ್ತಮ ಭರಭರಾಟಿಯಲ್ಲಿ ಇರುತ್ತದೆ. ಪರಿಕ್ಷೆಯು ಪರಿಣಾಮವು ಚನ್ನಾಗಿ ಇರುತ್ತದೆ. ಈ ಸಾಲೆಯ ಕೋಣೆಗಳು ಸ್ವಚ್ಛ ಪುತ್ತು ಸೋಧಣೆಯಾರ ಇರುತ್ತವೆ. ಮೊದಲನೇ ವರ್ಗದ ಹುಡುಗರು (ಯುಕ್ಲಿಡ) ೧೯ನೇ ಬುಕ್ಕ ತಮ್ಮ ಮುಖಿಯಿಂದ ಪ್ರತ್ತಮರೀತಿಯಾರವಾಗಿ ಮಾಡಿದರು ಮತ್ತು ಯರಡನೆ ವಿಷಯದಲ್ಲಿ ಸರಿಯಾಗಿ ಚನ್ನಾಗಿ ಇದ್ದಾರೆ. ದಕ್ಷಿಣಭಾಗದ ಯಲ್ಲಾ ಸಾಲೆಗಳಲ್ಲಿ ಈ ಸಾಲೆಯು ಬಹಳ ಪ್ರತ್ತಮ ಇರುತ್ತದೆ.

[signed] W. A. Russell.

—o—

ಈ ತರಾ ತರ್ಜಮಾವಾದ ಖಾತಿಬಗ್ಗೆ ಸಾಹೇಬ ಬಾಹಾದ್ದುರವರು ಬರದ ಇಡಲ್ಪಟ್ಟಿದ್ದರಿಂದಾ ಪ್ಲಿಜಿಟರ್ಸ್ ಬುಕ್ಕು ಇದರ ಲಗತ್ತ ಕಳುಹಿಸಿದ್ದೆನೆ ನೋಡೋಣವಾಗಿ ಭೂಮಿಸೋಣ ಆಗಬೇಕಂತ ವಾರ್ಥನೆ ಇಧೆ ತಾ. ೧೯ ಪಾರ್ಬೆ ಸಂವತ್ಸರ ೧೮೮೧ ಇಸವಿ.

ಗೌರವಿಂದ ರಾವ ಪಕೀಲ ಕಮಿಶಂಟೀದಾರ.

ಖಿ. ಖಿ. ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಕ ರಕಮಲದಲ್ಲಿ ಉತ್ಪಾದಿಸುವ ಇದೇ ಯಪ್ರೀಲ ತಿಂಗಳ ಶಾ ಲಾಪತ್ರಿಕೇದಲ್ಲಿ ಛಾಪಿಸಿ ಪ್ರತಿಷ್ಠಾಪಿಸಬೇಕೆಂದು ಸ್ನೇಹಾ ಕಾಂ ಕ್ಷೆಯಿಂದ ತಮ್ಮ ಸನ್ನಿಧಿಗೆ ಕಳುಹಿಸಿಕ್ಕೇವೆ.

ನಾವು ನಮ್ಮ ಸಾಲೀಯ ನಿವಿಡಿವಸ ಮುನಿಯಲ್ಲಿ ಕೆ ಲವ್ರ ಅಭ್ಯಾಸ ಮಾಡಿ ಆ ಬಳಿಕ ನಾಲ್ಕನೇ ಪುಸ್ತಕದ ಒಲನೇ ಪಾಠ [ಭೋಜನ ನಿಯಮ) ಯಂಬ ಪಾಠವನ್ನು ಓದುವಾ ಗ್ಗೆ ಅದರಲ್ಲಿ ನಮಗೆ ಸಂಶಯ ಬಂದದ್ದು ಯೇನಂದರೆ; ಸದರಪಾಠದ ಆರನೇ ಸಡರಿನಲ್ಲಿ " ತಮಗೆ ಶೇರುವ ಪದಾ ರ್ಥವನ್ನೇ ತಿನ್ನಬೇಕು" ಅಂತ ಅದೆ. ಅಂದಬಳಿಕ ಬ ಡಜನರಿಗೆ ಶೇರುವಪದಾರ್ಥ ಅಂದರೆ ಹೋಳಿಗೆ ತುಪ್ಪ, ಬೂಂ ದಿ, ಲಾಡು, ಈ ಪ್ರಕಾರ ಅವರಿಗೆ ಶೇರುವಪದಾರ್ಥವಸೆ. ಅಂ ತ ತಿಳಿದರೆ ಅವರಿಗೆ ಯೆಲ್ಲಿಂದ ದೊರಿಯುವದು, ದೊರಿಯು ವದಿಲ್ಲಾ ಅಂದಬಳಿಕ ಅವರು ಶೇರದೆ ಇರುವಪದಾರ್ಥವನ್ನು ತಿಂದು ಉಪಜೀವನ ಮಾಡುತ್ತಾರೆ. ಇದರಿಂದ ಅವರು ರೋ ಗಗ್ರಸ್ತರಾಗಬೇಕು. ಹಾಗೆ ಆಗದೆ ಅವರು ಯಲ್ಲಕಿಂತಲೂ ಅರೋಗ್ಯತೆಯುಳ್ಳವರಾಗಿ ಶರೀರ ಸಂಪತ್ತಿಯಾದರೂ ಚನ್ನಾ ಗಿ ಇರುತ್ತದೆ. ಇದು ಯಲ್ಲರ ಸ್ವೀಕೃತಿಯಲ್ಲಿ ಬಂದಹೆ ಆದ್ದರಿಂದಾ ಸದರೀ ಛಾಪಿನಲ್ಲಿ ಬರಿದ ನಿಯಮಕ್ಕೆ ಈ ಪೂ ತಿನ ಪೃತ್ಯೆಯೇ ಬಂದಂತೆ ಆಯಿತು ಮತ್ತು ಶ್ರೀಮಂತರು ನಮಗೆ ಯಾವಪದಾರ್ಥ ಶೇರುವಸೋ ಅದು ಶಿಗುವಂತೆ ಇದ್ದು ಅವರಲ್ಲಿ ಅಶಕ್ತ ಜನ ಇದ್ದಾಪ್ಪು ಬಡಜನರಲ್ಲಿ ಇರುವಿಲ್ಲ. ಇದರಕೊತ್ತ ಅನೇಕ ಕಾರಣಗಳು ಉಂಟು ಆವತೆ ನಮ್ಮ ಅಲ್ಪಮತಿಗೆ ತಿಳಿದಷ್ಟು ಸಂಕಲ್ಪ ಬರಿದು ಕೊಂಡಿಸ್ಕೆ ಪ್ಪೆ,

ಅವರೆ ನಮ್ಮ ಗುರುಗಳಾದ ಮಾಸ್ತರ್‌ಜನರು ಹಾಗೂ ನಮ್ಮ ಬಾಂಧವರಾದ ವಿದ್ಯಾರ್ಥಿಗಳು ಯಾರಾದರೂ ಇದೇ ಪತ್ರದ ದ್ವಾರದಿಂದ ತಿಳಿಸುವರೆಂದು ನಂಬಿಕೊಂಡಿದ್ದೇವೆ. ಈ ಮಾತಿನ ಸಂಶಯವನ್ನು [ಇಲ್ಲಿ] ನಮ್ಮ ಗುರುಗಳಿಗೆ ಸಾಲಿ ಸುರು ಆದ ದಿವಸ ಕೇಳಿಕೊಂಡು ನಮ್ಮ ಸಂಶಯ ಪರಿಹರಿಸಿ ಕೊಳ್ಳುತ್ತೇವೆ. ಆಪರೆ ಈ ಮುದ್ರಪತ್ರಿಕೆಯ ದ್ವಾರದಿಂದ ಹ್ಯಾಗೆ ಬರೆದು ಬರುವದೆಂದು ಬಹು ಅಪೇಕ್ಷೆಯುಂಟು ಪತ್ರವಿಸ್ತಾರವಾಪಡಕ್ಕೆ ಕ್ಷಮಾ ಇರಬೇಕೆಂ. ಇಂತಿ ವಿನ್ನಪ: ತಾ. ೨೪ | ೫ | ೮೧ ಇಸವಿ.

ಅಪ್ಪಣ್ಣಾ ಪುಳಪ್ಪ
ಹನಮಂತ ಬಾಳಾಜಿ
ಮುಕ್ಕಾಮ ಕಲಾದಗಿ

} ಶ್ರೀಶೈಲಮುಯಿಯಪ್ಪಾ
ರಘುನಾಥ ಜೀವಾಜಿ

ವಿದ್ಯಾರ್ಥಿ ಕನ್ನಡ ಶಾಲಾ ಕಲಾದಗಿ

—೦—

ರಾ. ಸಾ. ಕನ್ನಡ ಶಾಲಾಪತ್ರಿಕದ ಪಿಡೀಟರ ನಿನ್ನಿಥಾನಕ್ಕೆ

ವಿ. ವಿ. ಐಯ್ಯಾ ಇದೇ ತಾಲೂಕ ಆಡೂರ ನಾಲಿಯ ಮಾಸ್ತರರ, ಸಮಾಧಾನಾರ್ಥವಾಗಿ, ನಾಲ್ಕು ಪಂಗ್ತಿಗಳನ್ನು ಬರೆದು ಕಳುಹಿಶಿದ್ದೇನೆ. ಅವನ್ನು ಮುಂದಿನ ಸಂಚಿಕೆಯಲ್ಲಿ ಮುದ್ರಿಸಿ, ಅವರನ್ನು ಸಮಾಧಾನ ಗೊಳ್ಳಿಸ ಬೇಕೆಂದು ಬೇಡಿಕೊಳ್ಳುತ್ತೇನೆ. ನನ್ನ ಜನ್ಮ ಭೂಮಿ ಆಡೂರು ಇದ್ದು ನದರ ಕೆರಿಯವಿಷಯವಾಗಿ ನನಗೆ ಪೂರ್ಣ ಮಾಹೀತಿಯುಂಟು. ನದರಕೆರಿಯು ಎರಿ ಉತ್ತರದಕ್ಷಿಣ ಹಬಿದ್ದು, ಅದರ ಪಶ್ಚಿಮಕ್ಕೆ ೧೦—೧೫ ಮೊಳ ದೂರ ಮಾವಸ್ತು ಮೆಳೆಅಗಲವಾದ ತಗ್ಗುಪ್ರದೇಶವಿದ್ದು ಅದರಾ ಆಚೆ ಪಶ್ಚಿಮಕ್ಕೆ ಕೆರಿಯ ಅಂಗಳವೆಂಬ ತೀರ ಸಮಾಟುಗುಳ್ಳ ಎರಿ

ೂಮಿಯು ನೆಲವಿದ್ದು ಕಾರ್ತಿಕ ಇಲ್ಲವೇ ಮಾರ್ಗಶಿರ ಅಥವಾ
ಷ್ಯ ಇಲ್ಲವೇ ಮಾಘಮಾಸಗಳಲ್ಲಿ ಪೂರ್ವದ ಮೂಡ ಷಾ
ಒಳಿತಾಗಿ ಬೀಸುವದರಿಂದ, ತತ್ಕಾಲಕ್ಕೆ ಆ ತಗ್ಗು ಪ್ರದೇಶವು
ಾಸಮಟ ತುಂಬಿ ನಿಂತಿದ್ದರೆ ಪೂರ್ವ ದಿಕ್ಕಿನಿಂದ ಘಾಳಿತಗಲಿ
ಗಳು ಹುಟ್ಟಲಾರಂಭಿಸಿ, ಪಶ್ಚಿಮಕ್ಕೆ ಇರುವ ಆ ಸವನೆಲದ ಮೇ
ನೀರುಬಿದ್ದು, ಬಿಸ್ಲು, ತೊಯಿಸಿಕೋತಾ ಎರೆ ಬೀಡುಗಳಲ್ಲಿ
ಮೂವತ್ತು ನಾಲ್ವತ್ತು ಅಡಿ ಅಗಲವಾದ ಪ್ರದೇಶವೆಲ್ಲ ಜಿಲಕ
ೀರಾಗುತ್ತವೆ; ಅದಕ್ಕೇ ಕೆರಿಯುಗುಕ್ಕೋಣ ಎನ್ನುತ್ತಾರೆ. ಆದರೆ
ಮಯಾತಕ್ಕಿಂದ ಹೀಗಾಗುತ್ತದೆಂಬ ವಿಚಾರವೇ ಅವರು ಮಾಡು
ವಿಲ್ಲ. ತಕ್ಷ ಬಲ್ಲವರು ಒಬ್ಬಿಬ್ಬರಿದ್ದಾರೆ, ಅವರ ಮಾತು ಯಾ
ಾ ನಂಬುವವಿಲ್ಲ ಹೀಗಾಗಿ (ಹತ್ತಾರಕೂಡ) ಹನ್ನೊಂದು ಪರಿ
ುಕೂಡ ಗೋವಿಂದ, ಎಂಬ ಗಾಪೆಗೆ ಸರಿಯಾಗಿ ಬಲ್ಲವನು ಸಹ
ಪರಂತೆನೇ ನುಡಿದು, ನಾಚಿಕೆ ಪಟ್ಟು, ಮನೆಗೆ ಹೋಗಬೇಕಾ
ುತ್ತದೆ. ಪೂರ್ವದಲ್ಲಿ ಅಂದರೆ ೧೦|೧೫ ವರುಷಗಳ ಕೆಳ
ಮೆ. ಕಮಿಷ್ಮನರ ಧೊರೆಗಳೂ ಪ ಕಲೇಕ್ಟರ ಧೊರೆಗಳೂ
ಾಡಿ ಈ ಊರಿಗೆ ಬಂದಾಗ, ಈ ಕೆರೆಯು ಉಕ್ಕುತ್ತದೆ ಅಂತಾ
ಳಿ ಅಲ್ಲಿಗೆಬಂದು ನೋಡಿ ವಷ್ಟರಲ್ಲಿ ಘಾಳಿಯಿಂದಲೇ ನೀರು ಏ
ುತ್ತದೆಂಬ ಸಿಧ್ಧಾಂತ ಮಾಡಿ ಹಿಂದು ಜನರ ದಡ್ಡತನಕ್ಕೆ ನಕ್ಕು
ಾರುವು ಹೋದರು, ದರವಗುಷ ಮೇಲಿನ ತಿಂಗಳಲ್ಲಿ ಮೂಡ
ಳಿಇದ್ದು ಸರ್ವದಾ ಉಕ್ಕುವದೇ ಅಕಸ್ಮಾತ್ತ ಹೀಗಾಗುವ ಕಾರ
ಣವೇನು; ಎಂತಾ ಆಕ್ಷೇಪ ಉಂಟಾಗುತ್ತದೆ, ಅದಕ್ಕೆ ಇಷ್ಟೇ
ುತ್ತರ ಅದಲ್ಲಾ. ಆ ತಗ್ಗು ಪ್ರದೇಶವೂ ಅಂಚುಮಟ ನೀರುತುಂ
ಾಗಲೇ ಘಾಳ ಇರಲಿಕ್ಕೆ ಬೇಕು. ಇದಕ್ಕೆ ದ್ರಷ್ಟಾಂತ ಸಮಾಟ
ವ ತೆಲಿವ ಮೇಲೆ ನೀರು ಹಾಕಿಟ್ಟಬಿದರೆ ಯಾವಧಿಕ್ಕಿನಿಂದ ಳ್ಳ

ಬುತ್ತೆಯೋ, ಆದರ ವಿರುದ್ಧದಿಕ್ಕಿಗೆ ನೀರು ಪ್ರವಾಹ ಬಾಗುತ್ತ
ಹಾಗೂ ನಿಂತನೀರಿಗೆ ಬಿಟ್ಟುತಗಲಿಸಿ ಹಾಗೇ ಮುಂದಕ್ಕೆ ಎಳೆಯ
ತ್ತಹೋದಹಾಗೆ ತೋರಿದ ನೆಲದಲ್ಲಿ ನೀರು ತುಂಬುತ್ತ ಹೋಗ
ತ್ತದೆ. ಈ ಮೂತು ಸಮುದ್ರ ತೀರದಲ್ಲಿದ್ದವರು ಚನ್ನಾಗಿಬಲ್ಲ
ಸರದರ ಮಾಸ್ತರರು ಕೆರೆಯು ಸುತ್ತುಮುತ್ತ ಉಕ್ಕದೇ ಶು
ಷಶ್ಚವಾಕ್ಕೆ ಯಾಕೆ ಉಕ್ಕುತ್ತದೆಂದು ಕೇಳಿದ್ದಾರೆ. ಇದರಮೇಲೆ
ದಲೇ ಮೇಲಿನ ಸಿದ್ಧಾಂತ ಸಿದ್ಧವಾಗುತ್ತದೆಂಬಮಾತು ಅ
ರಿಗೆ ತಿಳಿಯದೆ ಇದ್ದದ್ದು, ಆಶ್ಚರ್ಯಕಾರಿಯಾಗುತ್ತದೆ. ವಿದ್ಯಾ
ರಾಯರೇ ಪತ್ರವಿಸ್ತಾರವಾಯಿತು. ಅದಕ್ಕೆ ಉಪಾಯವಿಲ್ಲ
ಯಾಕಂದರೆ, ವಿಸ್ತಾರಬರಿಯದೆ ಸಂದೇಹ ನೀಗುವದಿಲ್ಲ ತಂ
ಭೆಟ್ಟಿಯಲಾಭ' ಬಹುದಿವಸಕ್ಕೆ ಆಸ್ಪದ ಸೋದಿ, ನನಗೆ ಅತ್ಯಾನ
ದ ವಾಯಿತು. ಲೋಭವಿರಲಿ ಸ್ವಾಮಿ! ನಾನು ನನ್ನ ನಿತ್ಯ
ಲಸಕ್ಕೆ ತೊಡಗುತ್ತೇನೆ. ತಾ. ೨೦ | ೪ | ೮೧ ಇಸವಿ

ಮುಕ್ಕಾಮು ಬಂಬುನಹಳ್ಳಿ
ತಾ. ಹಾನಗಲ್ಲ ಜಿ. ಧಾರವಾಡ } ಸಹಿ ಜಗನ್ನಾಥ ಶ್ರೀಧರ ಗೋಳೆ
ಲೇ ಹೆಡ್ಡ ಮೂ. ಬಮ್ಮನಹಳ್ಳಿ

—o—

ರಾ. ಸಾ. ಕನ್ನಡ ಶಾಲಾಪತ್ರಿಕೆಯು ಎದಿಟರ ಸನ್ನಿಧಾನಕ್ಕೆ
ವಿ. ವಿ. ಕೆಳಗಿನ ಸಾಲ್ಕುಸಂಗ್ತಿಗಳಿಗೆ ತಮ್ಮ ಕರಕಮಲದಲ್ಲಿ ಉ
ದ್ಭವಿಸುವ ಸುಂದರ ಶಾಲಾಪತ್ರಿಕೆಯಲ್ಲಿ ಸ್ಥಳ ದೊರೆಯುಬೇಕು

ನಿರಾಶೆ

ಸನ್ ಮುಜಕ್ಕೂರ ಜನಪರಿತಿಂಗಳ ಶಾಲಾಪತ್ರಿಕೆಯಲ್ಲಿ ಥಾಮ
ಸಲ್ಪಟ್ಟಿ ಸರಕ್ಯೂಲರ ನಂಬಾನೆದ್ದು "ಅಂಟ್ರೆನ್ಸಿಂಡ ಪೂಸ್ತರ ಆ
ಪೂಸ್ತರ ಜನರಿಗೆ ಟ್ರೇನಿಂಗಕಾಲೇಜ ಪರೀಕ್ಷಕ್ಕೆ ಬರಲಿಕ್ಕೆ ಪರವಾ
ನಗಿ ಕೊಟ್ಟಿಸೆ ಎಂಬುವ." ನೋಡಿ ಬಿದ್ದ ಪರಮಾನಂದನನ್ನು 'ಗ

ಸ್ಪಿನ ಬೆಟಗೇರಿ' ಇವರು ಪ್ರಕಟಿಸಿರುತ್ತಾರಷ್ಟೇ; ಆದರೆ ನನ್ನ ಬಾಂಧ
ವನಾದ ನನ್ನ ಗೆಳೆಯ ನೇ ಇಸವಿ ಇತ್ತ್ಕಡೆಗೆ ನೇಮಿಸಲ್ಪಟ್ಟ ಒಂ
ಬ್ಬ ಮುಲ್ಕಿಪರೀಕ್ಷೆ ಪಾಸಾದ ಮೂಸ್ತರನು ಸಂಶಯದಿಂದ ಪರವಾ
ನಗಿ ಬೇಡಿರಲು ಅದಕ್ಕೆ 'ಈ ಪರವಾನಗಿ ನಿಮಗೆ ಶಿಗಲಾರದು
ನನ್ನ ಗೆಳೆಯನಿಸ್ಸಿ ಮುಂಜಿನವರಿಗೆ ಮೂತ್ರವೇ ಉಂಟೆಂದು
ಹೇಳಿದ್ದು ಆದಂತೆ ಕೇಳುತ್ತೇನೆ!! ಆದರೆ ನನ್ನ ಗೆಳೆಯ ನಿಸ್ಸಿ
ರುಂಜಿನ ಅಂಟ್ರೇಡರು ಸ್ವಲ್ಪ ಪಂಥಿಯೇ ಇರಬಹುದು, ಇ
ತ್ತ್ಕಡೆಯವರೇ ಒಹಳ ಪಂಥಿ ಇರುತ್ತಾರೆ ಅವರಲ್ಲಿ ಕೆಲವ
ರು ಮುಲ್ಕಿಪರೀಕ್ಷೆಯಲ್ಲಿ ಪಾಸಾಗಿದ್ದಾಗ್ಯೂ ಕಾಲೇಜದಲ್ಲಿ ಆ
ಎಲ್ಲರಿಗೂ ತಗೊಳ್ಳಲಕ್ಕೆ ಮೂರ್ಗವಿದ್ದಂತೆ ತೋರದ್ದರಿಂದ ಅ
ವರು ತಮ್ಮ ಕೆಲಸದಲ್ಲಿ ಎಷ್ಟು ಶ್ರಮ ತಗೊಂಡರೂ ಒಡನೇ
ಜಾಗಾ (೧೦೦ರೂ. ದ ಮೇಲಿನದು) ಹಡೆಯಲಶಕ್ಯರೇ ಕಾರಣ
ನಮ್ಮ ಪಯಾಸಿಥಿಗಳಾದ ಇನಸ್ಪೆಕ್ಟರ ಥೊರೆಗಳವರು ಅವರೆಲ್ಲ
ರಿಗೆ ಕಾಲೇಜದ ಸರಟಿಫಿಕೇಟ ಪರೀಕ್ಷಕ್ಕೆ ಸರಳಕ್ಕೆ ಪರವಾನಗಿಯ
ನ್ನಿತ್ತು ಅವರ ಶ್ರಮದ ಫಲವನ್ನುಡುಪಡಕ್ಕೆ ಯೋಗ್ಯರಂಮಾಡುವ
ರೆಂದು ಪೂರ್ಣವಾಗಿ ನಂಬಿದ್ದೇನೆ ತಾ॰ ೧೪।೪।೮೧ ಇಸ್ವಿ
ಜಿವಾಜಿ ಶೇಷಗಿರ ಹರಿಹರ ಅ. ಮಾ. ಹಿರೇಕೆರೂರ ತಾ. ಕೋಡ

—o—

ಶಿಂಪಗಿಯ ಬಿಂದಗಿಯ ವರ್ಣನೆ

ರಾ. ರಾ. ಕನ್ನಡಶಾಲಾಪತ್ರಕದ ಕರ್ತರರಿಗೆ——

ಪತ್ರಕರ್ತರಾಯರೇ ಈ ಕೆಳಗಿನ ಪದ್ಯಕೂರು ಒಹಳಪಮಾತ್ಯ
ರವಿದ್ದದರಿಂದ ಕ್ಷಮ ಸುಂದರವಾದ ಪುಸ್ತಕದಲ್ಲಿ ಜಾಗ
ಕೊಕ್ಕದೆಂದು ಬಂಹ ಸಾಗಿಸುತ್ತೇನೆ

ಕನಬಾ ಬಿಂದಗಿ ತಾಲೂಕ ಪದ್ಯಕೂರು ಈ ಊರು ಚಂದ

ವಾಗಿ ಪ್ರಶಿದ್ಧ ವಾದದ್ದು ಊರ ದಕ್ಷಿಣ ಭಾಗಕ್ಕೆ ಶ್ರೀ
ಗಮೇಶ್ವರ ದೇವರ ದೇವಾಲಯವಿದ್ದು ಇಲ್ಲಿ ಕಾರ್ತಿಕ ಸ
ಸದಾಳಗೆ ರೀಪೋತ್ಸವ ಜನ್ನಾಗಿ ಆಗುತ್ತದೆ, ಪಶ್ಚಿಮ ಭಾಗ
ಕಚೇರಿ ವ ಬಂಗಲೆ ಧರ್ಮವುಳದ್ದು ಪೂರ್ವದಲ್ಲಿ ಶ್ರೀನೀಲಗರಗ
ನ ಗುಡಿಯುಂಟು ಇಲ್ಲಿ ಕಾರ್ತಿಕ ಪ್ರ ಸಿ ಪವನಾ ಪುರಾಣ
ರಶಿದ ಮೇಲೆ ಬಹಳೇ ಬೆಂಗಿನಕಾಯಿ ಒಡಿಯುತ್ತಾರೆ. ಜಾ
ಬಹು ಚಂದವಾದದ್ದು ಉತ್ತರ ಭಾಗಕ್ಕೆ ಶ್ರೀ ಸಂಕಪ್ಪಯ
ನವರ ಮಠ ಉಂಟು ಅವರ ಸಂಕ್ಷಿಪ್ತ ಇತಿಹಾಸ ಸು.ಪೂ
(೩೦೦) ವರ್ಷಗಳ ಹಿಂದೆ ಸಂಕಣ್ಣನ್ನ ಕುಲಕರ್ಣಿ ತಿಂದಿಗ ಇ
ರು ಬ್ರಾಹ್ಮಣರ ಗುರುಪಯ್ಯನವರಕಡಿಇಂದ ಬೊಧೋತರಾಗಿ ಬಿಂ
ಗಿ ಪೂಜಾ ಗಾರಗಳ ಅಪ್ಪಣೆ ಮೇರಿದೆ ಶ್ರೀ ಸಂಕಪ್ಪಯ್ಯನವ
ಕ್ರಮ ನಡಶಿದರು ಅಲ್ಲಿಂದ ಅವರ ಸಂತತಿಗೆ ಶ್ರೀ ಸ
ಕೃಷ್ಣಯ್ಯನವರು ಎಂಟುವರು ಪ್ರಶಿಷ್ಟರಾಗಿ ಅನೇಕ ಕೌತ
ಕ ತೋರಸಿ ಪ್ರಾಣ ಪಡಿದರಂತೆ ಅವರ ವಂಶದವ
ಈಗ ಶ್ರೀ ಅವಯ್ಯನವರು ಇದ್ದಾರೆ ಇವರು ಹಿರಿಯರ ಮ
ದಿದ ಸಾಂಪ್ರದಾಯ ನಡಿಸುತ್ತಾರೆ ದರ್ಮರ್ಥ ಆಶ್ವಿನ ಪಾಡ್ಯ ೧
ಲಿಗೂ ಪವನಾ ಪಂಜಿ ೩೪ ಬಡಿಯೋವ್ಯಾಳಿಕ್ಕೆ ಅರ್ಥಾ ಘ
ಟ ಎತ್ತರ ಇರೋದು ಒಂದು ಕಟ್ಟಿಯುಂಟು ಅದರ ಮಧ್ಯದ
ವದು ಘೂಟು ಬೆಚ್ಚೌಕ ವಂದು ಘೂಟು ಖೋಲವಾದ ವಂದ
ತೆಗ್ದು ಇದ್ದು ಅದರ ಮೇಲೆ ಪಾದುಕ ಕಲ್ಲು ಸದರಿ ಹೊತ್ತಿ
ತೆಗಿಯುತ್ತಾರೆ ಜಾಗಾಸ್ಪಶ್ಚ ಮಾಡಿ ಬಿಂಡಗಿ ೪೫ ನಾಲ್ಕೆ
ಹುತರಬಿ ನೀರು ಹಿಂಡಿಯುವಷ್ಟು ಮುಂಗಿನ ಬಿಂದಗಿ ತಂದ
ಅದಕ್ಕೆ ಸುಂಗಂಧ ಕಚ್ಚಿ ಅದರ ಮೇಲೆ ನಾಮೂವಳ ಬರದು ಸ

ಶನೇಪರ ಸ್ಮರಣಾ ಮಾಡುತ್ತಾ ಎಲ್ಲರ ಸಮಕ್ಷಾ ಆ ಬಿಂದ
ು ತಂದು ಸ್ವಚ್ಛವಾದ ತಗ್ಗಿನಲ್ಲಿ ಇಟ್ಟು ಮೇಲೆ ಪಂದು ಭದ್ರಾ
ರ.ವ ಮುಚ್ಚಳ ಇಡುತ್ತಾರೆ. ಅದರ ಮೇಲೆ ಭದ್ರ ಇದ್ದ ಚೌಕಿ
ಫಳಿ ಇಟ್ಟು ನಾಲ್ಕು ಕಡಿಗೆ ೨|| ಅಂಗುಲ ಉದ್ದ ಇರುವ ಕಟ್ಟಿ
ಗೆ ನೀರು ಹೊರಗೆ ಹೋಗದಂತೆ ಜೋಡಿಸಿ ಕುರ್ಮ ಮುಖದಂತೆ
ಎರೆಮಣ್ಣಿನಿಂದ ಅದರಂತೆ ಮಾಡಿ ರಂಗಾವಳಿ ಹೊಯ್ಯುತ್ತಾರೆ
ಆಮೇಲೆ ಶ್ರೀ ಅಪ್ಪಯ್ಯನವರು ಸ್ನಾನ ಪಗ್ಯೆರೆ ಮಾಡಿ ಬಿಂದಗಿ
ಇಟ್ಟ ಜಾಗೆದ ಎದುರಿಗೆ ಬಂದು ಕೂಡ್ರುತ್ತಾರೆ ಆಪರ ಎದುರಿ
ಗೆ ಪಂದು ಜೋಕಿ ಇಟ್ಟಿರುವರಂತೆ ಅದರಮೇಲೆ ಪಬ್ಬೊಬ್ಬರೆ
ಭೂಸುರರು ಕೂಡ್ರುವರು

ದರಭೂಸುರರಿಗೆ ಪಂದ ತಂಬಿಗ ತುಂಬ ನೀರು ಆ ಫಳಿಮು
ಗ್ಯಡಲ್ಲ ಆಪರ ಎಾಪ ಇಟ್ಟು ತೊಳಿಯುತ್ತಾರೆ ಆ ನೀರು ಮೇ
ಲೆ ತೋರಶಿಪ ಫಳಿ ಪುಡಿವಳಗಿಂದ ಮುಚ್ಚಳಕೆಳಿದ್ದು ಬಿಂದಗಿ
ಯಲ್ಲಿ ಪ್ರವೇಶ ಮಾಗುತ್ತದೆ ಹೀಗೆ ಎಷ್ಟು ಭೂಸುರರೂ ಬಂ
ದಾರು ಆಪರ ಪೂಜಾಮಾಡುವಂತೆ ಕೊನೆ ನೇಮದ ಬ್ರಾಹ್ಮ
ಣನ ಪಾದಪೂಜೆಗೆ ನಿದಾನ (೫)ತಂಬಿಗ ನೀರು ಇರಲಿಕ್ಕೆಬೇ
ಕು ಆ ನೀರು ಇರಿಸಿದ್ದರೆ ಮತ್ತು ಪಂದ ಬಿಂದಗಿ ನೀರು
ತರುತ್ತಾರೆ ಈ ಪ್ರಕಾರ ಪಂದೊಂದು ವೇಳೆ(೧೦|೧೫)ಬಿಂದಗಿ
ನೀರು ಬೆಕಾಗುತ್ತದೆ ಪೂಜಾ ಆದ ಮೇಲೆ ಬ್ರಾಹ್ಮಣರ ಭೋ
ಜನ ಸುರು ಆದ ಬಳಿಕ ಶ್ರೀ ಅಪಯ್ಯನವರು ನಡರಿ ಫಳಿತೆ
ದು ಬಿಂದಗಿ ಎಲ್ಲರಸಮಕ್ಷಾ ಮೋಡಲಾಗಿ ೪|೬|೮ ಅಂಗುಗ
ಳಗರ ಗೇಣಿನ ಮೇಲೆ ಬಿಂದಗಿ ಯಲ್ಲ ನೀರು ಕಡಿಮಿ ಇ ಲ
ತ್ತದೆ ಈ ವರ್ಷ ಮೊನ್ನೆ ಅಂದರೆ(೨೩ನೇ ಪದ್ಯ ೨)ಯಪಸಾ ೮
ದು ಅಂಗುಲ ಕಡಿಮಿ ಇತ್ತು ಇದು ಮುಂದಿನ ವರ್ಷದ ಬಿ ಎ

ಈ ಜಾಗಾ ಸ್ವಚ್ಛ ವ ಬೈಲಿಗೆ ಇದ್ದು ನೀರು ಎಂದೂ ಹೊರಬಿಳೂ
ಯಿಲ್ಲಾ ಆ ಬಿಂದಗಿ ಆಕ್ಷಣಕ್ಕೆ ಎಲ್ಲರ ಸಮಕ್ಷಾ ತಗಸು ತೋರಿಸು
ತ್ತಾರೆ ಅದರಬುಡಭಾಗಕ್ಕೆ ಲೆಶತಾ: ಜಲಧ್ರುವ ಇರೋದಿಲ್ಲಾ
ಈ ಬಗ್ಗೆ ಚಿನ್ನಾನಿಗಳೂ ಶಿಡ್ಡಾ ಪುರುಷರ ಮಾಹಿತ್ಮಿ ಎಂದು ತಿಳಿ
ಯುತ್ತಾರೆ ಈ ಮತದ ಹಿಂದಾ ಸಗರ, ವ ಸುರಪುರ ಇಲ್ಲಾ
ಖಾ ವ ಆಲಂಥಿ, ಕಲಬುರ್ಗಿ, ವ ಧಾರವಾಡದ ಕಡೆಗೆ ಎನಕೆ ಇ
ನಾಮು ನಡಿಯುತ್ತದೆ ಈ ಮಾಹಿತ್ಮಿ ಬಗ್ಗೆನವೀನಸುಧಾರಶಿಕ್ಷಜನ
ನರಿಗೆ ವಂಬಗೆ ಬೇಕಾದರೆ ರಾವಸಾಹೇಬ ಹಣಮಂತರಾವ
ಕೃಷ್ಣ ಮಾಮಲೇದಾರ ಶಿಂದಗಿ ವ ರಾ. ಸಾ. ವೆನಶಿನದಾರ ಕೃ
ಷ್ಣರಾವ ನರಶಿಂಹ್ವ ರಾ. ರಾಘೊಪಂತ ದೆಪತ್ರಾತ ಮಾಸ್ತರ
ಶಿಂದಗಿ ಇವರಿಗೆ ಪ್ರಶ್ನ ಮಾಡಿ ವಿಚಾರಶಿದರೆ ಅವರಿಗೆ ಮು
ನಸದಟ್ಟಿ ಖಾತ್ರಿ ಆದೀತು ಇದೇಮೇರಿಗೆ ಎರಗಲ್ಲ ಬು. ತಾ.
ಶಿಂದಗಿ ಇಲ್ಲಿ ನಹ ಚಮತ್ಕಾರ ಆಗುತ್ತದೆ ಈಗ ಎರಗಲ್ಲ ಬಿಂದಗಿ
ಮಾಹಿತ್ಮಿಬಗ್ಗೆ ದೇಖರೇಖಿ ಪಗ್ಸೆರೆ ರಾ. ಸಾ. ಕೃಷ್ಣರಾವ ವೆನಶಿ
ನದಾರ ಶಿಂಡಿಗಿ ಕರ ಇವರೇ ಚಾಲುಮಾಡಿಸುತ್ತಾರೆ ವ ಮಾಶಾಳ
ದಲ್ಲಿ ಮಾರ್ಗೆ ಶಿರ್ಷ ಶು. ೩ ರವಿವಸಾ ಬಿಂದಗ್ಗಿ ಮಹತ್ಮಿ ನಡಿಯು
ತ್ತದೆ. ಯಿಂತಿ ವಿನ್ನಾಪಾ: ತಾ. ೨೯।೩।೨೧ ಇಸವಿ

ರಂಗೊ ಕೃಷ್ಣ ಬೀಳಗಿ ಸ್ಕೂಲಮಾಸ್ತರ ತಿಳಗೂಳ

—— o ——

ಶಾಲಾಪತ್ರಕವ್ರ.

ಎಸ್ತಕ ೧೬] [ಸಂಚಿಕೆ ೫

ಮೇ ೧೮೮೧

Visits to schools.
ಶಾಲೆಗಳ ಪರೀಕ್ಷೆ, ೩.

ಒಳಗಡೆಯಲ್ಲಿ ಕಮಿಷೇದಾರರು, ಡೆ. ಇನಸ್ಪೆಕ್ಟರರು, ಮುಂತಾದ ಅಧಿಕಾರಸ್ಥರು ಶಾಲೆಗಳಲ್ಲಿ ಹೋಗಿ ವಿದ್ಯಾರ್ಥಿಗಳನ್ನು ಪರೀಕ್ಷೆಸಿದ ಮುಂತಾದ ಸಂಗತಿಗಳ ಪತ್ರಗಳನ್ನು ಬಹು ಜನ ಪಾಸ್ತರರು ನಮ್ಮ ಕಡಿಗೆ ಕಳಿಸುವ ಕ್ರಮ ನಡಿಸಿದ್ದಾರೆ. ಹೆಚ್ಚಾಗಿ ಧಾರವಾಡ ಜಿಲ್ಲೆಯ ಪತ್ರಗಳೇ ಬಹಳ ಬರುತ್ತವೆ. ಅವರೆ ಬಹು ಜನ ಪತ್ರಲೇಖಕರು ಅರ್ಥಾರ್ಥ, ಒಂದೊಂದು ಹಾಳಿ ತುಂಬಿದ ಹೊರ್ತು ತಮ್ಮ ಪತ್ರಗಳನ್ನು ಮುಗಿಸುವಿಲ್ಲ. ಅಂಥಾ ಪತ್ರಗಳನ್ನು ನಾಲ್ಕು ಮೂರು ಸಾಲ್ಯಂತವಾಗಿ ಛಾಪಿಸಿದರೆ ನಮ್ಮ ಪತ್ರಕವೆಲ್ಲ ತುಂಬಿ ಹೋಗುವದು. ಅವರಿಂದ ಅಂಥಾ ಉದ್ದುದ್ದ ಪತ್ರಗಳನ್ನು ಮೂಲೆಗೆ ಚಲ್ಲುವದು ಅವಶ್ಯವಾಗುತ್ತದೆ. ಅವರಿಂದ ಆ ಪತ್ರಗಳನ್ನು ಬರಿಹವರ ಶ್ರಮವ್ಯ ವ್ಯರ್ಥವಾಗುತ್ತದೆ. ಈ ಯಾವತ್ತು ಸಂಗತಿಗಳನ್ನು ಚನ್ನಾಗಿ ತಿಳಕೊಂಡು ಪರೀಕ್ಷೆಗಳ ವಿಷಯವಾಗಿ ಪತ್ರಗಳನ್ನು ಬರಿಯುವವರು ಆಡಮ್ಮ ಸ್ವಲ್ಪಶಬ್ದಗಳಲ್ಲಿ ತಮ್ಮ ಪತ್ರಗಳನ್ನು ಮುಗಿಸಬೇಕೆಂದು ನಾವ್ಯ ಸೂ

ಬಿಸುತ್ತೇವೆ. ಅಂಥಾ ಪತ್ರಗಳಿಗೆ ಪ್ರಸಂಗಾನುಸಾರವಾಗಿ ಸ್ಥಳ ಕೊಡಬಹುದು.

ಈ ಪೂರ್ವದಲ್ಲಿ ಬಂದ ಪತ್ರಗಳ ಸಾರಾಂಶವನ್ನು ಕೆಳಗೆ ತಕ್ಕೊಂಡಿದ್ದೇವೆ.

ಧಾರವಾಡ ಜಿಲ್ಲೆ.

ಧಾರವಾಡ ೫ನೇ ನಂಬರಿನ ಶಾಲೆ—ಕಳಿದ ಮಾರ್ಚ ೯ನೇ ತಾರೀಖಿನಲ್ಲಿ ರಾ. ರಾ. ಗೋವಿಂದರಾವ ವಕೀಲ ಶಾಲಾ ಕಮಿಟೀದಾರ ಇವರು ಈ ಶಾಲೆಗೆ ಹೋಗಿ ವಿದ್ಯಾರ್ಥಿಗಳ ಅಭ್ಯಾಸವನ್ನು ತಪಾಸಿಸಿ ಅವರಿಗೆ ಮಿಠಾಯಿಯನ್ನೂ, ೧೬ ಜನ ಓದಹುಡುಗರಿಗೆ ಸ್ಲೇಟುಗಳನ್ನೂ ಬಕ್ಷೀಸು ಕೊಟ್ಟರು. ಈ ಕಮಿಟೀದಾರರು ವಿದ್ಯಾವೃದ್ಧಿಗೆ ಬಹಳ ಸಹಾಯ ಮಾಡುತ್ತಾರೆ. ಈ ಶಾಲೆಯಲ್ಲಿ ಮುಸಲ್ಮಾನರು ೩೦, [ಕಾಕರರು ೩೨, ಮೊಚ್ಚೆಗಾರರು ೧೩, ಈ ಪ್ರಕಾರ ವಿದ್ಯಾರ್ಥಿಗಳ ಸಂಖ್ಯೆಗಳುಂಟು.

—೦—

ಪದರೀ ಕಮಿಟೀದಾರ ಗೋವಿಂದರಾವ ವಕೀಲ ಇವರು ಧಾರವಾಡದ ಶಾಲೆಗಳ ಸಾಮಾನ್ಯ ಸ್ಥಿತಿಯನ್ನು ಕುರಿತು 'ಬರಿಯುವದೇನೆಂದರೆ— ಹುಡುಗರು ಮುಂದೆ ಕಲಿಯುತ್ತ ಹೋದಹಾಗೆ ಹಿಂದಿನ ಅಭ್ಯಾಸವನ್ನು ಮರಿಯುತ್ತಾರೆ; ಈ ಮಾತಿಗೆ ಮಾಸ್ತರ ಜನರು ಲಕ್ಷ್ಯಕೊಡುವದಿಲ್ಲ; ಹೀಗಾಗದಂತೆ ಯಾವತ್ತು ಮಾಸ್ತರರು ಎಚ್ಚರ ಪಡಬೇಕು, ಇತ್ಯಾದಿ.

—೦—

ಧಾರವಾಡ ೧ನೇ ನಂಬರಿನ ಹೆಂಣುಮಕ್ಕಳಶಾಲೆ— ಫಳಿಥ ಏಪ್ರಿಲಿನ ೬ನೇ ತಾರೀಖಿನಲ್ಲಿ ಪದರೀ ಕಮಿಟೀದಾರ

ರಾ. ರಾ. ಗೋವಿಂದರಾವ ವಕೀಲ ಮತ್ತೂ ಫ. ಅ. ಕಲೆಕ್ಟರರ ರೈಟರರಾದ ಕೃಷ್ಣರಾವ ಎಂಬುವರು, ಇವರಿಬ್ಬರು, ಈ ಶಾಲೆಗೆ ಹೋಗಿ, ವಿದ್ಯಾರ್ಥಿನಿಯರ ಅಭ್ಯಾಸವನ್ನೂ ಕಸೂತಿಯ ಕೆಲಸವನ್ನೂ ಪರೀಕ್ಷಿಸಿ, ಅವರೆಲ್ಲರಿಗೆ ಮೀರಾಯಿಯನ್ನು ಹರಂಚಿ ವಿಜಿಟರ್ಸ್ ಬುಕ್ಕಿನಲ್ಲಿ ತಮಗಾದ ಸಂತೋಷವನ್ನು ವ್ಯಕ್ತಪಡಿಸುವಂಥ ಶೇರೆಯನ್ನು ಬರಿದಿಟ್ಟಿಯ್ದಾರೆ.

—೦—

ಹುಬ್ಬಳ್ಳಿ—ಇಲ್ಲಿಯ ಯಾವತ್ತು ಶಾಲೆಗಳ ವಾರ್ಷಿಕ ಪರೀಕ್ಷೆಯನ್ನು ತೀರಿಸಿದಬಳಿಕ ರಾ. ಸಾ. ಡೆ. ಇನ್‌ಸ್ಪೆಕ್ಟರ ಥಾರವಾಡ ಇವರು ವಿದ್ಯಾರ್ಥಿಗಳಿಗೆ ಬಕ್ಷೀಸು ಕೊಡುವ ಸಮಾರಂಭಕ್ಕೋಸ್ಕರ ಕಳದ ಜನವರಿಯ ೧೭ನೇ ತಾರೀಖಿನಲ್ಲಿ ಮೂರು ಸಾವಿರದ ಸ್ವಾಮಿಗಳಮಠದಲ್ಲಿ ಸಭೆಯನ್ನು ಕೂಡಿಸಿದರು. ಈ ಸಭೇದೆ ಇಲ್ಲಿಯ ಸಬ್ ಜಡಜರು, ಡಾಕ್ತರರು, ಇಂಗ್ಲಿಶ ಶಾಲೆಯ ಮಾಸ್ತರರು, ಮುಂತಾದ ಪ್ರಮುಖ ಜನರೆಲ್ಲರು ಬಂದಿದ್ದರು. ಯಾವತ್ತು ಶಾಲೆಗಳ ವಿದ್ಯಾರ್ಥಿಗಳು ಕೂಡಿ ೧೦೦೦ ಹುಡುಗರು ನೆರೆದಿದ್ದರು. ಇವರಲ್ಲದೆ ೧೫೦ ಜನ ಹೆಣ್ಣು ಮಕ್ಕಳು ಬೇರೆ. ಸಬ್ ಜಡಜರು ಸಭೆಯ ಸಮಾರಂಭದ ಆನಂದವನ್ನು ವ್ಯಕ್ತಪಡಿಸಿ ಸುರಸವಾದ ಸಂಭಾಷಣೆಯನ್ನು ಮಾಡಿದಬಳಿಕ ಬಕ್ಷೀಸುಗಳನ್ನು ಹಂಚಿದರು. ರಾ. ರಾ. ಸುಬರಾವ ಬೇಹಟ್ಟೀ ವಕೀಲ ಇವರು ಹೆಂಣುಮಕ್ಕಳಿಗೆ ೧೦ ಜರದ ಖಣಗಳನ್ನು ಕೊಟ್ಟರು. ರಾ. ರಾ. ಶ್ರೀಮಲರಾವ ರಾಘವೇಂದ್ರ ಇವರೂ ೧೦ ಖಣಗಳನ್ನು ಕೊಟ್ಟರು. ಶ್ರೀ. ಬೆಳಗಾವಿಯ ವಟ್ಟಪ ಬೇವನವೆಂಬ ಅಯ್ಯನವರು ಬಡಹುಡುಗರಿಗೆ ತಿಳ ಪುಸ್ತಕಗಳನ್ನು

ಕೊಟ್ಟರು. ಇದಲ್ಲದೆ ಆ ಸಭೆಯಲ್ಲಿ ಬಕ್ಷೀಸಗಾಗಿ ೩೧॥ ರೂ. ಮಾಯಿ ಪರ್ಗಣಿಯಿಂದ ಕೂಡಿದವು.

—o—

ಹುಬ್ಬಳ್ಳಿಯ ಏನೇ ವಂಬರಿನ ಹೆಂಗುಮಕ್ಕಳ ಶಾಲೆ— ಕವಿ-ಟೀಡಾರರಾದ ಮಾಸಪ್ಪಾ ಬೇಪಟಿ, ಅಣ್ಣಾರಾವ, ಇವರ ಮುಂಬಯಿ ಹಾಯಕೋರ್ಟಿನ ವಕೀಲರಾದ ಶಾಮರಾವ ಎಂ ಬವರಂನು ಶಾಲೆಗೆ ಕರಕೊಂಡು ಬಂದು ವಿದ್ಯಾರ್ಥಿನಿಯೆ ಅಭ್ಯಾಸಗಳನ್ನು ಪರೀಕ್ಷಿಸಿ ಮೀಶಾಯಿಂಗಾಗಿ ೩ ರುಪಾಯಿ ಬಡಹುಡಿಗಿಯರಿಗೆ ಪುಸ್ತಕಗಳ ಸಲುವಾಗಿ ೩ ರುಪಾಯಿ, ಪ್ರಕಾರ ಇನಾಮು ಕೊಟ್ಟು. ಸದರೀ ಮಾಸಪ್ಪಾ ಎಂಬ ರು ವಿದ್ಯಾಭ್ಯಾಸ್ಥಿಯು ಕೆಲಸದಲ್ಲಿ ಬಹಳ ಶ್ರಮ ತಕ್ಕೊಳ್ತಾರೆ.

—o—

ಬಳಗಾನೂರ (ತಾ. ಗದಗ) ಶಾಲೆ— ಇಲ್ಲಿಯ ಕವಿಟೀ ದಾರರು ೫ ಮಂಗಿ ಹೋದ ತಂಗಳಿನ ೨೦ನೇ ತಾರೀಖಿನಲ್ಲಿ ಶಾಲೆಗೆ ಹೋಗಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ವಿಜಿಟಿಸರ್ಸ ಬು ಕ್ಕಿನಲ್ಲಿ ಮಾಸ್ತರನ ತಾರೀಪು ಮಾಡುವಂಥ ಷೇರೆಯನ್ನು ಬರಿಯದ್ದಾರೆ.

—o—

ಗದಗ ಸೆಕಂಡ ಗ್ರೇಡ ಶಾಲೆ— ಕಳಿದ ಮಾರ್ಚ ತಿಂ ಗಳಲ್ಲಿ ಈ ಶಾಲೆಯ ವಾರ್ಷಿಕ ಬಕ್ಷಿಸಿನ ಸಮಾರಂಭದ ಮಿತ್ತ ರಾ. ನಾ ಡೆ. ಇನ್‌ಸ್ಪೆಕ್ಟರ ಥಾರವಾಡ ಇವರು ಮೆ ಕಲೆಕ್ಟರ, ರಾ. ನಾ. ಸಬ ಜಡಜ, ಶೆಟ್ಟಿ, ನಾವಕಾರ ಮುಂತಾದ ಜನರ ಸಭೆಯನ್ನು ಕೂಡಿಸಿದ್ದರು. ಆ ಸಭೆಯ

ಲ್ಲಿ ವಿದ್ಯಾರ್ಥಿಗಳಿಗೆ ಇನಾಮು ಕೊಡುವದಕ್ಕಾಗಿ ೨೬।। ರು ಪಾಯಿ ಪರ್ಗಣ್ಣಿಯಿಂದ ಜಮೆ ಆಡವ್ರ.

—o—

ಹೊಂಬಳ (ತಾ. ಗದಗ) ಶಾಲೆ—ಕಳಿದ ಎಪ್ರೀಲಿನ್ಹಾಗ್ನೇ ತಾರೀಖಿನಲ್ಲಿ ಕಮಿಟೀದಾರರು, ಪಿ. ಮುಂಡಿ, ಶಾಲೆಗೆ ಹೋಗಿ ೫ ವರ್ಗಗಳ ಪರೀಕ್ಷೆ ತಕೊಂಡು, ವಿಜಿಟರ್ಸ ಬುಕ್ಕಿನಲ್ಲಿ ಮಾಸ್ತರನಿಗೆ ಅನುಕೂಲವಾದ ಶೇರೆಯನ್ನು ಬರಿಯಿದ್ದಾರೆ. ಇಲ್ಲಿ ರಾತ್ರಿಯ ವರ್ಗವನ್ನು ಇಡುವ ಕೆಲಸದಲ್ಲಿ ಈ ಕಮಿಟೀದಾರರು ಒಕಲತನದ ಜನರಿಗೆ ಉಪದೇಶ ಮಾಯಿ ಬಹಳ ಪ್ರಯತ್ನ ಮಾಯಿದಾಗ್ಯೂ ಅವರ ಶ್ರಮವು ಇನ್ನೂ ಚನ್ನಾಗಿ ಸಫಲವಾಗಿಲ್ಲ.

—o—

ಕುನ್ನೂರ (ತಾ. ಬಂಕಾಪೂರ) ಶಾಲೆಯ ಸಂಚರೂ ಇತರ ಗ್ರಾಮಸ್ಥರೂ ಕೂಡಿ ೧೨ ಜನ ನಮಗೆ ಈ ಪ್ರಕಾರ ಬರಿದು ತಿಳಿಸುತ್ತಾರೆ—ಈ ಶಾಲೆ ಸನ್ ೧೮೭೯ನೇ ವರ್ಷದ ಅರಂಭದಲ್ಲಿ ಸ್ಥಾಪಿತವಾಯಿತು. ಈಗಿನ ಮಾಸ್ತರರು ಬಂದು ಸುಮಾರು ೧।। ವರ್ಷವಾತು. ಇವರು ಕೆಲಸವನ್ನು ಬಹು ಸರಸಾಗಿ ನಡಿಸಿ ಜನರ ಪ್ರೀತಿಯಂನು ಸಂಪಾದಿಸಿದ್ದಾರೆ. ಮಾರ್ಗಸ್ಥರು ಈ ಶಾಲೆಯನ್ನು ನೋಡಿ ಬಹಳ ಸಂತೋಷಪಡುತ್ತಾರೆ, ಇತ್ಯಾದಿ. (ಆದರೆ ಈ ಲೇಖವನ್ನು ಮಾಸ್ತರನು ತಾನೇ ಬರಿದು ಕೆಳಗೆ ಗ್ರಾಮಸ್ಥರ ಸಹಿ ಮಾಡಿಸಿದ್ದಾನೆ.)

———

ತಡಸ (ತಾ. ಬುಕಾಪುರ) ಶಾಲೆ— ಕಳಿದ ವರ್ಷ

ತಿಂಗಳಿನ ೨೩ನೇ ತಾರೀಖಿನಲ್ಲಿ ಈ ಶಾಲೆದೆ ಮೆ. ರಸೆಲ್ ಥೊರೆಗಳು ಹೋಗಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಬಹಳ ಸಂತುಷ್ಟರಾದರು; ರಜಿಷ್ಟರಿನಲ್ಲಿ ಶಾಲೆಯು ಶಿಫಾರಸಿನ ಲೇಖನವನ್ನು ಬರಿಡರು; ಇಬ್ಬರು ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳು ಕವಿತೆಯನ್ನು ಬಹು ಸರಸಾಗಿ ಅಂದದ್ದರಿಂದ ಅವರಿಗೆ ಒಂದು ರುಪಾಯಿ ಇನಾಮು ಕೊಟ್ಟರು.

ಕೋಡಬಾಳ [ತಾ. ಕರ್ಜಗಿ] ಶಾಲೆ— ಈ ಶಾಲೆಯ ವಾರ್ಷಿಕ ಪರಿಕ್ಷೆಯನ್ನು ರಾ. ಸಾ. ಡೆ. ಇನ್‌ಸ್ಪೆಕ್ಟರರು ಕಳಿದ ಫೆಬ್ರುವಾರಿಯಲ್ಲಿ ತಕ್ಕೊಂಡಬಳಿಕ ಮಾಸ್ತರನ ಶಿಫಾರಸು ಮಾಡಿ ಶೇರೆಯನ್ನು ಬರಿದಿಟ್ಟರು. ಪರೀಕ್ಷೆಗೆ ಮೊದಲಿನ ೩ ಇಯತ್ತೆಗಳಲ್ಲಿ ಕೂಡಿ ೨೧ ವಿದ್ಯಾರ್ಥಿಗಳು ಕೂತಿದ್ದರು. ಅವರೆಲ್ಲ ಪಾಸಾದರು. ಊರವರು ವರ್ಗಣಿಯಿಂದ ೫೫ ರುಪಾಯಿ ಕೂಡಿಸಿ, ಪಾಸಾದವರಿಗೆ ಪುಸ್ತಕಗಳನ್ನೂ ಉಳಿದವರಿಗೆ ಮಿಠಾಯಿಯನ್ನೂ ಹಂಚಿದರು. ಈ ಶಾಲೆಯು ಗತ್ತಮು ಸ್ಥಿತಿಯನ್ನು ನೆರೆಹೊರೆಯ ಗ್ರಾಮಗಳ ಹುಡುಗರು ಈ ಶಾಲೆಗೆ ಬರ ಹತ್ತಿದ್ದಾರೆ.

ಬಾಳಂಬೀಡ [ತಾ. ಹಾನಗಲ್ಲು] ಶಾಲೆ— ಕಳಿದ ಎಪ್ರಿಲ ೧೧ನೇ ತಾರೀಖಿನಲ್ಲಿ ರಾ. ಸಾ. ಮಾಮುಲೇದಾರರು ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಸಂತೋಷದಿಂದ ವಿಜಿಟರ್ಸ ಬುಕ್ಕಿನಲ್ಲಿ ಶಿಫಾರಸಿನ ಶೇರೆಯನ್ನು ಬರಿದು, ಪಂಚರು ಮುಂತಾದ ಗ್ರಾಮಸ್ಥರನ್ನು ಕರಿಸಿ, ಅವರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದಕ್ಕೋಸ್ಕರ ಬೋಧಿಸಿದರು. ಈ ಮಾಮುಲೇ

ದಾರರು ವಿದ್ಯಾ ವೃದ್ಧಿಗೆ ಬಹಳ ಸಹಾಯ ಮಾಡುತ್ತಾರೆ.

—o—

ತಡಹಾಳ (ತಾ. ನವಲಗುಂದ) ಶಾಲೆ— ಕಳಿದ ಮಾರ್ಚ ೧೧ನೇ ತಾರೀಖಿನಲ್ಲಿ ಪಂಚರು ಶಾಲೆಗೆ ಹೋಗಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ವಿಜಿಟರ್ಸ ಬುಕ್ಕಿನಲ್ಲಿ ತಿಘಾರಸಿನ ಶೇರೆಯನ್ನು ಬರಿದುರು. ಈ ಗ್ರಾಮದ ಖಾನೆಸುಮಾರಿ ೮೦೦ ಇದ್ದು, ವಿದ್ಯಾರ್ಥಿಗಳ ಸಂಖ್ಯೆಪ್ರ ೫೩ ಇರುತ್ತದೆ. ಪಂಚರಲ್ಲಿ ಕೂಸೋ ನರಸಿಂಹ ಕುಲಕರ್ಣಿ, ಮಲ್ಲನಗೌಡ, ಇವರಿಬ್ಬರು ಶಾಲೆಗೆ ಬಹಳ ಸಹಾಯ ಮಾಡುತ್ತಾರೆ.

—o—

ಬೆಳಗಾವಿ

ಬೆಳಗಾವಿಯ ೨ನೇ ನಂಬರಿನ ಕನ್ನಡಶಾಲೆಯೊಳಗಿನ ದಾತ್ರಿಯ ವರ್ಗ— ಕಳಿದ ಫೇಬ್ರುವಾರಿಯ ೨೪ನೇ ತಾರಿಖಿನಲ್ಲಿ ರಾ. ರಾ. ರಾಮಭಾವು ಪೈದ್ಯ ಮುಂತಾದ ಮೂವರು ಗ್ರಹಸ್ಥರು ಈ ವರ್ಗಕ್ಕೆ ಹೋಗಿ ವಿದ್ಯಾರ್ಥಿಗಳ ಪರೀಕ್ಷೆತ ಕೊಂಡು, ವಿಜಿಟರ್ಸ ಬುಕ್ಕಿನಲ್ಲಿ ಶೇರೆಯನ್ನು ಬರಿದು ೧೨ ಆಣಿಯ ಮುಸ್ತಕಗಳನ್ನು ಕೊಂಡು ವಿದ್ಯಾರ್ಥಿಗಳಿಗೆ ಇನಾಮು ಕೊಡಸಿದರು. ಈ ವರ್ಗದಲ್ಲಿ ಹೊಲಿಯರು ೨೪, ಇತರ ಹಿಂದೂ ೧೮, ಅಂತೂ ೪೨ ಜನ ವಿದ್ಯಾರ್ಥಿಗಳು ಹಾಜರಿದ್ದರು. ಮೆ. ಇನ್‌ಸ್ಪೆಕ್ಟರ ಥೊರೆಗಳ ಹೆಡ್ಡ ರೈಟರರಾದ ರಾ. ರಾ. ವಿನಾಯಕರಾವ ಬೆಹರೆ ಇವರು ಈ ವರ್ಗದ ಅಭ್ಯಾಸಕ್ಕೆ ಬಹಳ ಲಕ್ಷ್ಯಕೊಡುತ್ತಾರೆ.

———

ಬೆಲ್ಲದ ನಾಗವಾಡ (ತಾ. ಬಿಕೊಳ್ಳೀಡ) ಶಾಲೆ — ಕಳಿದ

ಫೇಬ್ರುವಾರಿಯ ೨೬ನೇ ತಾರೀಖಿನಲ್ಲಿ ರಾ· ನಾ. ಡೆ. ಇ ನ'ಸ್ಪೆಕ್ಟರರು ಈ ಶಾಲೆಯ ವಾರ್ಷಿಕ ಪರೀಕ್ಷೆಯನ್ನು ತ ಕ್ಕೊಂಡು ವಿಜಿಟರ್ಸ ಬುಕ್ಕಿನಲ್ಲಿ ಉತ್ತಮ ಪ್ರತಿಯ ಶೇ ರೆಯನ್ನು ಬರಿದು ಹೋದರು. ಕಮಿಟೀದಾರರು ತಿಳಿಸುವಪೇ ನಂದರೆ ಈ ಶಾಲೆ ಶುರುವಾಗಿ ೨೧ ವರ್ಷಗಳಾದಾಗ್ಯೂ ಕ ಳಿದ ನಾಲ್ಕೈದು ವರ್ಷಗಳಲ್ಲಿ ಮಾತ್ರ ಅಡಿವೆಪ್ಪಾ ಮುಲ್ಲ ಪ್ಪಾ, ಚಿನ್ನಯ್ಯಾ ಬಸಲಿಂಗಪ್ಪಾ (ಈಗಿನ ಮಾಸ್ತರ,) ಇವರಿ ಬ್ಬರ ಕೈಯಿಂದ ಶಾಲೆಯು ಊರ್ಜಿತ ಸ್ಥಿತಿಗೆ ಬಂತು. ಈಗ ೧೦೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳುಂಟು. ಒಬ್ಬ ಅಸಿಪ್ಟಾಂಟನು ಈ ವರ್ಷ ನೇಮಿಸಲ್ಪಟ್ಟಿನು. ಇನ್ನೊಬ್ಬನನ್ನು ಬೇಗ ನೇಮಿಸತ ಕ್ಕವರಿದ್ದಾರೆ. ಇತ್ಯಾದಿ.

ಗೋವನಕೊಪ್ಪ (ತಾ. ನಂಪಗಾವಿ) ಶಾಲೆ—ಈ ತಿಂಗ ಳಿನ ೯ನೇ ತಾರೀಖಿನಲ್ಲಿ ನಪಪತ್ತಿಯ ಕೋರ್ಟಿನ ವಕೀಲರಾದ ರಾ. ರಾ. ಶಂಕರರಾಯರು ಪಂಚರ ನಂಗಡ ಬಂದು ವಿದ್ಯಾರ್ಥಿ ಗಳನ್ನು ಪರಿಕ್ಷೀಸಿ ಅವರಿಗೆ ೧೫ ಪುಸ್ತಕಗಳನ್ನು ಬಕ್ಷೀಸು ಕೊಟ್ಟು: ಮಿಠಾಯಿ ಹಂಚಿ, ವಿಜಿಟರ್ಸ ಬುಕ್ಕಿನಲ್ಲಿ ಉತ್ತಮ ಪ್ರತಿಯ ಶೇರೆಯನ್ನು ಬರಿದರು.

ತಿಗಡೊಳ್ಳಿ [ತಾ. ನಂಪಗಾವಿ] ಶಾಲೆ— ಇಲ್ಲಿಯ ಗೌಡ ಕುಲಕರ್ಣಿಗಳು ಈ ತಿಂಗಳಿನ ೪ನೇ ತಾರೀಖಿನಲ್ಲಿ ಶಾಲೆಗೆ ಹೋಗಿ ಹುಡುಗರನ್ನು ಪರಿಕ್ಷಿಸಿ, ಪುಸ್ತಕಗಳನ್ನೂ ಮಿಠಾಯಿ ಯನ್ನೂ ಹಂಚಿದರು. ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆ ಇದದ್ದು ನೋಡಿ, ಪ್ರಮುಖರಾದ ರೈತರನ್ನು ಕರಿ

ನಿ, ಅವರಿಗೆ ತಿಳಿಯ ಹೇಳಿ, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲಿಕ್ಕೆ ಅವರ ಕೈಯಿಂದ ಒಡಂಬಡಿಸಿದರು.

ಸವದತ್ತಿಯ ಅ. ಹ್ವ. ಶಾಲೆ—ತಾ. ೧೦ನೇ ಎಪ್ರಿಲಿನಲ್ಲಿ ಮೆ. ಪೋಲೀಸ ಸುಪರಿಂಟಿಂಡೆಂಟ, ರಾ.ಸಾ. ಸಬಜಡಜ, ರಾ. ಸಾ. ಮಾಮಲೆದಾರ, ಪಂಚರು, ಮುಂತಾದ ಜನರ ಸಭೆ ಕೂಡಿ ಭಕ್ಷೀಸಿನ ಸಮಾರಂಭವಾಯಿತು. ಸಬಜಡಜರೂ ಮಾಮಲೇದಾರರೂ ತಮ್ಮಸ್ವಂತ ಹಣದಿಂದ ಪುಸ್ತಕಗಳನ್ನು ಪಾಸಾದ ವಿದ್ಯಾರ್ಥಿಗಳಿಗೆ ಕೊಡಿಸಿದರು. ಸರಕಾರೀ ಬಕ್ಷೀಸುಗಳೂ ಕೆಲವು ಕೊಡಲ್ಪಟ್ಟವು. ಮೆ. ಪೊ. ಸು. ಥೊರೆಗಳು ಇಂಗ್ಲಿಷ ವರ್ಗದ ಅಭ್ಯಾಸಂತುಷ್ಟರಾಗಿ ಮಿಠಾಯಿಯನ್ನು ಹಂಚಿ ವಿಜಿಟರ್ಸ ಬುಕ್ಕಿನಲ್ಲಿ ಶೇರೆಯನ್ನು ಬರಿದರು. ಇಂಗ್ಲಿಷ ಕ್ಲಾಸದ ವರ್ಗಣಿಯನ್ನು ಊರವರು ಪ್ರತಿತಿಂಗಳಿಗೆ ಕೊಡಬೇಕೆಂದು ಸಭೆಯಲ್ಲಿ ನೊತ್ತಾಯಿತು.

ಕಲಾದಗಿ

ಕನ್ನೊಳ್ಳಿ (ತಾ. ಸಿಂದಗಿ) ಶಾಲೆ—ಮೆ. ಡಿ. ಡಿ. ಕಲೆಕ್ಟರರು ತಾ. ೨೬ನೇ ಮಾರ್ಚ ದಿವಸ ಈ ಶಾಲೆಗೆ ಹೋಗಿ ವಿದ್ಯಾರ್ಥಿಗಳನ್ನು ಪರಿಕ್ಷಿಸಿ ವಿ. ಬುಕ್ಕಿನಲ್ಲಿ ಶೇರೆಯೆನ್ನು ಬರಿದರು; ಮತ್ತೂ ಶಾಲೆಗೆ ಹುಡುಗರನ್ನು ಕಳಿಸರೆಂತಲೂ, ಶಾಲಾಗ್ರವನ್ನು ಕಟಿಸಿಕೊಳ್ಳರೆಂತಲೂ ರೈತಜನರನ್ನು ಬೋಧಿಸಿದರು.

ಕೇಂದ್ರಗಡ [ತಾ. ಬಾದಾಮಿ]— ಇಲ್ಲಿಯ ಶಾಲೆಯ ನಿ

ತಿಯು ನೆಟ್ಟಗಿಲ್ಲ -- ಈಗ ೨ ವರ್ಷ ಶಾಲೆಯು ಪರೀಕ್ಷೆಯು ಇಳಿ
ಯುತಕ್ಕಂತೆ ಇಳಿಯುವ ಮೂಲಕ ಈ ವರ್ಷ ಮಾಸ್ತರನಿಗೆ
೨೦ ರುಪಾಯಿ ದಂಡವಾಯಿತು. ಇವನು ಹೊತ್ತಿಗೆ ಶಾಲೆಗೆ
ಬಂದು ಆಸ್ಥೆಯಿಂದ ಕೆಲಸಮಾಡದಿರುವದಿಲ್ಲ; ಅಸ್ಟ್ರೈನ್‌ಡ್ ಇ
ರುವಕಾರಣ ಇವನಿಗೆ ಸಿನೇ ಟಿನೇ ಇಯತ್ತೆಗಳನ್ನು ಕಲಿಸಲಕ್ಕೆ
ಬರುವದಿಲ್ಲ. ಪಂಚರಾಡರೂ ಶಾಲೆಗೆ ದುರ್ಲಕ್ಷ್ಯ ಮಾಡು
ತ್ತಾರೆ.

ಕಾನಡಾ.

ಹಲ್ಲಿಯಾಳ ಸೆ. ಗ್ರೆ. ಅ. ಹ್ವ. ಶಾಲೆ -- ತಾ. ೧೩ನೇ
ಮಾರ್ಚ ದಿವಸ ಮೆ॰ ಕಲೆಕ್ಟರ ಥೊರೆಗಳು ಈ ಶಾಲೆಗೆ ಹೋ
ಗಿ ಶಾಲೆಯ ಅತ್ಯುತ್ತಮ ಸ್ಥಿತಿಯನ್ನು ನೋಡಿ ವಿಜಿಟರ್ಸ
ಬುಕ್ಕಿನಲ್ಲಿ ಮಾಸ್ತರರ ಶಿಫಾರಸು ಮಾಡಿ ಶೇರೆಯನ್ನು ಬರಿ
ದ್ದಾರೆ; ಮಾಸ್ತರರ ಸಂಬಳ ಹೆಚ್ಚಾಗಬೇಕೆಂಬ ಅಭಿಪ್ರಾಯವ
ನ್ನು ಬರೆದಿದ್ದಾರೆ. ಶಾಲೆಯಲ್ಲಿ ೧೯೭ ವಿದ್ಯಾರ್ಥಿಗಳ ಸಂ
ಖ್ಯೆವದೆ. ಅವರಲ್ಲಿ ೧೪೨ ಜನ ಹಾಜರರಿದ್ದರು. ಒಬ್ಬ ಹೊಲಿಯ
ರಹುಡಗನು ಈ ಶಾಲೆಯಲ್ಲಿ ಕಲಿಯುತ್ತಾನೆ. ವಿದ್ಯಾರ್ಥಿಗಳ
ಗೆ ಗರಡೀ ಸಾಥಕದ ಅಭ್ಯಾವನ್ನು ಮಾಸ್ತರರು ಮಾಡಿಸುತ್ತಾರೆ.

Notices.

ನೋಟೀಸುಗಳು.

ಸರಕಾರೀ ಶರಾಪ್ರ ನಂಬರು ೫೧೫೫

ತಾ. ೧೨ನೇ ಜುಲ್ಯೆ ಸನ್ ೧೮೮೧

ಖಾನಪೇಶ ಜಿಲ್ಲೆಯಲ್ಲಿ ಕೆಂಪುರಣ್ಣ ಎಂಬ ಪರಗಣ

ರಿಯಜಹಾಗೀರದಾರರಾದ ಯಜ್ಞೇಶ್ವರ ಬಾಳಕೃಷ್ಣ ದೀಕ್ಷಿತ ಎಂಬವರು, ತಾವು ತಮ್ಮ ಜಹಾಗೀರಿನೊಳಗಿನ ಶಾಲೆಗಳನ್ನು ನೋಡಲಕ್ಕೆ ಹೋದಾಗ ಮಾಸ್ತರ ಜನರಿಗೆ ತಾವು ಬಕ್ಷೀಸು ಕೊಟ್ಟರೆ ಅದಂನು ತಕ್ಕೊಳ್ಳಲಕ್ಕೆ ಅವರಿಗೆ ಅಸ್ಸ್ಣಾಇರಬೇಕೆಂದು ಸರಕಾರಕ್ಕೆ ಆರ್ಜಿಯಂನು ಮಾಡಲಾಗಿ, ಆ ಆರ್ಜಿಯಂನು ಸರಕಾರದವರು ಮೆ. ಡಾಯರೆಕ್ಟರ ಥೊರೆಗಳವರ ಕಡೆಗೆ ಕಳಿಸಿ ಅವರ ಅಭಿಪ್ರಾಯವಂನು ಕೇಳಿದರು. ಅದಕ್ಕೆ ಡಾಯರೆಕ್ಟರವರು, ವಿದ್ಯಾಖಾತೆಯ ನಿಯಮದಂತೆ ವಿದ್ಯಾರ್ಥಿಗಳಿಗೆ ಶಾಲಾಪ್ರೇಕ್ಷಕರು ಬಕ್ಷೀಸು ಕೊಡಬಹುದಷ್ಟೇ ಹೊರ್ತು ಮಾಸ್ತರ ಜನರಿಗೆ ಕೊಡಲಾಗದೆಂತಲೂ, ಮಾಸ್ತರ ಜನರಿಗೆ ಹೊರಗಿನವರು ಬಕ್ಷೀಸು ಕೊಡುವದರಿಂದ ಈ ಖಾತೆಯಲ್ಲಿ ನಡಿಯುತ್ತಿರುವ ಅತ್ಯುತ್ತಮವಾದ ನಿಯಮಕ್ಕೆ ಬಾಧ ಬರುವದಲ್ಲದೆ ಮಾಸ್ತರ ಜನರಿಗೆ ಆಶೆಯ ಮಾರ್ಗವನ್ನು ತೋರಿಸಿದ ಹಾಗಾಗುತ್ತದೆಂತಲೂ ಬರಿದರು. ಅದರಿಂದ——

ತರಾವು—— ಶಾಲೆಗಳನ್ನು ನೋಡಲಕ್ಕೆ ಹೋದವರ ಕಡೆಯಿಂದ ಬಕ್ಷೀಸು ತಕ್ಕೊಳ್ಳಲಕ್ಕೆ ಮಾಸ್ತರ ಜನರಿಗೆ ಸರಕಾರೀ ನಿಯಮಗಳನ್ನು ಅನುಸರಿಸಿ ಅಸ್ಸ್ಣಾಇ ಕೊಡಲಕ್ಕೆ ಬರುವದಿಲ್ಲೆಂದು ಅರ್ಜದಾರನಿಗೆ ತಿಳಿಸ ತಕ್ಕದ್ದು.

(signed) C. Gonne.
ಸರಕಾರೀ ಜೀಫ ಸೆಕ್ರೆಟರಿ.

—o—

ಮೆ. ಡಾಯರೆಕ್ಟರ ಥೊರೆಗಳವರು ಕೊಲ್ಲಾಪುರದ ರಾಜಾರಾಮ ಕಾಲೇಜದ ಪ್ರಿನ್ಸಿಪಾಲರಿಗೂ ಬೆಳಗಾವಿಯ ಹಾಯಸ್ಕೂಲಿನ ಹೆಡ್ ಮಾಸ್ತರರಿಗೂ ಬರಿದ ಪತ್ರ ನಂಬರು

೬೭೫೫, ತಾ. ೨೯ನೇ ಮಾರ್ಚ ಸನ್ ೧೮೮೧—

ಸಾವಃಡಾರ ಗವರ್ನರ ಧೊರೆಗಳವರು ನಿಮ್ಮ ಶಾಲೆಗಳನ್ನು ನೋಡಲಕ್ಕೆ ಬಂದಾಗ ನೀವ್ರು ಅವರಿಗೆ ಪೂನಪತ್ರಗಳನ್ನು ಕೊಟ್ಟಿರೆಂದು ವರ್ತಪೂನಪತ್ರಗಳಿಂದ ತಿಳಿಯು ಬರುತ್ತದೆ. ಪೂನಪತ್ರಗಳನ್ನು ಪಾಠಿಕೆಯಾಗಿ ಸಾರ್ವಜನಿಕ ಸಮುದಾಯಗಳೂ ಸಂಘಗಳೂ ಕೊಡುವವಡಾವಳಿಯುಂಟು, ಕಾಲೇಜಗಳೂ ಶಾಲೆಗಳೂ ಕೊಡುವ ರೂಢಿಇಲ್ಲ. ಅದರಿಂದ ಇನ್ನುಮುಂದೆ ನೀವ್ರು ಪೂನಪತ್ರಕೊಡುವದನ್ನು ಬಿಟ್ಟರೆ ನಮಗೆ ಸಂತೋಷವಾಗುವದು. ನಿಮ್ಮವಿದ್ಯಾರ್ಥಿಗಳು ಯಾರಿಗಾದರೂ ಪೂನಪತ್ರ ಕೊಡಹೋದರೆ ಅವರಿಗೆ ಅಡ್ಡಿಮಾಡಬೇಕು.

[signed] K. M. Chatfield
ಡಾಯರೆಕ್ಟರ ಆಫ್ ಪಬ್ಲಿಕ ಇನ್‌ಸ್ಟ್ರಕ್‌ಶನ್.

ಮೆ. ಇನ್‌ಸ್ಪೆಕ್ಟರ ಹುಕುಮಿನಿಂದ ಪ್ರಸಿದ್ಧಿಸಲ್ಪಟ್ಟಿತು.

V. R. Katti.
ಕನ್ನಡ ತ್ರಾನ್ಸಲೇಟರ.

—೦—

ನಂಬರು ೬೩೫

ಶಾಲಾಪತ್ರಕದ ಕಳಿದ ಜನವರಿಯ ಅಂಕದ ೧೨ನೇ ಪುಟದಲ್ಲಿ ನಮ್ಮ ಸರ್ಕ್ಯೂಲ್ಲರು ನ. ೨೫೯೯ ಧಾಖಿಸಿರ್‌ತ್ತದೆ. ಅದನ್ನು ಬೆಳಿಸಿ ಹುಕುಮು ಮಾಡುವದೇನಂದರೆ—

ಸನ್ ೧೮೬೫ನೇ ವರ್ಷದನಂತರ ಮುತ್ತು ಸನ್ ೧೮೭೧ನೇ ವರ್ಷದ ಪೂರ್ವದಲ್ಲಿ ನೇಮಿಸಲ್ಪಟ್ಟಂಥ ಅನ್‌ಪ್ರೊಮ್ಡ ಪೂಸ್ತರರೂ ಅಸಿಸ್ಟಾಂಟರೂ ನಮ್ಮ ಹುಕುಮು ಪಡಿದು ಪ್ರೀ

ನಂಗ ಕಾಲೇಜದ ಸರಟೀಫಿಕೇಟ ಪರೀಕ್ಷೆಗೆ ಹೋದರೆ ಈ ಕೆಳ
ಗಿನ ವಿಷಯಗಳಲ್ಲಿ ಅವರ ಪರೀಕ್ಷೆಯು ತಕ್ಕೊಳ್ಳಲ್ಪಡಲಿಕ್ಕಿಲ್ಲ.

(ಅ) ಸಂಸ್ಕೃತ (ಬ) ಗರಡೀ ಸಾಧಕ.
(ಕ) ಚಿತ್ರ ಬರಿಯುವದು.

(signed) W. A Russell.
ಇ. ಇನ್‌ಸ್ಪೆಕ್ಟರ ದಕ್ಷಣಭಾಗ

—o—

Correspondence.
ಪತ್ರವ್ಯವಹಾರವು.

ರಾ. ರಾ. ಕನ್ನಡ ಶಾಲಾಪತ್ರಿಕದ ಎಡಿಟರರ ಸಂನಿಧಿಗೆ
ವಿ. ವಿ. ಕೆಳಗೆ ಬರೆವ ಪಾಜಕೂರು ಅವಶ್ಯ ಪ್ರಸಿದ್ಧ ಆಗ
ಬೇಕೆಂದು ಅಪೇಕ್ಷೆಯುಂಟು.

ಸನ್ ೧೮೮೧ ಇ. ಎಪ್ರೇಲ ತಿಂಗಳ ಶಾಲಾಪತ್ರಿಕೆ ಪಾ
ನು ಒಳಗಿಂದ ಲಗಿರವರಿಗೆ ಬರೆದ "ತರುಣ ಹಿತೋಪದೇ
ಶದ ನಿಬಂಧ" ಈ ನಿಬಂಧಕರ್ತರು ಈ ನಿಬಂಧವನ್ನು ತಾ
ವು ಸ್ವತಃ ನಿರ್ಮಿಸದೆ, "ಸುಕ್ಷೇಮಾಪೇಕ್ಷಾ ಪ್ರೇರಿತ.
ತರುಣ ಹಿತೋಪದೇಶ" ವೆಂಬ ಹಿಂದು ಪಾಯ್ರಿಯವರು ಮಾ
ಡಿದ ಪುಸ್ತಕವನ್ನೆ. ಅದರ ನಕಲನ್ನು ಇವರು ಬರಿಸಿದ್ದಾರೆ.
ಈ ಪುಸ್ತಕವು ಈಗ ೬೬೩ ಮೂರಪ್ಪೆ ಕ್ರಯ ಕೊಟ್ಟರೆ ಯಾ
ರಿಗಾದರು ದೊರಿಯುವಂತೆ ಆಗೆ. ಈ ಪುಸ್ತಕದಲ್ಲಿ ಒಳ
ಪಾನುಗಳು ಅವೆ. ಪ್ರತ್ಯೇಕ ಮನುಷ್ಯನು ಈ ಪುಸ್ತಕವನ್ನು ಸಂ
ಗ್ರಹಿಸಿದಲ್ಲಿ ಈ ವಿಷಯವು ಚೆನ್ನಾಗಿ ತಿಳಿಯುವದು. ಇದ
ಲ್ಲದೆ ಈ ವಿಷಯದ ಅನುಭವವು ಇಲ್ಲದಂಥ ಪುರುಷ
ಸ್ತ್ರೀಯರೇ ಇಲ್ಲವೆಂದರೂ ಸಲ್ಲುವದು. ಹೀಗೆ ಈ ವಿಷ

ಯುವು ಅಬಾಲವೃದ್ಧರಿಗೆ ಗೊತ್ತಿದ್ದದ್ದೆ. " ಹರಿಯುದಕಾಲ
ಕ್ಕೆ ಕಾದರಮಾಡಿ ಮುಪ್ಪುನಕಾಲಕ್ಕೆ ಆಚಾರ " ಪೆಂಬ ಒಕ್ಕ
ಲಗರ ಗಾಧಿಯಂತೆ ಹುಬ್ಬಳಿ ತಿನೇ ನಂಬರ ಹೆಂಣುಮಕ್ಕಳ
ಶಾಲೆಯ ಮಾನ್ತರರು, ತಮ್ಮ ಪಾಂಡಿತ್ಯವನ್ನು ಮೆರಿಸುವಡ
ಕ್ಕಾಗಿ ಕೇವಲ ಅನುಭವಿಕ ಮುಖಿಗಳಂತೆ ಈ ನಿಬಂಧವ
ನ್ನು ದಕ್ಷಿಣ ಭಾಗದಲ್ಲಿ ಮಹತ್ವವಾದ ಶಾಲಾಪತ್ರಿಕೆಯಲ್ಲಿ
ಧಾಮಿಸಿ ಈ ತಿಂಗಳ ಪತ್ರಿಕೆಯು ೩೫ ಪಾನುಗಳನ್ನು ನಿ
ರ್ಥಕವಾಗಿ ಕೆಡಸಿದರು. ಇದರಂತೆ ಇನ್ನಮುಂಬೆ ಈ ಪು
ಸ್ತಕದ ನಕಲವನ್ನೆಲ್ಲಾ ದರತಿಂಗಳಿಗೆ ಬರೆಯುತ್ತ ನಡಿದರೆ
೭೮ ತಿಂಗಳತನಕ ಕೆಲಸ ನಡಿಯುವದು. ಶಾಲಾಪತ್ರಿಕೆ
ಯಲ್ಲಿ ಒಟ್ಟಿಗೆ ೧೨೨ ಪಾನುಗಳುಂಟು. ಹ್ಹಿ ಪುಸ್ತಕದಲ್ಲಿ ಈ
ಪಂಡಿತರ ನಿಬಂಧ!! ಅದಮೇಲೆ ೮೮ ತಿಂಗಳತನಕ ಈ
ಬಂಧವನ್ನು ಈ ಶಾಲಾಪತ್ರಿಕೆಯಲ್ಲಿ ಬರೆದರೆ ಒಟ್ಟಿಗೆ ೩೫
ಪಾನುಗಳಾಗುವವು ಅಂದರೆ ಎರಡು ತಿಂಗಳ ಶಾಲಾಪತ್ರಿಕೆಯ
ಪ್ಪಾಗುವದು. ಎರಡು ಪತ್ರಗಳ ಕ್ರಯವು ೫ ಆಣೆ. ದ
ಕ್ಷಿಣ ಭಾಗದಲ್ಲಿ ಸಾವಿರಾರು ಸಾಲಿಗಳುಂಟು. ಈ ಸಾ
ಗಳ ಮಾನ್ತರರು ಕಟಾ ಕಟಿ ೧೧೨ ಆಣೆ ಸಾಧಿಲವಾರ
ಲ್ಲಿ ಎಲ್ಲ ಕೆಲಸಮಾಡಿಕೊಂಡು ಈ ಪತ್ರಿಕದ ಕ್ರಯ ಕೆ
ಡಬೇಕಾಗುತ್ತದೆ. ಈ ಪ್ರಕಾರ ದರ ಒಬ್ಬ ಮಾಸ್ತರರು ಈ
ನಿಬಂಧದ ನಲುವಾಗಿ ೫ ಆಣೆಯಿಂತೆ ಕೊಡೋಣದರೆ
೫೦ ನೂರಾರು ರೂಪಾಯಿಗಳನ್ನು ಕೊಟ್ಟು, [೩ ಪೈಗೆ ಶಿಗುವ
ಥಾದ್ದು] ಈ ಪಂಡಿತರ ಪಾಂಡಿತ್ಯವನು ಕೊಂಡಂತಾಗುತ್ತದೆ

ಪಲಾಯುತಿಯವರು ಸಾವಿರಾರು ರೂಪಾಯಿ ಕೊಟ್ಟರೂ
ಶಬರುತಾ ಬಿಡಿಪೆಯು ೬೩ ಪೈಗೆ ಹೊರಿಯುವಂತೆ ಮಾಡುತ

ರೆ. ನಮ್ಮ ಈ ಪಂಡಿತರು ೫೬ಷಪ್ಪೆಯ ಒಂದಿವೆಗೆ ನೂರಮೆರ್ಕ್ಕೆ ರೂಪಾಯಿ ಬೀಳುವಂತೆ ಮಾಡುತ್ತಾರೆ. ಒಳ್ಳೆ ಪಂಡಿತರು! ಒಳ್ಳೆ ದೇಶಾಭಿಮಾನಿಗಳು!! ಒಳ್ಳೆ ಸುಧಾರಣೆಯು!!!

ಅಯ್ಯೋ ದುರ್ದೈವವೇ ಈ ಶಾಲಾಪತ್ರಿಕೆಯಿಂದ ಆಗುವ ಲಾಭವು ಬರ ಬರುತ್ತ ಕುಂಠಿ ಹೋಗಲಾರಂಭಿಸಿತು. ಇನ್ನ ಮುಂದೆ ವಿದ್ಯಾಖಾತೆಗೆ ಕೋಭಿಸುವಂಥ, ಆರ್ಯಾವಿಷಯುಗಳ ಪುಸ್ತಕಗಳು ಇಲ್ಲದಂಥ ವಿಷಯವಂನು ನಿಬಂಧ ರೂಪವಾ ಗಿ ಈ ಪತ್ರಿಕೆಯಲ್ಲಿ ಬರೆಸು ವಿದ್ಯಾ ಖಾತೆಯ ಸುಧಾರಣೆ ಮಾಡಬೇಕೆಂದು ನಾವು ನಮ್ಮ ಬಂಧುಗಳಾದ ಮಾಸ್ತರರಿಗೂ ಶಾಲಾಪತ್ರಕದ ಎಡಿಟರರಿಗೂ ವಿನಯಪೂರ್ವಕವಾಗಿ ಬೇಡಿ ಕೊಳ್ಳುತ್ತೇವೆ. ಇಂತಿ ವಿನ್ಹ

ಥಾರವಾಡತಾ. } ರಾಣೋ ದೇವಜಿ ಮೋರೆ. ಥಾರವಾಡ ೨೨ ೧೨।೫।೮೮ ನೇ ನಂ। ಕಂ। ಸಾಲಿ ಮಾಸ್ತರ.

—o—

ಈ ಪತ್ರವು ಒಳ್ಳೇ ಅಭಿಮಾನದಿಂದ ಬಹು ಸಯುಕ್ತಿಕವಾಗಿ ಬರಿಯಲ್ಪಟ್ಟಿದೆ. ಹಣಮಂತ ಭೀಮಶಿಂಗ ಇವರು ಕಳಿಸಿದಂಥ ಅಪ್ರಯೋಜಕವಾದ ಹಳಿಸಿದ ವಿಷಯವನ್ನು ನಾವು ಈ ಪತ್ರಿಕೆಯಲ್ಲಿ ಎಂದೂ ಬರಗೊಡುತ್ತಿರುವದಿಲ್ಲ. ಆದರೆ ಹಿಂದಿನ ಅಂಕದಲ್ಲಿ ಸಹರೀ ನಿಬಂಧವು ದುರ್ಲಕ್ಷ್ಯದಿಂದ ಪ್ರಸಿದ್ಧವಾಯಿತು. ಅದಕ್ಕೆ ನಮಗೆ ಬಹಳ ಖೇದವಾಗುತ್ತದೆ. ಮುಂದೆ ಇಂಥಾ ಪ್ರಕಾರದ ಅವಿಚಾರದ ಲೇಖಗಳನ್ನು ನಮ್ಮ ಕಡೆಗೆ ಯಾರೂ ಕಳಿಸಬಾರದೆಂದು ನಾವು ಸೂಚಿಸುತ್ತೇವೆ. ಕಳಿಸಿದರೆ ಕಳಿಸುವವರ ಶ್ರಮವು ವ್ಯರ್ಥವಾಗುವದು.

ಎ. ಶಾ. ಪ್ರ.

ರೆ. ನಾ. ಕನ್ನಡ ಶಾಲಾಪತ್ರಿಕೆಯ ಎಡಿಟರರ ನಸ್ಥಿಥಾನಕ್ಕೆ ವಿ. ವಿ. ಚಂದ್ರಕಾಂತಿಯೆಂಬ ಮಾಸ್ತರರ ವಿದ್ಯೆ ಕಾಂತಿಯನ್ನು ಅಪಹರಿಸುವ ರಾಹು ಕೇತುಗಳಂತಿರುವ ಗ್ರಾಮಾಸ್ತರನ್ನೂ, ಸ್ಕೂಲ್ ಕಮಿಟೀಯವರನ್ನೂ ಕುರಿತು, ನಾನು ಕೆಳಗೆ ಬರೆದ ನಾಲ್ಕು ಪಂಗ್ತಿಗಳನ್ನು ತಂಮ್ಮ ವಿದ್ಯೆ ಕರಾಬ್ಜದಲ್ಲಿ ಜನಿಸುವ ಶಾಲಾ ಪತ್ರಿಕೆಯಲ್ಲಿ ಛಾಪಿಸಿ, ಪ್ರಕಟ ಮಾಡಬೇಕೆಂದು ವಿನಯೋಕ್ತಿಯಿಂದ ಬೇಡಿ ಕೊಳ್ಳುತ್ತೇನೆ.

ಈಗ ಬ್ರಿಟಿಶ್ ಸರಕಾರದವರು ತಮ್ಮ ಪ್ರಜೆಗಳ ಮನಸ್ಸಿನಲ್ಲಿರುವ ಅಜ್ಞಾನಾಂಧಕಾರವನ್ನು ಪರಿಹರಿಸಿ, ಸುಜ್ಞಾನಾರ್ಕ ಕಾಂತಿಯನ್ನುಂಟು ಮಾಡಬೇಕೆಂಬಭಿಲಾಷೆಯಿಂದ ಊರೂರುಗಳಲ್ಲಿ ಶಾಲೆಗಳನ್ನಿಟ್ಟರು. ಆದರೆ ಕಳೆದ ಹಿಂದೆರಡು ವರ್ಷಗಳಿಂದೀಚು ಶಾಲೆಗಳ ಮೇಲೆ ವಿಶೇಷ ಲಕ್ಷ್ಯ ಕೊಟ್ಟು, ಮುಲ್ಕೀ ಮುಂತಾದ ಖಾತೆಗಳ ಅಧಿಕಾರಸ್ಥರನ್ನೂ ಊರೊಳಗಿನ ಕೆಲವು ಸುಜ್ಞ ಜನರನ್ನೂ, ಸ್ಕೂಲ್ ಕಮಿಟೀ ದಾರರಾಗಿ ಮಾಡಿ ನೇಮಿಸಿದರು. ಹೀಗೆ ಮಾಡಿದ್ದರಿಂದ ಶಾಲಾಖಾತೇದ ಅಧಿಕಾರಸ್ಥರ ಲಕ್ಷ್ಯವೂ, ಮುಲ್ಕಿ ಮುಂತಾದ ಖಾತೆಗಳ ಅಧಿಕಾರಸ್ಥರ ಲಕ್ಷ್ಯವೂ, ಶಾಲೆಯ ಪಂಚರ ಲಕ್ಷ್ಯವೂ ಶಾಲೆಗಳ ಮೇಲೆ ವಿಶೇಷವಾಗಿ, ಶಾಲೆಗಳು ಅತ್ಯುರ್ಜಿತಾವಸ್ಥೆಯಲ್ಲಿ ಬರುತ್ತವೆಂದು; ಸರಕಾರದವರ ಅಭಿಪ್ರಾಯ ಪ್ರಕಟಿಸುವದಷ್ಟೇ ಅಲ್ಲ; ನಮಗಾದರೂ ಹೀಗೆ ಮಾಡಿಹ್ನು, ಬಹು ಒಳ್ಳೇದೆಂದು ತೋರುತ್ತದೆ.

ದೊಡ್ಡ ದೊಡ್ಡ ಊರುಗಳಲ್ಲಿ ಬ್ರಾಹ್ಮಣ, ವೈಶ್ಯಾದಿಸ್ಥ, ಮುಂತಾದ ವಿದ್ಯಾಭಿಲಾಷೆಯ ಜನರ ವಸ್ತಿಯು ಬಹಳವಾಗಿರುವದರಿಂದ ಬಹುಶಃ ಅವರೆಲ್ಲರೂ ತಮ್ಮ ತಮ್ಮ ಮಕ್ಕಳನ್ನು ಬಹು ಪ್ರೀತಿಯಿಂದ ಶಾಲೆಗೆ ಕಳುಹಿಸಿ ಕೊಡುತ್ತಾರೆ. ಆದ್ದ

ರಿಂದ ಅಂಥ ಊರ ಮಾಸ್ತರ ಜನರಿಗೆ ಹುಡುಗರನ್ನು ಕೂಡಿ
ಸುವ ಶ್ರಮವು ಬೀಳುವದೇ ಇಲ್ಲ; ಮತ್ತು ಅಂಥ ಸಾಲಿಗಳ ಪಂ
ಚರು ಹಳ್ಳೀ ಶಾಲೆಗಳ ಪಂಚರಿಗಿಂತ ಸುಶಿಕ್ಷಿತರೂ, ವಿದ್ಯಾ ಪೇ
ಕ್ಷಿತರೂ, ವಿವೇಕಸ್ಥರೂ, ಪರೋಪಕಾರಸ್ಥರೂ ಆಗಿರುವದರಿಂ
ದ ಅವರು, ಮೇಲಿಂದಮೇಲೆ ಶಾಲೆಗೆ ಹೋಗಿ, ಶಾಲೆಯ ಸ್ಥಿ
ತಿಯನ್ನು ನೋಡಿ, ಹುಡುಗರನ್ನು ಪರೀಕ್ಷಿಸಿ, ಪಾಸಾದ ಹುಡುಗ
ರಿಗೆ ಪುಸ್ತಕ, ಶ್ಲೇಟು ಮುಂತಾದವುಗಳನ್ನು ಬಕ್ಷೀಸು ಕೊಟ್ಟು,
ವಿದ್ಯೆ ಕಲಿಯುವವರಿಗೂ, ಕಲಿಸುವವರಿಗೂ ಉತ್ತೇಜನಕೊಟ್ಟು,
ಶಾಲೆಯನ್ನು ಒಳ್ಳೇ ಸ್ಥಿತಿಯಲಿರಿಸಿ, ತಮ್ಮ ಸಾಲಿಗೆ ಒಳ್ಳೇಕೀ
ರ್ತಿಯನ್ನು ಪಡಕೊಳ್ಳುವರು; ಇದು ಸತ್ಪುರುಷರಿಗೆ ತಕ್ಕ ಕೃತ್ಯ
ವು; ಹ್ಯಾಗಂದರೆ,— ಗಿಡಗಳು ಉಗ್ರವಾದ ಬಿಸಲನ್ನ ಸುಖವಿಸು
ತ್ತಿದ್ದಾಗ್ಯೂ, ಪೂರ್ಣಾಯಾಸವನ್ನು ಪಟ್ಟು ಪಾಂಥಕರಿಗೆ ತಮ್ಮ
ತಂಪಾದ ನೆರಳಿಂದ ಹ್ಯಾಗೆ ವಿಶ್ರಾಂತಿಯನ್ನು ಪಡಿಸುತ್ತಿರುತ್ತ
ವೆಯೋ, ಹಾಗೆಯೇ ಸತ್ಪುರುಷರು,— ತಮಗೆ ಶ್ರಮವಾಹರೂ,
ಅದನ್ನು ಲಕ್ಷಿಸದೆ, ತಮ್ಮ ಕೈಲಾದಮಟ್ಟಿಗೆ ಪರಿಹಾರ್ಥವಾದ ಕೆ
ಲಸದಲ್ಲಿ ಅತ್ಯಾನಂದದಿಂದ ತೊಡಗುತ್ತಾರೆ.

ಹಳ್ಳೀ ಊರುಗಳಲ್ಲಿಯ ಗ್ರಾಮಸ್ಥರು, ತಮ್ಮ ತಮ್ಮ ಹಳ್ಳಿ
ಗಳಲ್ಲಿ ಮಹಾರಾಜಸ್ವರೂಪಿಗಳಾಗಿರುವರು; ಹ್ಯಾಗಂದರೆ,—
ವಿದ್ಯೆಯಲ್ಲಿ ಜಾಣರೂ, ಸ್ವಂತ ಬುದ್ಧಿಯುಳ್ಳವರೂ, ವಿಚಾರಪರ
ರೂ, ಆದಜನರನ್ನು ಹಳ್ಳೀ ಊರುಗಳಲ್ಲೆಲ್ಲಿಯೂ ಹುಡುಕಿ
ದರೆ ಶಿಕ್ಷಿತರು ಬಹು ಅಪರೂಪವಾಗಿರುವರಲ್ಲದೆ, ವಿದ್ಯೆಯೇ
ರೂ, ಅನ್ಯ (ಗ್ರಾಮಸ್ಥರ) ಹೇಳಿಕೆಯಂತೆ ನಡೆಯುವವರೂ,
ವಿಚಾರ ಹೀನರೂ ಆದ ಮೂಢರೇ ಹಳ್ಳಿ ಜನರುಂಟು. ಗ್ರಾಮ
ಸ್ಥರು,— ಎಂಥಲ್ಲೊಂದ್ದ ಅಪರಾಧ ವಿಷ್ಟರೂ, "ಅದನ್ನು ನಿಃ

ಪು ಮಾಡಿರಿ; ಏನುಬಂದದ್ದು ನಾವು ನೋಡುತ್ತೇವೆ." ಎಂದು ಈ ಮೂಢರಿಗೆ ಹೇಳಿದರೆಸಾಕು; ಅದು ನ್ಯಾಯವೂ ನ್ಯಾಯವೆಂ ಬುವ ವಿಚಾರಕ್ಕೊಳಗಾಗದೆ ಅವರ ಮಾತುಗಳಿಗೊಡಂಬಟ್ಟು ಅ ದರಂತೆಯೇ ವರ್ತಿಸುವರು. ಮತ್ತು ಇವರು ಗ್ರಾಮಸ್ಥರ ದುರಾಜ್ಞೆಯನ್ನೇ ಹಿತಕರವಾದ ರಾಜಾಜ್ಞೆಯಂತೆ ತಾವು ಭಾವಿಸಿಕೊಂಡು ಮನ್ನಿಸುವರು.

ಈ ಸಂಗತಿಯು ಎಷ್ಟೋ ಜನರಿಗೆ ಗೊತ್ತಿದ್ದದ್ದರಿಂದ, ನಾವು ಇ ದಕ್ಕಿಂತ ವಿಸ್ತಾರವಾಗಿ ಬರೆದರೂ ಅಷ್ಟೇ, ಬರೆದಿದ್ದರು ಅಷ್ಟೇ; ದೇಶ ಭಾಷೆಯ ಶಾಲೆಗಳ ಸ್ಥಿತಿಗಳನ್ನು ವಿಚಾರಿಸುವದಕ್ಕೆ ಸರ್ಕಾರದವ ರಿಂದ ನೇಮಿಸಲ್ಪಟ್ಟ ಸ್ಕೂಲ್ ಕಮಿಟೀಯವರಾದರೂ, ಈ ಮೂಢ ಜನರೊಳಗಿನವರೇ. ಸೂತ್ರದ ಗೊಂಬೆಗಳ ಥಾರಗಳನ್ನು ಹಿಡಿದು ಜಗ್ಗಿದರೆ, ಅವು ತಮ್ಮ ಕೈಕಾಲುಗಳನ್ನು ಚಾಚುತ್ತಲೂ, ಗೋ ಣುವಲೆದಾಡಿಸುತ್ತಲೂ, ಕುಣಿಯುವಂತೆ ಹಳ್ಳಿಗರ ಜನವೂ ಸ್ಕೂಲ್ ಕಮಿಟೀಯವರೂ ಗ್ರಾಮಸ್ಥರ ದುರಾಜ್ಞೆಯನ್ನು ಕೇಳಿ ಕೊಂಡು ದುರಾಚಾರದಿಂದ ನಡೆಯುವರು.

ತಾ. ೨೮ನೇ ಮೇ ಸನ್ ೧೮೪೧ ಇ) (ಮುದ್ರಿಸಕ್ಕೆ ಸಾಗುವ.)
ಸಹಿ.)

—o—

ರಾ. ಸಾ. ಕನ್ನಡಶಾಲಾಪತ್ರಿಕೆ ಕರ್ತರಿಗೆ—

ವಿನಂತಿ ವಿಜ್ಞಾಪನಾ: ತಮ್ಮ ಕರಕಮಲಗಳಲ್ಲಿ ಉದ್ಭವಿಸು ವ ಹೊನೋಹರವಾದ ಶಾಲಾಪತ್ರಿಕೆಯು ಸರ್ವರಿಗೂ ಆನಂದ ಭರಿತ ವಾಗಿರುವದಷ್ಟೆ— ಆದರೆ ಕೆಳಗೆ ಬರೆದ ಕಾಲ್ಮುವಂಗ್ರಿ ಗಳನ್ನು ತಮ್ಮ ಪತ್ರಿಕೆಯಲ್ಲಿ ಭಾವಿಸಿ ಪ್ರಕಟಿಸಬೇಕೆಂದು

ಬೇಡಿಕೊಳ್ಳುತ್ತೇನೆ.

ವಿದ್ಯಾಭಿವೃದ್ಧಿಯ ಉತ್ತೇಜನವು —

ಗುತ್ತಲ ಶಾಲೆಯ ವಾರ್ಷಿಕ ಪರೀಕ್ಷೆಯ ಬಕ್ಷೀಸು

ಈ ಸಮಾರಂಭವು ರಾವ ಸಾಹೇಬ ಅಗಟಿಂಗ ಥಿಪೂಟಿ ಎಜ್ಯು
ಕೇಶನಲ್ ಇನಸ್ಪೇಕ್ಟರ ಜಿಲ್ಲಾಭಾರವಾಡ ಖಾಪಂದರವರ ಸಾ
ಹಾಯದಿಂದಲೂ ಅತಿಶ್ರಮೆಇಂದಲೂ ತಾರೀಖು ೨೦ನೇ ಫೇ
ಬರವಾರಿ ಸನ್ನ ೧೮೮೧ ಇಸವಿ ಯಿವಸಾ ಗಂಡಹುಡುಗರ ಸಾ
ಲೆಯಲ್ಲಿ ಆಯಿತು ಈ ಸಮಾರಂಭಕ್ಕೆ ಇಲ್ಲಿಯ ಗ್ರಾಮಸ್ಥರೂ,
ಸ್ಕೂಲ ಕಮಿಟೀದಾರರೂ, ಶಟ್ಟಿ ಸಾವಕಾರರೂ, ಬಂಧಿದ್ದರು ಸಾ
ಲೆಯ ಪರೀಕ್ಷೆಯು ಮುಗದಬಳಿಕ ರಾವಸಾಹೇಬರವರು ವಿ
ದ್ಯಾಕಲವಿಕೆಇಂದಲೂ, ಬಕ್ಷೀಸಿನಿಂದಲೂ, ಅಭ್ಯಾಶಿಗಳಿಗೆ ಆಗ
ತಕ್ಕ ಲಾಭಗಳ ವಿಷಯವಾಗಿ ವಿದ್ಯಕಲಿಯುವ ಉತ್ತೇಜನ ವಿ
ಷಯವಾಗಿ ಸರಸವಾದ ನಿಬಂಧಗಳನ್ನು ಆಯಾ ಸಾಲಿಗಳ ವಾ
ರ್ಷಿಕ ಪರೀಕ್ಷೆದ ಸ್ಥಿತಿಗತಿ ಪರಿಮಾಣುಗಳನ್ನು ಸರ್ವರೂ ತ
ಮ್ಮ ಉದ್ಯೋಗವನ್ನೂ ನಿಲ್ಲಿಸಿ ಈ ಸಮಾರಂಭಕ್ಕೆ ಬಂದಬಗ್ಗೆ
ಶಿವರನ್ನು ಹೊಗಳತಕ್ಕದು ಇಂಥಾ ಸಮಾರಂಭವು ಈ ಸಾಲಿ ಮು
ನ ಆದ ಆರಭ್ಯ ಯಾರೂ ಕಂಡಿದ್ದಿಲ್ಲ. ಈ ಹೊತ್ತಿನ ಯಿವಸಾ
ಯೀಹಬರ್ಾನ್ ರಾವಸಾಹೇಬ ಅಗಟಿಂಗ ಥಿಪೂಟಿ ಧೊರೆಗಳು ಇ
ವರ ಶ್ರಮದಿಂದ ಸರ್ವತ್ರಿಷ್ಟಿ ಗೋಚರವಾಯಿತು ತದನಂತರ
ವಿದ್ಯಾಭಿವೃದ್ಧಿಗೂ ಅಭ್ಯಾಶಿಗಳ ಉತ್ತೇಜನಾರ್ಥವಾಗಿಯೂ ಈ
ನಬಂಧ ಸರ್ವ ಗ್ರಹಸ್ಥರೂ ವರ್ಗಣಿ ಕೊಟ್ಟರು ಆದ್ದರಿಂದ ಅ
ವರ ನಾವೂಕಿಂತವನ್ನು ಅವರು ಕೊಟ್ಟ ರಕಮುಗಳನ್ನು ಪ್ರತಿಬ್ಬಿ
ಲ್ಪಡುವದು ಯೋಗ್ಯವಾದದ್ದೆಂದು ಇಲ್ಲಿ ಕೆಳಗೆ ಬ
ರೆದ್ದೇನೆ ಹೆಸರು ರಕಮು ರೂ — ಹೆಸರು ರಕಮು ರೂ.

ವೆಂಕಪ್ಪ ನಾಯಿಕ ಬೆಳ	೧	ಲಕ್ಷ್ಮಣಶಿಂಗ ಜಮೂ	೧
ಗಾವ ಕಮಿಟೀದಾರ		ದಾರ ಕಮಿಟೀದಾರ	
ಸಖಾರಾಮಸಂಷ ಕಾನಿಟಕರ ಕ.	೧	ಗೋಪಾಲಪ್ಪ ಕಟ್ಟಿ	೧
ವೀಲಪ್ಪ ಪಾಟೀಲ ಕ.	೬೮	ರಂಗಪ್ಪ ಬುರಲಿ	೧
ಗುಂಡಪ್ಪ ಕುಲಕರ್ಣಿಕ.	೬೮	ಗಣಪ್ಪ ಕುಲಕರ್ಣಿ	೬೮
ಶೀನಪ್ಪ ಠಾಸರ ಕ.	೬೮	ರಾಚಪ್ಪಾಮರಿಯೂನಿ	೬೮
		ಮಾನಪ್ಪ ಅಗಸಾಲರ	೬೮

ಈ ಪ್ರಕಾರ ಎಂಟು ರುಪಾಯಿ ಪರ್ಯಾಣಿ ಕೊಡಿಶಿರಾಪಸಾಹೇ
ಬರವರ ಸಂಮುಖದಲ್ಲಿಟ್ಟರು. ಇಲ್ಲಿ ಪುಸ್ತಕ ಬೋರಿಯದಪ್ರಯು
ಕ್ತ ಈ ರುಪಾಯಿಗಳನ್ನು ಕಮಿಟೀದಾರರ ಕಡಿಗೆ ಕೊಟ್ಟು ಈ ಹಣ
ದಿನ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಇಂತಿಂಥಾ ಪುಸ್ತ
ಕಗಂಡಮಕ್ಕಳಿಗೂ ಹೆಂಣಮಕ್ಕಳಿಗೂ ಕೂಪಿ ಕೊಡಬೇಕಂತ ಹೇ
ಳಿ ಹೊರಟು ಹೋದರು. ಪುನ: ಇಲ್ಲಿಯ ಕಮಿಟೀಯವರೂ ಶೆಟ್ಟಿ
ಸಾಪಕಾರರೂ ಬಂದು ರಾಪಸಾಹೇರವರ ಅಪ್ಪಣಿ ಪ್ರಕಾರ ಪು
ಸ್ತಕಗಳನ್ನು ತರಿಶಿ ತಾರೀಖು ೧೦ನೇ ಮಾರ್ಚಿ ದಿವಸಾ ಗಂಡಮ
ಕ್ಕಳ ಪ ಹೆಂಣಮಕ್ಕಳ ಪರೀಕ್ಷೆಯನ್ನು ತೆಗದುಕೊಂಡು ಪುಸ್ತ
ಕವನ್ನು ಹಂಚಿದಲ್ಲದೆ ಕೆಲವ್ರು ಹೆಂಣಮಕ್ಕಳಿಗೆ ಖಣವನ್ನುಕೊ
ಟ್ಟರು ಸಪೂರಂಭವ್ರು ಮುಗಿದ ಮೇಲೆ ಪಾಸಾಗದಂಥಾ ಗಂಡು
ಹೆಂಣುಮಕ್ಕಳಿಗೂ ಅಪರಮನಸು ಸಂತೋಪ ಪಡಿಸುವ ಗೋ
ಸ್ವರ ಸಭಾ ಮಂಡಳಿಪ್ಪೈಕಿ ಪ ಕಮಿಟೀದಾರರಪ್ಪೈಕಿ ಚನಬಸಪ್ಪಾ
ಕಾಡಪ್ಪನವ ೬೮ಎಂಟು ಆಣಿ, ಚೆನಬಸಪ್ಪಾ ಚೆಕ್ಕಿ ೬೮ ಯಾಂಟು
ಆಣಿ, ಈ ಪ್ರಕಾರ ಪಂದು ರುಪಾಯಿಪೂರ್ತಿ ವಿದ್ಯಾರ್ಥಿಗಳಿಗೆ ಗಂ
ಡಮಕ್ಕಳಿಗೂ ಹೆಣ್ಣುಮಕ್ಕಳಿಗೂ ಹಂಚಿದರು. ಈ ಭಕ್ಷಿಸವನ್ನು ಪ
ಡಕೊಂಡು ಉತ್ತೇಜನವನ್ನು ಹೊಂದಿದ ವಿದ್ಯಾರ್ಥಿಗಳೂ ಇವರ

ಆಶ್ರಯ ಹೊಂದಿದ ಪತ್ರಾಧಿಕಾರಸ್ಥರೂ ಮೇಲೇ ಬರದ ಅಂತ:ಕ
ರಣವುಳ್ಳವರ ಕಲ್ಯಾಣಕೋಸ್ಕರ ದೇವರನ್ನು ಪ್ರಾರ್ಥಿಸತಕ್ಕದ್ದು

ಕೂಸೋ ಮುದ್ದಗಿರಿ ಕುಲಕರ್ಣಿ
ಸ್ಕೂಲಹೂಸ್ತರ ಗುತ್ತಲ.

— o —

ರಾವಸಾಹೇಬ ಕನ್ನಡ ಶಾಲಾ ಪತ್ರಕ ಪ್ರಾಂತ ದಕ್ಷಿಣಭಾಗ
ಇವರ ಚರಣಾಶ್ರಯ ಕಮಲಗಳಿಗೆ.
ಅಯ್ಯಾ; ನನ್ನ ಬಾಂಧವರುಗಳರಾ., ತಾ. ೨೨ನೇ ದಿವಸರಾ
ತ್ರಿ [ಸುಮಾರು ೯ ಘಂಟೆ]ಬಡಿಯುವ ವ್ಯಾಳ್ಳಕ್ಕೆ ಆಕಾಶದಲ್ಲಿ
ಹಿಂಸು ಅದ್ಭುತ ಚಮತ್ಕಾರ ಪಾಯಿತು ಕಂಡಿರೊ; ಅನು
ಹ್ಯಾಗಿತದರೆ ಅದು ಹಿಂಡುಹೊಡ್ಡ ಕುಂಬಳ ಕಾಯಿಹಾಗೆ ಇ
ದ್ದು ಅದರಹಿಂಬೆ ಬಹುಹೊಡ್ಡಬಾಲವಿತ್ತು. ಅದು ಸಾಧಾರಣ
ವಾಗಿ ಉತ್ತರಕ್ಕೆ ಉದಯವಾಗಿ ದಕ್ಷಿಣಕ್ಕೆ ಅಸ್ತವಾಯಿತು.
ಇಲ್ಲಿಕೆಲವ್ರ ಜನರು ಮಿಂಚು ಮಿಂಚು ಅಂತ ಅಂದರು. ಆ
ದರೆ ಮಿಂಚು ಅನ್ನಬೇಕಾದರೆ ೧|೩ ಘಳಿಗಿ ಬೆಳಕು ಬಿದ್ದು ಹೋ
ಗುವದಿಲ್ಲ. ಆದರೆ ನನ್ನ ಅಲ್ಪಮತಿಗೆ ತೋಚಿದ್ದೇನಂದರೆ ಬಾ
ಲಚಿಕ್ಕಿ ಅಂತ ನನ್ನ ಅಭಿಪ್ರಾಯವಿದೆ. ಅದರ ಬೆಳಕು ಹಗಲಪಂ
ಜಿನಂತೆ ಪ್ರಕಾಶವಿತ್ತು. ಆದರೆ ಇದುಬಾಲಚಿಕ್ಕಿಯೇ ಅಂತಶಿ
ದ್ಧಾಂತ ಮಾಡುವದು ನನ್ನಿಂದ ಆಗದಕಾರಣ ಮುಕ್ತಪತ್ರಿಕೆಯ
ದ್ವಾರದಿಂದ ತಿಳಕೊಂಡು ನನ್ನ ಸಂಶಯ ಪರಿಹಾರ ಮಾಡಿಕೊಳ್ಳು
ವದರ ಉದ್ದೇಶ ತಮ್ಮ ಕಡಿಗೆಕಳಿಸ್ದೇನೆ ಆದರೆ ವಿದ್ವಜ್ಜನರು
ನನ್ನ ಬಾಂಧವರು ಗಳಾದ ಮಾಸ್ತರ ವ ಅಶಿಷ್ಟಂಟ ಮಾಸ್ತರರು

ಯಾರಾದರೂ ನೋಡಿದವರಿದ್ದರೆ ಇದೇ ಮುಕಪತ್ರಿಕೆಯ ದ್ವಾರ
ದಿಂದ ತಿಳುಹಿಸಿ ನನ್ನ ಮನಸ್ಸು ಸಂತೋಷ ಪಡಿಸುವದು. ಎ
ದೀಟರ ರಾಯರೆ ಪತ್ರವಿಸಾರ ಪಾಡಬಗ್ಗೆ ಕ್ಷಮಾ ಮಾಡಬೇ
ಕೆಂದು ಬೇಡಿಕೊಳ್ಳುತ್ತೇನೆ. ದೇವರು, ನನ್ನ ಮೇಲೆ ಅಂತಃಕ
ರುಣ ಬಿರಲಿ. ಮತ್ತು ಈ ಚಮತ್ಕಾರ ಸಂಗತಿಯನ್ನು ಮುಂಗಿ
ನ ತಿಂಗಳದಲ್ಲಾದರೂ ಛಾಪಿಸ ಬೇಕೆಂದು ನಂನ ಕಾಂಕ್ಷೆ ಅದೆ.
ಇಂತಿ ವಿನಂತಿ ವಿಜ್ಞಾಪನಾ:

ತಾ. ೨೫/೫/೧೯ } ಸಹಿ ಭೀಮಾಜಿ ಶ್ರೀನಿವಾಸ ಅಡಬಡ್ಡಿ ಸ್ಕೂಲ
ಅ. ಮೂ. ತಡಹಾಳ ತಾಲೂಕ ನವಲಗುಂದ

—೦—

ಗಂಗೀಭಾವಿ ಕ್ಷೇತ್ರ.

ರಾ. ಸಾ. ಕನ್ನಡ ಶಾಲಾ ಪತ್ರಿಕೆಯ ಎಡಿಟರ ಸನ್ನಿಧಾನಕ್ಕೆ
ವಿ. ವಿ. ಅಯ್ಯಾ ಕೆಳಗಿನ ನಾಲ್ಕು ಪಂಗ್ತಿಗಳಿಗೆ ತಮ್ಮ ಕರಕಮ
ದಲ್ಲಿ ಜನಿಸುವ ಸುಂದರವಾದ ಶಾಲಾಪತ್ರಿಕೆಯಲ್ಲಿ ಸ್ಥಳದೊ
ರಿಯ ಬೇಕೆಂದು ಪೂರಾ ಆಶೆಯುಳ್ಳವನಾಗಿದ್ದೇನೆ.

ಈ ನಮ್ಮ ತಾಲೂಕಿನೊಳಗೆ ಯಡಲಾಬಾದ ಎಂಬೋ ಬೇ
ರಾಇ ಗ್ರಾಮದ ಹತ್ತಿನಲ್ಲಿ ಗಂಗೀಭಾವಿ ಎಂಬುವಪೊಂದು ಪ
ಣ್ಯ ಕ್ಷೇತ್ರ ಬಿರುವದು ಇಲ್ಲಿಯ ಯಾವತ್ತು ಜನರಿಗೆ ಗೊತ್ತಿರ
ಹುದು. ಈ ಕ್ಷೇತ್ರದಲ್ಲಿ ಗಂಗಿಭಾವಿ ಎಂಬುವಪೊಂದು ೧
ದ್ದಾ೪ಳ ಪ್ರಮಾಣ ಕಲ್ಲಿನಿಂದ ಕಟ್ಟಿಸಿದಭಾವಿ ಇದ್ದು ಇದ
ಲ್ಲಿ ಮೂರು ಜಲ ಬರುವ ಮಾಡಗಳು ಇರುತ್ತವೆ. ಅವುಗಳೊ
ಗಿಂದ ನೀರಿನ ಪ್ರವಹ ಬರುತಿದ್ದು, ಮೇಲೆ ರಾಮೇಶ್ವರ ದೇವಸ್ಥ
ನ ಬಿರುತ್ತದೆ. ಆದರೆ ದುರ್ದೈವಾಹತ್ವವಾಡ ಸ್ಥಾಯುವಿ ವೈಕ್ಷಣ

ಇರುತ್ತದೆ. ಈ ಕ್ಷೇತ್ರದಲ್ಲಿ ದರ ಪೂರ್ಣಿಮೆಗೆ ಮತ್ತು ಅಮಾವಾ
ಸ್ಯೆಗೆ ಅನೇಕ ಜನರು ತಮ್ಮ ಪಾಪ ವಿಮೋಚನ ನಿಮಿತ್ತವಾಗಿ ಪು
ಷ್ಕರಿಣಿಯಲ್ಲಿ ಸ್ನಾನವೆಂದು ನೆನಸಿ ನೇವಾಸೂತ್ರದ ನಿಮಿತ್ತವಾಗಿ ಕೂಡು
ತ್ತಾರೆ. ಹಾಂಗು ಶನಿವಾರ, ಸೋಮವಾರ, ಗ್ರಹಣ ಪರ್ವ
ಗಳು ಮುಂತಾದ ದಿವಸಗಳಲ್ಲಾದರೂ ಬಹು ಜನರು ಬರುವ ಸಾಂ
ಪ್ರದಾಯವಿರುತ್ತದೆ. ಈ ಕ್ಷೇತ್ರದಲ್ಲಿ ಪುರಾತನ ಕಾಲದೊಳಗೆ
ಯಾವನೋ ಒಬ್ಬ ಮಹಾನ್ ಪುರುಷನು ಜನಿಸಿ ಕಲ್ಲಿನೊಳಗೆ
ಂದು ಗವಿಯನ್ನು ಹೊಡಿಸಿರುತ್ತಾನೆ. ಇದೊಂದು ನೋಡುವದ
ಕ್ಕೆ ಚಮತ್ಕಾರವಾದದ್ದು. ಇನ್ನೊಂದು ಆಶ್ಚರ್ಯಕರವಾದ ನಂ
ತಿಯು ಈ ಪುಣ್ಯಕ್ಷೇತ್ರದಲ್ಲಿ ನಡೆಯುವದೇನಂದರೆ—— ಜಾ
ತ್ಯರ್ಥಕ [ಥಳಜ್ವರ] ಬರುತ್ತಿದ್ದವರು ಈ ಪುಣ್ಯಕ್ಷೇತ್ರದಲ್ಲಿ ಬಂ
ದು ಸ್ನಾನ ಮಾಡಿ ದೇವಸ್ಥಾನದ ಶೇವಾ ಮಾಡಲ್ಹತ್ತಿದರೆ ೧೫
ದಿವಸಗಳಲ್ಲಿ ಅನೇಕ ಜನರಿಗೆ ಜಾತ್ಯರ್ಥಕ ನಿಂತು ದುರಸ್ತ
ಯಾಗಿ ತಮ್ಮ ಗ್ರಾಮಗಳಿಗೆ ಹೋಗುತ್ತಾರೆ. ಇದೇ ಪ್ರಕಾರ ಎ
ಷ್ಟೋ ಜನರು ಸಾರ್ವಕಾಲ ನಡೆದುಕೊಳ್ಳುವವರು ನಜರಿಗೆ ಬೀ
ಳುತ್ತಾರೆ; ಇದರ ಕಡಿಗೆ ಜಾತ್ಯರ್ಥಿಕ ಜನರು ದಯವಾಗಿ ನಜ
ರಿಕೊಟ್ಟು ವಿಶ್ವಾಸದಿಂದ ನಡೆದರೆ; ರೋಗದಿಂದ ಮುಕ್ತರಾಗ
ಬಹುದು —— ಈ ದೇವಸ್ಥಾನದ ಜಾತ್ರೆಯು ದರ ವರುಷ ಮು
ಕರ ಸಂಕ್ರಮಣ ದಿವಸವಾಗುತ್ತದೆ. ಆಗ್ಗೆ ಜನರ ದಾಟಿ ಬಹಳ
ವಾಗಿ ಕೂಡಿದ ಜನರಿಗೆ ಕುಡಿಯುವದಕ್ಕೆ ನೀರು ಸಹಾ ಶಿಗು
ವದು ದುರ್ಲಭ. ದೇವರಿಗೆ ಇನಾಮು ಜಮೀನುಗಳುಂಟು.
ಈ ದೇವಸ್ಥಾನದ ತನಕ ಲೈನಮಾರ್ಗ ಆಗುವದೆಂಬವಾ
ರ್ತೆ ಹುಟ್ಟಿ ೫।೬ ವರುಷಗಳಾದವು. ಇವತ್ತಿಗೂ ಅದರ
ಕಡೆಗೆ ಸರಕಾರ ನಜರು ಹೋದಂತೆ ತೋರುವದಿಲ್ಲ. ಲೈನನ್ನಾ

ರ್ಗವಾದರೆ ಬರತಕ್ಕ ಜನರಿಗೆ ಓದ್ಯಾಡುವರಕ್ಕೆ ನಿರಾಯ
ಸವಾಗಿ ಬಹುಸೌಖ್ಯವಾಗುವದು. ಇದು ಮುಖ್ಯಾಸ್ಥಾನವೆಂ
ಪ ಬಗ್ಗೆ ಪುರಾಣ ಪ್ರಸಿದ್ಧ ವಿರುವದು ಮುಂದಿನ ಸಾರೆ ಬರೆಯು
ನು. ಪತ್ರವಿಸ್ತಾರಕ್ಕೆ ಕ್ಷಮಾ ಇರಲಿ ಸ್ವಾಮೀ

ಆರಚಾಳ, ಹೊಸೂರ, ತಾ.ಬ.ಜಿ.ಧಾ, } ಹಣಮಂತ ಶೇಷ
ತಾ. ೧೭.೫.೮೧ನೇ ಇಸವಿ. } ಕುಲಕರ್ಣಿ



ಶಾಲಾಪತ್ರಿಕೆ.

ಪುಸ್ತಕ ೧೬] [ಸಂಚಿಕೆ ೬

ಜೂನ ೧೮೮೧

Eduestion and Improvement.

ವಿದ್ಯಾಸುಧಾರಣೆಯಾ ಸಬಂಧವಾದ ಸಂಗತಿಗಳು.

ಮದ್ರಾಸ ಪಟ್ಟಣದಲ್ಲಿ ಒಕ್ಕಲತನದ ವಿದ್ಯವನ್ನು ಕಲಿಸುವ ಕಾಲೇಜವಿರುವದಷ್ಟೇ ಆ ಕಾಲೇಜದ ವಿದ್ಯಾರ್ಥಿಗಳು ಮದ್ರಾಸದ ಯುನಿವರ್ಸಿಟಿಗೆ ಅರ್ಜಿಯನ್ನು ಮೂಡಿ ಜೇಲಿಕೊಂಡಡ್ದೇನೆಂದರೆ, ಮೈದ್ಯಕ, ಇಂಜನಿಯರಿಂಗ, ಮುಂತಾದ ವಿದ್ಯಗಳನ್ನು ಕಲಿತು ಪರೀಕ್ಷೆಯಲ್ಲಿ ಪಾಸಾಗುವ ವಿದ್ಯಾರ್ಥಿಗೆ ಪದವಿಗಳು ಹೇಗಿಯುವಂತೆ ತಮಗಾದರೂ ಪೂನದ ಪದವಿಗಳು ಏನಾದರೂ ಹೊರಿಯು ಬೇಕು. ಆದರೆ ಇವರು ತಮಗೆ ಎಂಥಾ ಪದವಿಗಳು ಹೊರಿಯಬೇಕೆಂಬುವದನ್ನು ಸ್ಪಷ್ಟವಾಗಿ ಬರಿದು ತಿಳಿಸಿದಂತೆ ತೋರುವದಿಲ್ಲ. ನಮ್ಮ ಅಭಿಪ್ರಾಯದಿಂದ ಈ ವಿದ್ಯಾರ್ಥಿಗಳಿಗೆ "ರಂಟಿ ಪಂಡಿತ", "ಕುಂಟಿ ಕುಶಲ", ಈ ಪ್ರಕಾರದ ಪದವಿಗಳು ತಕ್ಕ ಬಹುಮಾನ ಸೂಚಕಗಳಾಗುವವೆಂದು ತೋರುತ್ತದೆ.

ರಾಜಕೋಟೆಯೊಳಗಿನ ಕಾಲೇಜದಲ್ಲಿ ಅಭ್ಯಾಸಿಸುವ ರಾಜ

ಕಾಪೂರರಿಗೆ ಅಭ್ಯಾಸದ ಶ್ರಮವು ಬಹಳ ಬೀಳುತ್ತದೆಂದು ನೋಡಿ ಅವರ ಅಭ್ಯಾಸವನ್ನು ಕಡಿಮೆ ಮಾಡುವ ವಿಚಾರವು ನಡೆದಿದೆಯೆಂದು ತಿಳಿಯುತ್ತದೆ.

—o—

ಬಂಗಾಲ ಇಲಾಖೆಯಲ್ಲಿ ಶಿವಪುರವೆಂಬ ಪಟ್ಟಣದಲ್ಲಿ ಇಂಜನೀಯರಿಂಗ ಕಾಲೇಜವಿರುತ್ತದೆ. ಅಲ್ಲಿಯವನೊಬ್ಬ ಪ್ರೊಫೇಸರನು ಹಿಬ್ಬ ವಿದ್ಯಾರ್ಥಿಯು ಚಂಡಿಗೆ ಕೈ ಕೊಟ್ಟು ನುಗಿಸಿದ ಮೂಲಕ ೮೦ ಜನ ವಿದ್ಯಾರ್ಥಿಗಳು ಒಕ್ಕಟ್ಟಾಗಿ ಡಾಯರೆಕ್ಟರವರ ಕಡೆಗೂ ಸರಕಾರಕ್ಕೂ ಫಿರ್ಯಾದಿಯನ್ನು ಮಾಡಿದರು. ಆ ಕಾರಣ ಅವರೆಲ್ಲರನ್ನು ಕಾಲೇಜಿಂದ ಹೊರಗೆ ಹಾಕಲಿಕ್ಕೆ ಸರಕಾರದವರು ಹುಕುಮು ಮಾಡಿದ್ದರಿಂದ, ಅವರಲ್ಲಿ ೬೦ ಜನ ವಿದ್ಯಾರ್ಥಿಗಳು ಪಶ್ಚಾತ್ತಾಪಗೊಂಡು ಆ ಪ್ರೊಫೇಸರನ ಕ್ಷಮೆಯನ್ನು ಬೇಡಿದರು. ಅದರಿಂದ ಅವರನ್ನು ೬ ತಿಂಗಳಿನ ತರುವಾಯ ಕಾಲೇಜಿನೊಳಗೆ ತಕ್ಕೊಳ್ಳಬಹುದೆಂದು ಅಪ್ಪಣೆ ಆಯಿತು. ವಿದ್ಯಾಗುರುಗಳನ್ನು ಮೂರಿಕೊಂಡವರಿಗೆ ಈ ಪ್ರಕಾರ ಶಿಕ್ಷೆಯೂಗುವದು ವಿಹಿತವೇ ಸರಿ.

———

ಕಲಕತ್ತೆಯಲ್ಲಿ ಪಾದ್ರೀ ಜನರು ರಾಜಪೂರ್ಗಡದಲ್ಲಿ ನಿಂತು ಧರ್ಮೋಪದೇಶವನ್ನು ಮಾಡಬಾರದೆಂದು ಅಲ್ಲಿಯ ಪೋಲೀಸ ಕಮಿಶನರನು ಅವರಿಗೆ ಹುಕುಮು ಮಾಡಿದಾಗ್ಯೂ ಆ ಪಾದ್ರಿಗಳು ಅದನ್ನು ಲೆಕ್ಕಿಸದೆ, ತಮ್ಮ ಉಪದೇಶದ ಕ್ರಮವನ್ನು ಯಥಾ ಪ್ರಕಾರ ನಡಿಸಿದರಿಂದ ಪೋಲೀಸ ಅಧಿಕಾರಿಯು ಅವರನ್ನು ಸೆರೆಜದಾರಿಯೊಳಗೆ ತಂದು ಮಾಜಿಸ್ಟ್ರೇಟರ ಮುಂದೆ ನಿಲ್ಲಿಸಿದನು. ಆದರೆ ಮಾಜಿಸ್ಟ್ರೇಟರು, ಪೋಲೀ

ಕವಿಶನವನಿಗೆ ಇಂಥಾ ದಂಡನೆಯು ಪೊಡಿಯುವ ಅಧಿಕಾರ
ಇಲ್ಲೆಂದು ನಿರ್ಧರಿಸಿ ಪಾತ್ರಿಗಳನ್ನು ಬಿಟ್ಟುಕೊಟ್ಟು
ಇದು ಬಳ್ಳೇಯಾಯಿತು. ಪಾಪ್ರುಗಳಿಗೆ ಕಿಕ್ಷೆ ಆಗಿದ್ದರೆ
ಜನರು ಖ್ರಿಸ್ತೀ ಧರ್ಮೋಪದೇಶದ ಲಾಭಕ್ಕೆ ಎರ
ತ್ತಿದ್ದರು.

—o—

ಶಿಯದ ನಿಮಿಲಿಸ್ಟ ಜನರು ಮಾಡಿದ ಅತಿ ಭಯಂಕರ
ರಾಜದ್ರೋಹವನ್ನು ನಾವು ಹಿಂದಿನ ಎಪ್ರಿಲ್ ತಿಂಗ
ಅಂಕದಲ್ಲಿ ತಿಳಿಸಿದ್ದೇವೆ. ಈ ಜನರನ್ನು ಶಿಕ್ಷಲ್ಲಿ ಹಿ
ಮಾರಿಪತ್ಯ ಮಾಡಿದ ಕ್ರಮವನ್ನು ಅಲ್ಲಿಯ ಹೊಸ
ಶಹನು ನಡಿಸಿದ್ದಾನೆ. ಇದು ಯಾಥಾಯೋಗ್ಯ ವಿ
ದೆಂದು ಯಾರಾದರೂ ತಲೆದೂಗದವರು. ಯಾವತ್ತು ಭೂ
ಕಕ್ಕೆ ಸುಧಾರಣೆಯ ಮಾರ್ಗವನ್ನು ತೋರಿಸುವ ಯಾ
ಖಂಡದೊಳಗೆ ಇಂಥಾ ಹಿಂಸ್ರಪಶುಗಳಾದ ಕ್ರೂರ ಜನರು
ಪದರಿಂದ ಆ ಖಂಡದವರ ಸುಧಾರಣೆಗೂ, ವಿದ್ಯಕ್ಕೂ,
ವಕ್ಕೂ ಬಹು ದೊಡ್ಡ ಕುಂದು ಬರುತ್ತದೆ. ನಾ
ಅರ್ಥ ಸುಧಾರಿಸಿದವರೆಂದನಿಸಿಕೊಳ್ಳುವ ಹಿಂದೂ
"ರಾಜಾಹರತಿ ಸರ್ವಸ್ವತಂತ್ರ ಕಾಪರಿದೇವನಾ" (ಅ
ಸರ್ವಸ್ವವನ್ನು ಹರಣಮಾಡಿದರೆ ಅದಕ್ಕೆ ಕ್ಲೇಶವ್ಯಾಕೆ)
ಸಿದ್ಧಾಂತವನ್ನು ಅನುಸರಿಸಿ, ಅರಸನಿಗೆ ಪರಮೇಶ್ವರನಂ
ಮಾನ ಕೊಡುತ್ತೇವೆ. ಅದರಿಂದ ಪರದೇಶೀಯರಾದ ಅರ
ಕೈಕೆಳಗೆ ಸಹರಾಜನಿಷ್ಠೆಯಿಂದ ನಾವು ನಡಿಯಬಲ್ಲ
ಗಿದ್ದೇವೆ. ಆದರೆ ನಿಮಿಲಿಸ್ಟ ಜನರು "ಮನುಷ್ಯಜಾತಿಯ
ಲೆ ಅಪಾಲು ನಡಿಸುವ ಅಧಿಕಾರವು ಯಾವನಿಗೂ ಇಲ್ಲ"ಂ

ಬ ಭಯಂಕರವಾದ ವಿಯೆಟ್ನಾಮನ್ನು ಅನುಸರಿಸಿ, ರಾಜಪ್ರೋ
ಗಳಾಗಿ, ಸ್ವದೇಶದ ಅರಸನ ಕೈಯಿಂದಲೇ ದೇಹಾಂತಶಿಕ್ಷೆ
ಪಾತ್ರರಾದರು. ಇದೆಂಥಾ ಚಮತ್ಕಾರವು!

ಮುಂಬಯಿಯು ಹೆಂಗಸರೊಂದು ಸಭೆಯು ಸ್ಥಾಪಿತ
ಗಿ ಸುಮಾರು ಆರುತಿಂಗಳವಾಯಿತು. ಈ ಸಭಾಸದೆಯರು
ತಿ ರವಿವಾರದಲ್ಲಿ ಪ್ರಾರ್ಥನಾ ಮಂದಿರದಲ್ಲಿ ಕೂಡಿ, ಒಗೆಒಗೆ
ವಿಷಯಗಳನ್ನು ಕುರಿತು ನಿಬಂಧಗಳನ್ನು ಓದಿ ವಾದವಿವಾ
ಗಳನ್ನು ನಡಿಸುತ್ತಾರೆ. ಒಬ್ಬ ಸ್ತ್ರೀಯಳು "ಸುಧಾರಣಾ" ಎ
ಬ ವಿಷಯವನ್ನು ಕುರಿತು ಬರಿದ ನಿಬಂಧವು ಸುಧೋಧ
ತ್ರಿಕೆಯಲ್ಲಿ ಪ್ರಸಿದ್ಧವಾಗಿರುತ್ತದೆ. ಅದರೊಳಗೆ ಆ ಸ್ತ್ರೀಯ
ಸುವಿಚಾರಗಳನ್ನೂ ಮೇಲಾದ ತಿಳುವಳಿಕೆಯನ್ನೂ ನೋಡಿ
ಬಹುಗೆ ಆ ತಾಯಿಂದ ವಾಗುತ್ತದೆ. ಆದರೆ ಈ ಸ್ತ್ರೀ ಸಭೆಯು ಸ
ಯ ತಕ್ಕಂತೆ ನಡಿಯುವದಿಲ್ಲೆಂದು ಕೇಳ ನಮಗೆ ಬಹು ಖೆ
ವಾಗುತ್ತದೆ.

ಮುಳಗಳ್ಳಿಯು ಬೊಡ್ಡಿಯೊಳಗೆ ತೂತು ಮಾಡಿ, ಅದರ
ಗೆ ದ್ರಾಕ್ಷಬಳ್ಳಿಯ ಚೊಂಗೆಯನ್ನು ಶೇರಿಸಿದರೆ, ಆ ಬಳ್ಳಿಯು[
ರುಹಾಕದೆ] ಬಹುಬೇಗ ಜೆಳಿದು ಸುರಸವಾದ ದ್ರಾಕ್ಷಫಲ
ನ್ನು ಕೊಡುತ್ತದೆಂದು ಅಮೇರಿಕವನೊಬ್ಬ ಶೋಧಕನು ಸ್ವ
ತ ಅನುಭವದಿಂದ ಹೇಳುತ್ತಾನೆ. ನಮ್ಮದೇಶದವರು ಈ ಪ್ರ
ಅನುಭವವನ್ನು ಅವಶ್ಯವಾಗಿ ನೋಡಬೇಕೆಂದು ನಾವು ಸೂಚಿ
ಸ್ತೇವೆ.

ಈ ನಮ್ಮ ದಕ್ಷಿಣ ಮಹಾರಾಷ್ಟ್ರದೊಳಗೆ ಮೂರು, ನಾಲ್ಕು ಾಹಪಮಾರ್ಗಗಳನ್ನು ಸರಕಾರದವರು ಮೂಡತಕ್ಕವರಿಹ್ಹಾರೆ. ುಬ್ಬಳ್ಳಿಯಿಂದ ಗೋವೆಯಹತ್ತರ ಮೂರ್ಮಗಾವ ಎಂಬ ಗ್ರಾ ದ ವರೆಗೆ ಒಂದು, ಸೊಲ್ಲಾಪುರದ ಮೂಗರ್ದ ಮೇಲೆ ಅರಃಪ ೊತಗಿ ಎಂಬ ಸ್ಟೇಶನಿನಿಂದವಿಜಾಪುರ ಬಾಗಲಕೋಟೆಗಳ ೀಲಿಂದ ಗದಗಿನವರೆಗೆ ಮತ್ತೊಂದು, ಪೂಣೆಯಿಂದ ಸಾ ರೆ, ಕೊಲ್ಲಾಪುರ ಬೆಳಗಾವಿಗಳ ಮೇಲಿಂದ ಧಾರವಾಡದ ರೆಗೆ ಮೂರನೇದು, ಬಾರ್ಸಿಯಿಂದ ವಿಜಿರ್, ದೋಕಾವಿಗಳ ೀಲಿಂದ ಧಾರವಾಡಕ್ಕೆ. ಈ ನಾಲ್ಕುಗಳಲ್ಲಿ ೧ನೇ ೩ನೇ ಮಾ ರ್ಗಗಳ ಕೆಲಸವಂತು ಈ ಪೂರ್ವದಲ್ಲಿಯೇ ಆರಂಭವಾಗಿರುತ್ತ . ೩ನೇ, ೪ನೇ ಮಾರ್ಗಗಳನ್ನು ಅಳಿದು ಗೊತ್ತುಮಾಡುವುದಕ್ಕೆ ರಕಾರದವರ ಠರಾವು ಆಗಿ, ಆಕೆಲಸಕ್ಕೆ ೧೫೦೦೦ರೂಪಾಯಿಯ ಚ್ಚು ಮಂಜೂರ ಮಾಡಲ್ಪಟ್ಟಿದೆ. ಇನ್ನು ದಕ್ಷಿಣ ಮಹಾರಾಷ್ಟ್ರದ ರ ಧೈವವು ತೆರಿತೆಂದೆನ್ನಲಿಕ್ಕೆ ಅಡ್ಡಿಇಲ್ಲ.

ಮುಂಬಯಿಯಲ್ಲಿ ಪಂಢರಿನಾಥ ನೆಂಬವನೊಬ್ಬ ಹೊಲಿಯ ಜಾತಿಯ ಹರಿದಾಸ ಬಂದಿದ್ದಾನೆ. ಭಗವಂತರಾವ ಎಂಬವನೊಬ್ಬ ೃಹಸ್ಥನು ಆ ಹೊಲಿಯನ ಕೀರ್ತನವನ್ನು ತನ್ನ ಮನೆಯಲ್ಲಿ ಮಾ ಿಸಿದನಂತೆ. ಇದು ಸಂತೋಷಕರವಾದ ಸುಧಾರಣೆಯಲ್ಲವೇ!

ಪೂಣೆಯ ಹತ್ತರ ಗಣೇಶಖಿಂಡಿಯಲ್ಲಿ ನಾಮದಾರಗವರ್ನರ ೊರೆಗಳು ಇರುವ ಮನೆಗೂ ಕೌನ್ಸಿಲದವರು ಕೂಡ್ರುವ ಸಭಾ ಮಂಟಪಕ್ಕೂ ನಡುವೆ ಟೆಲಿಫೋನ (ಧ್ವನಿ ವಾಹಕ) ಯಂತ್ರ ಸ ತಂತಿಯನ್ನು ಹಚ್ಚಿ ವರ್ತಮಾನ ಕಳಿಸುವ ಕ್ರಮವು ಆರಂಭ

ಮಾಗಿದೆ.

ಈ ವರ್ಷದ ಮುಲಜೀ ಪರೀಕ್ಷೆಯು ದಕ್ಷಿಣಭಾಗದ ಎಲ್ಲಕಡೆಯಲ್ಲಿ ೧೪ನೇ ಸಾಟಂಬರಿನಲ್ಲಿ ಆರಂಭವಾಗಿ ಬ ಒಗ್ಗೆ ಮೆ. ಇನಸ್ಪೆಕ್ಟರ ನೋಟೀಸು ಇದೇ ಅಂಕದಲ್ಲಿ ಸಿದ್ಧವಾಗಿರುತ್ತದೆ. ಅದನ್ನು ಮುಲಜೀ ಉಮೇದವಾರರು ಯಿಕೊಳ್ಳತಕ್ಕದ್ದು.

ಮೆ. ಇನಸ್ಪೆಕ್ಟರ ಧೊರೆಗಳು ಈಗ ಬೆಳಗಾವಿಯಲ್ಲಿ ರುತ್ತಾರೆ.

ರಾ. ಸಾ. ರೊಡ್ಡ ಇವರು ಈ ತಿಂಗಳ ಕಡೆಯಲ್ಲಿ ವಾಡಕ್ಕೆ ಬಂದರು.

ಇಲ್ಲಿಯ ಹಾಯಸ್ಕೂಲಿನ ಹೊಸ ಹೆಡ್ಡಮಾಸ್ತರರಾದ ರಾ. ಕೇಶವ ಬಾಪೂಜೀ ಬಾಳ ಇವರು ಈ ತಿಂಗಳಿನ ೧೧ನೇ ತಾ ಖಿನಲ್ಲಿ ತಮ್ಮ ಕೆಲಸದ ಚಾರ್ಜ ತಕೊಂಡರು.

ಇಲ್ಲಿಯ ಹಾಯಸ್ಕೂಲಿನಲ್ಲಿ ಅಸಿಸ್ಟಾಂಟ ಮಾಸ್ತರ ರ್ಯ ಶಂಕರರಾವ ಅಷ್ಟಗೆ ಎಂಬವರು ವಕೀಲಿಯ ಪರೀಕ್ಷೆಯ ಪಾಸಾದದರಿಂದ ಅವರು ಸ್ವಲ್ಪಾವಸರದೊಳಗೆ ನೌಕರಿಯ ಬಿಟ್ಟು ವಕೀಲಿಯ ಕೆಲಸಕ್ಕೆ ಹೋಗತಕ್ಕವರಿದ್ದಾರೆಂದು ಕೇ ತ್ತೇವೆ.

ಟ್ರೇನಿಂಗ ಕಾಲೇಜದಲ್ಲಿ ಗಣಿತದ ಶಿಕ್ಷಕರಾದ ಸುಬರಾಯ ಯಾತಗಿರಿ ಇವರಿಗೆ ಇಂಜಿನೀಯರಿಂಗ ಕಾಲೇಜದಲ್ಲಿ ಅಭ್ಯಾಸ ಮಾಡುವದಕ್ಕೋಸ್ಕರ ಗಲಿತಿಂಗಳಿನ ರಜೆಯು ದೊರೀತು. ಇವರು ಹಿಂದೆರಡು ದಿವಸದಲ್ಲಿ ಪುಣಾಕ್ಕೆ ಹೋಗತಕ್ಕವರಿದ್ದಾರೆ. ಇವರಸ್ಥಳದಲ್ಲಿ ಹಾಯಸ್ಕೂಲಿನಲ್ಲಿ ಅಸಿಷ್ಟಾಂಟ ಮಾಸ್ತರರಾದ ಸುರಜಭಾನ ಎಂಬವರನ್ನು ನೇಮಿಸುವಬಗ್ಗೆ ಶಿಫಾರಸು ಆಗಿರುತ್ತದೆಂದು ಕೇಳುತ್ತೇವೆ.

Conquest of India by the Arians.

ಆರ್ಯಕುಲದಹಿಂದೂಜನರು ಹಿಂದುಸ್ತಾನವನ್ನು ಜಯಿಸಿಕೊಂಡದ್ದು.

ಆರಂಭದ ಇತಿಹಾಸವನ್ನು ಅರಿತುಕೊಳ್ಳುವ ಸಾಧನಗಳು—ಪುರಾತನ ಕಾಲದ ಹಿಂದೂಜನರಲ್ಲಿ ತಮ್ಮ ದೇಶದೊಳಗೆ ನಡೆಯುವ ಸಂಗತಿಗಳನ್ನು ಬರಿದು ಇಡುವ ನಡಾವಳಿಯು ಇದ್ದಿಲ್ಲ. ಆದದರಿಂದ ಮುಸಲ್ಮಾನರು ಈ ದೇಶವನ್ನು ಕೈವಶಮಾಡಿಕೊಂಡ ಕಾಲದ ವರೆಗೆ, ಅಂದರೆ ಖ್ರಿಸ್ತೀಶಕದ ಹನ್ನೇ ಶತಮಾನ ಮುಗಿಯುವ ವರೆಗೆ ಈ ದೇಶದ ಯಥಾರ್ಥವಾದ ಇತಿಹಾಸವು ಬೆಳಕಿಯುವದಿಲ್ಲ. ಅದರ ಪೂರ್ವಕಾಲದ ಇತಿಹಾಸವು, ಪುರಾಣಕಥೆಗಳು, ಮತ ಗ್ರಂಥಗಳು, ಕಾವ್ಯಗಳು, ಪರದೇಶಗಳ ಇತಿಹಾಸಕರ್ತರ ಲೇಖಗಳು, ನಾಣ್ಯಗಳ ಮೇಲಿನ ಲೇಖಗಳು, ಶಿಲಾಲಿಪಿಗಳು, ತಾಮ್ರಪತ್ರಗಳು, ಇತ್ಯಾದಿ ಸಾಧನಗಳಿಂದ ಅಲ್ಪಸ್ವಲ್ಪವಾಗಿ ಮಾತ್ರ ತಿಳಿದದೆ.

ಹಿಂದೂಜನರಿಂದ ಬಹು ಪೂರ್ವಾರ್ಹವೆಂದು ಎಣಿಸ

ಲ್ಲಿಡುವ ಗ್ರಂಥಗಳು ಯಾವವೆಂದರೆ, ವೇದಗಳು. ಈ ಗ್ರಂಥಗಳು ಸಂಸ್ಕೃತಭಾಷೆಯಲ್ಲಿ ಬರಿಯಲ್ಪಟ್ಟಿವೆ. ಈ ಭಾಷೆಯನ್ನು ಹಿಂದಾನೊಂದು ಕಾಲದಲ್ಲಿ ಯಾವತ್ತೂ ಉತ್ತರಹಿಂದುಸ್ತಾನದ ಜನರು ಆಡುತಿದ್ದರು. ವೇದಗಳು ಸುಮಾರು ೩೫೦೦ ವರ್ಷಗಳ ಪೂರ್ವದಲ್ಲಿ ಬರಿಯಲ್ಪಟ್ಟವೆಂದು ಬುದ್ಧಿವಂತರು ತರ್ಕಿಸುತ್ತಾರೆ. ವೇದಗಳಲ್ಲಿ ಸಹ ಪರಮೇಶ್ವರನ ಸ್ತೋತ್ರಗಳು (ಸೂಕ್ತಗಳು) ಅತಿ ಪುರಾತನಕಾಲದ ಲೇಖನಗಳುಗಿವು. ಇವುಗಳಿಂದ [ಬೇರೆ ಸಾಧನಗಳ ಸಹಾಯದಿಂದ] ಆ ಕಾಲದ ಹಿಂದೂ ಜನರ ಸ್ಥಿತಿ ರೀತಿಗಳು ಕೆಲಕೆಲವು ತಿಳಿಯುತ್ತವೆ.

ಆರಂಭಕಾಲದ ಹಿಂದೂಜನರು — ಈಗ ಹಿಂದೂಜನರೆಂದೆನಿಸಿ ಕೊಳ್ಳುವವರ ಪೂರ್ವಜರು ಅತಿ ಪ್ರಾಚೀನ ಕಾಲದಲ್ಲಿ ಹಿಂದುಸ್ತಾನದೊಳಗೆ ಇರುತ್ತಿದ್ದಿಲ್ಲವೆಂದು ತೋರುತ್ತದೆ, ಅವರು ಖಚಿಯಾಖಂಡದ ಮಧ್ಯಭಾಗದಲ್ಲಿ ಉತ್ತರವಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಆ ಕಾಲದಲ್ಲಿ ಅವರಿಗೆ ಆರ್ಯರೆಂಬ ಹೆಸರಿತ್ತು. ಮುಂದೆ ಯುರೋಪಿಖಂಡಕ್ಕೂ, ಇರಾಣ (ಆರ್ಯನ) ದೇಶಕ್ಕೂ ಹಿಂದುಸ್ತಾನಕ್ಕೂ ವಾಸಿಸಲಿಕ್ಕೆ ಹೋದ ಪಂಥ ಜನಾಂಗಗಳ ಪೂರ್ವಜರು ಈ ಆರ್ಯಜನರೇ.

ಈ ಪ್ರಕಾರ ಈಗ ಹಿಂದೂ ಜನರೆಂಬೆಸಿಕೊಳ್ಳುವ ಆರ್ಯರು ತಮ್ಮ ಮೂಲನಿವಾಸಸ್ಥಾನವಾದ ಮಧ್ಯಖಿಶಿಯದ ಪ್ರದೇಶವನ್ನು ತೊರೆದು, ಹಿಂದುಕೂಶವೆಂಬ ಉನ್ನತವಾದ ಪರ್ವತಾವಳಿಯನ್ನು ದಾಟಿ, ಮೊಟ್ಟಮೊದಲು ಪಂಜಾಬ ದೇಶಕ್ಕೆ ಬಂದರು. ಆ ಕಾಲಕ್ಕೆ ಪಂಜಾಬ ದೇಶದಲ್ಲಿ ಈಗ ಹರಿಯುವ ಐದು ಹೊಳೆಗಳಲ್ಲದೆ, ಸರಸ್ವತಿಯೆಂಬ ಇನ್ನೊಂದು ಹೊಳೆಯು ಹರಿಯುತ್ತಿತ್ತು.

ಭವು ಈಗ ಸಿಂಧೂನದಿಯವರೆಗೆ ಹರಿದು ಹೋಗುವಲ್ಲಿ; ನಮ್ಮ ವೇ ಉಸುಬಿನಬೈಲಿನೊಳಗೆ ಗುಪ್ತವಾಗುತ್ತದೆ. ಈ ಸರಸ್ವತಿಯ ತೀರದಲ್ಲಿಯೂ ಪಂಜಾಬದ ಬೇರೆ ಹೊಳೆಗಳ ತೀರಗಳಲ್ಲಿಯೂ ಆ ಆರ್ಯಕುಲದ ಹಿಂದೂಜನರು ಹಲವ್ರಶತಮಾನಗಳ ವರೆಗೆ ವಾಸಿಸಿದರು. ತಾವಿರುವ ಪ್ರದೇಶಕ್ಕೆ ಅವರು ಬ್ರಹ್ಮಾವರ್ತವೆಂಬ ಹೆಸರಿಟ್ಟಿರು. ಆ ಬ್ರಹ್ಮಾವರ್ತದಲ್ಲಿ ವಾಸಿಸುತ್ತಿರುವಾಗ ಅವರು ಪರಮೇಶ್ವರನನ್ನು ಸ್ತುತಿಸುವಂಥ ಸೂಕ್ತಗಳನ್ನು ರಚಿಸಿದರು. ಆ ಕಾಲಕ್ಕೆ ಮನೆತನಗಳ ಹಿರಿಯರೇ ತಮ್ಮ ತಮ್ಮ ಮನೆತನಗಳಲ್ಲಿ ಅರಸರಂತೆ ಅಧಿಕಾರನಡಿಸುವರೆಂದು ತೋರುತ್ತದೆ.

ಆಗಿನ ಮನೆತನಗಳಿಗೆ ಈಗ ನಾವು ಗೋತ್ರಗಳೆಂದೆನ್ನುತ್ತೇವೆ ಒಂದು ಗೋತ್ರದ ಹಿರಿಯನು ತನ್ನ ಗೋತ್ರದವರಲ್ಲಿ ಹಿರಿತನವನ್ನು ನಡಿಸುತ್ತಿದ್ದಲ್ಲದೆ, ಅವರ ಕುಲಗುರುವೆಂದು ಸಹ ಹೇಳಲ್ಪಡುವನು. ಈ ಆರ್ಯಕುಲದ ಹಿಂದೂಜನರು ಹೊತ್ತು ಬಂದಾಗ ತಮ್ಮ ನೆರೆಹೊರೆಯ ಮೂಲ ನಿವಾಸಿಗಳ ಸಂಗಡ ಜಗಳಕ್ಕೆ ಹೋಗುವರು. ಈ ಮೂಲನಿವಾಸಿಗಳಿಗೆ ಅವರು ದಸ್ಯುಗಳೆಂದೆನ್ನುವರು. ಈ ದಸ್ಯುಗಳು ಆರ್ಯರಿಗಿಂತ ಕಪ್ಪು ವರ್ಣದವರಿದ್ದರು. ಆರ್ಯರು ದಸ್ಯುಗಳಿಗಿಂತ ಶೂರರು, ಅವರ ಆಯುಧಗಳಾದರೂ ಶ್ರೇಷ್ಠ; ಇದಲ್ಲದೆ ಅವರು ಕಬ್ಬಿಣದಿಂದಾಗಲಿ ಕಂಚಿನಿಂದಾಗಲಿ ಸಣ್ಣಉಂಗುರುಗಳನ್ನು ಮಾಡಿ, ಆ ಉಂಗುರುಗಳಿಂದ ಬಲವಾದ ಕವಚಗಳನ್ನು ಹೆಣೆದು ಮೈಯೊಳಗೆ ಧರಿಸುವರು. ಅದರಿಂದ ಅವರು ಯುದ್ಧದಲ್ಲಿ ಮೂಲನಿವಾಸಿಗಳನ್ನು ಬಹುತರವಾಗಿ ಗೆಲ್ಲುವರು. ಆ ಮೂಲನಿವಾಸಿಗಳು ಇವರಿಗಿಂತ ಪ್ರಬಲರಾದ ಹಗೆಗಳನ್ನೆರೆಯನ್ನು ಬಿಟ್ಟು ಅಡವಿಗಳಲ್ಲಿಯೂ

ಗುಡ್ಡಗಳಲ್ಲಿಯೂ ಹೋಗಿ ವಾಸಿಸುವರು. ಅವರ ವಂಶಜರು ಈಗ್ಯೂ ಗುಡ್ಡಗಾಡುಗಳಲ್ಲಿಯೇ ವಾಸಿಸುತ್ತಾರೆ. ಆದರೆ ಈ ವೈರಾಜಕ ಕಾಲದಲ್ಲಿ ಆರ್ಯರು ಬಹು ಫಲಭರಿತವಾದ ಪಂಜಾಬ ದೇಶದಲ್ಲಿ ವಾಡಿಕೆಯಾಗಿ ಶಾಂತವೃತ್ತಿಯಿಂದ ವಾಸಿಸಿದರು. ಆ ಕಾಲದಲ್ಲಿ ದನ ಕರುಗಳನ್ನು ಕಟ್ಟಿಕೊಂಡು ಅವುಗಳನ್ನು ಸಲಹುವದೇ ಅವರಮುಖ್ಯ ಉದ್ಯೋಗವಾಗಿತ್ತು; ಆದರೂ ಕೆಲವರು ಕಾಡುತರದ ಒಕ್ಕಲತನವನ್ನು ನಡಿಸುವರು.

ಶೌರ್ಯಕಾಲದ ಹಿಂದೂಜನರು — ಮೇಲೆ ಹೇಳಿದಂತೆ ಆರ್ಯಕುಲದ ಹಿಂದೂಜನರು ಪಂಜಾಬ ದೇಶದಲ್ಲಿ ಹಲಕಾಲ ವಾಸಿಸುತ್ತಿರಲಾಗಿ, ಅವರ ಜನಸಂಖ್ಯೆಯೂ ಸಂಪತ್ತಿಯೂ ತಕ್ಕ ಮಟ್ಟಿಗೆ ಬೆಳೆದವು. ಅದರಿಂದ ಪಂಜಾಬಕಿಂತಲೂ ಹೆಚ್ಚು ಸುಭಿಕ್ಷವಾದಂಥ ಭಾಗಿರಥೀ ತೀರವನ್ನು ಅದರ ನೆರೆಹೊರೆಯ ಪ್ರದೇಶಗಳನ್ನೂ ಆಕ್ರಮಿಸಲಿಕ್ಕೆ ಅವರು ಮುಂದೆ ಹವಣಿಸಿದರು.

(ಟಿಪ್ಪಣಿ — ಈ ಅತಿ ವಿಸ್ತಾರವಾದ ಬೈಲನೊಳಗೆ ಈಗ ವಾಯವ್ಯ ಇಲಾಖೆ, ಅಯೊಧ್ಯಾಪ್ರಾಂತ, ಬಂಗಾಲ, ಬಿಹಾರ, ರಜಪುತಸ್ಥಾನ, ಮುಂತಾದ ವಿಭಾಗಗಳು ಮೂಡಲ್ಪಟ್ಟಿವೆ, ಎಂದು ಹಿಂದಿನ ಭಾಗದಲ್ಲಿ ಹೇಳಿಧೇವೆ. ಆದರೆ ಆ ಕಾಲದ ಹಿಂದೂ ಜನರು ಸರಸ್ವತಿಗೂ ಭಾಗಿರಥಿಗೂ ನಡುವೆ ಇರುವ ಪ್ರದೇಶಕ್ಕೆ ಬ್ರಹ್ಮರ್ಷಿ ದೇಶವೆಂಬ ಹೆಸರಿಟ್ಟಿರು. ಆದರ ಪೂರ್ವಕ್ಕಿರುವ ಭಾಗಕ್ಕೆ ಮಧ್ಯದೇಶವೆಂದೆನ್ನುವರು. ಕಡೆಯುಲ್ಲಿಯಾವತ್ತು ಉತ್ತರ ಹಿಂದುಸ್ತಾನಕ್ಕೆ ಆರ್ಯಾವರ್ತವೆಂಬ ಹೆಸರು ಬಂತು.)

ಆರ್ಯಾವರ್ತದೇಶವನ್ನೆಲ್ಲ ಆಕ್ರಮಿಸಲಿಕ್ಕೆ ಆರ್ಯಜನರಿಗೆ ನೂರಾರು ವರ್ಷಗಳು ಹಿಡಿದಿರ ಬಹುದು.

ಕಾಲವನ್ನು ಶೌರ್ಯಕಾಲವೆಂದು ಹೇಳಲ್ಪಡುತ್ತದೆ. ಯಾವ
ಂದರೆ ಸಾಮಾಜಿಂತರಾದ ಕಲಿಗಳು ಈ ಕಾಲದಲ್ಲಿ ಎಡೆಬಿ
ಡೆ ಮೂಲನಿವಾಸಿಗಳ ಸಂಗಡ ಕದನಕ್ಕೆ ಸಿದ್ಧರಾಗಿ, ಕ್ರಮ ಕ್ರಮ
ವಾಗಿ ಅವರನ್ನು ತಮ್ಮ ಶರಣಾಳುಗಳನ್ನು ಮಾಡಿಕೊಂಡರು,
ಥವಾ ಕೆಟ್ಟಿ ಬನಗಳಿಗೆ ಓಡಿಸಿದರು. ಈಗಿನ ಸಂತಾಲರು,
ಲ್ಲರು ಮುಂತಾದವರು ಆ ಮೂಲನಿವಾಸಿಗಳ ವಂಶದವರೆಂ
ನು ಹೇಳ ಬಹುದು.

ಈ ಯುದ್ಧಗಳಲ್ಲಿ ಜಯ ಹೊಂದಿದಂಥ ಶೂರರು ಬರ
ುತ್ತ ತಮ್ಮ ಸಾಮರ್ಥ್ಯವೂ ಧಂಡಾಳುಗಳೂ ಬೆಳೆದ ಹಾಗೆ
ಸಾಮ್ರಾಜ್ಯ ವಿಸ್ತಾರವನ್ನು ಧರಿಸಿದರು. ಇವರು ಹಗಲಿರುಳು
ಕದನಗಳ ಕೂಡ ಹೋರಾಟದಲ್ಲಿ ತೊಡಗಿದ ಕಾರಣ, ಮೊದಲಿನ
ನಿತ್ಪರಾಜಕ ಕಾಲದಂತೆ ಕುಲಗುರುವಿನ ಕೆಲಸ ನಡಿಸಲಿಕ್ಕೆ ಅ
ವರಿಗೆ ಅವಕಾಶ ಉಳಿಯಲಿಲ್ಲ. ಅದರಿಂದ ಬರಬರುತ ಬ್ರಾ
ಹ್ಮಣರೆಂಬ ಧರ್ಮೋಪದೇಶಕರ ಜಾತಿಯುಂಟಾಯಿತು. ಈ
ಬ್ರಾಹ್ಮಣರು ಮುಂದೆ ಕಾಲಗತಿಯಿಂದ ಜನರೊಳಗೆ ಅರಸರಿ
ಗಿಂತಲೂ ಹೆಚ್ಚು ಶ್ರೇಷ್ಠತ್ವವನ್ನು ಪಡೆದರು. ಹೀಗಾಗಿ ಕಡೆ
ಯಲ್ಲಿ ಆರ್ಯಕುಲದ ಹಿಂದೂಜನರೊಳಗೆ ಎರಡು ಶ್ರೇಷ್ಠ ಜಾ
ತಿಗಳುಂಟಾದವು. ಮೊದಲನೇ ಬ್ರಾಹ್ಮಣ ಜಾತಿಯ ಜನರು ಕೇ
ವಲ ದೇವಾರಾಧಕರೆಂದು ಆಗಿನ ಮೂಢಜನರು ಎಣಿಸಿ, ಅವರಿಗೆ
ಎಲ್ಲಕ್ಕೂ ಹೆಚ್ಚು ಮಾನಕೊಡುವರು. ಎರಡನೇ ಜಾತಿ ಕ್ಷತ್ರಿಯ
ರದು. ಅರಸರೂ ದಳವಾಯಿಗಳೂ ಈ ಜಾತಿಯೊಳಗೆ ಎಣಿ
ಸಲ್ಪಡುವರು. ಈ ಶೌರ್ಯಕಾಲದ ಕಥೆಗಳನ್ನೆಲ್ಲೋ ಈಗ
ಕೇಳಬಹುದು. ರಾಮಾಯಣ, ಮಹಾಭಾರತ, ಎಂಬೆರಡು
ಪ್ರಾಚೀನ ಕವಿತಾ ಗ್ರಂಥಗಳಲ್ಲಿ ಈ ಕಥೆಗಳು ಬಹುಮಸ್ತಾರ

ಪಾಗಿ ಬರಿಯಲ್ಪಟ್ಟಿವೆ. ಈ ಗ್ರಂಥಗಳಿಂದ ತಿಳಿಯುವದೇನ
ದರೆ, ಶೌರ್ಯಕಾಲದ ಹಿಂದೂಜನರ ಸ್ಥಿತಿರೀತಿಗಳು ಕಾಡು
ಸ್ಥಿತಿಯೊಳಗಿನ ಕಲಿಗಳಂತೆ ಇದ್ದವು. ರಾಜರೂ, ರಾಜಕುಮಾರ
ರೂ ಸಹ ದನಗಳನ್ನು ಕಾಯುವರು, ಮತ್ತು ಅಡವಿಯನ್ನು
ಸುಟ್ಟು, ಒಕ್ಕಲತನದ ಸಲುವಾಗಿ ಭೂಮಿಯನ್ನು ಹೊಡಿಯು
ವರು. ಅವರು ತಮ್ಮ ದನಕರುಗಳಿಗೆ ನಿಯಮಿತ ಕಾಲಗಳಲ್ಲಿ ಗ
ರ್ತುಗಳನ್ನು ಮಾಡಿ, ಒಕ್ಕಲತನದವರ ಆಚರಣೆಗಳನ್ನು ತಪ್ಪ
ದೆ ಮಾಡುವರು. ಒಂದೊಂದು ತಂಡದ ಜನರೆಲ್ಲರು (ಬಡವರು
ಗಲಿ ಶ್ರೀಮಂತರಾಗಲಿ) ಒತ್ತಟ್ಟಿಗೆ ಕಲತುಕೊಂಡು ತಮ್ಮತಮ್ಮ
ದನಗಳೂ ಹೊಲಗಳೂ ಹಗೆಗಳಿಗಾಗಲಿ ಕಳ್ಳರಿಗಾಗ
ಲಿ ಪೊರಿಯದಂತೆ ಅವುಗಳನ್ನು ಸಂರಕ್ಷಿಸಿ ಕೊಳ್ಳುವ ಉ
ಪಾಯಗಳನ್ನು ಕಲಿಯುವರು. ಈ ಕಾರಣದಿಂದ ಅವರೆಲ್ಲ
ರು ಮೆಲಯುದ್ಧ, ಕುಸ್ತಿ, ಬಿಲ್ಲಾಳುತನ, ಕ್ಷಿಪಣಾಸ್ತ್ರಕಲ್ಲಿನ
ಕದನ, ಉರ್ಲುಹಾಕುವ ವಿದ್ಯೆ, ಬಗೆಬಗೆಯ ಆಯುಧಗ
ಳ ಪ್ರಯೋಗ, ಮುಂತಾದ ವಿದ್ಯೆಗಳಲ್ಲಿ ಪ್ರವೀಣರಾದರು.
ಯುರೋಪಖಂಡದಲ್ಲಿ ಹೋಗಿ ನಿಂತಂಥ ಆರ್ಯಜನರು ಈ
ಗ ಮದ್ಯಮಾಂಸಗಳನ್ನು ತಕ್ಕೊಳ್ಳುವಂತೆ ಹಿಂದುಸ್ತಾನಕ್ಕೆ ಬಂ
ದ ಆರ್ಯಜನರಾದರೂ ಕಾರ್ಯಪ್ರಯೋಜನಗಳಲ್ಲಿ ಮದ್ಯ
ಮಾಂಸಗಳನ್ನು ಸೇವಿಸುವರು. ಆದರೂ ಅವರ ನಿತ್ಯದ ಆಹಾ
ರವು ಬಹು ಸಾಧಾರಣವಾದ ಧಾನ್ಯಾಹಾರ ವಿರುವದು. ಈ
ಶೌರ್ಯಕಾಲದಲ್ಲಿ ಆರ್ಯರಿಗೂ ಕಪ್ಪುಬಣ್ಣದ ಮೂಲ
ನಿವಾಸಿಗಳಿಗೂ ಎಡೆ ಬಿಡದೆ ಕದನಗಳು ನಡೆಯುವವು. ಈ ಮೂ
ಲನಿವಾಸಿಗಳಿಗೆ ದೈತ್ಯರು, ಅಸುರರು, ರಾಕ್ಷಸರು, ನಾಗರು,
ಎಂಬ ಹೆಸರುಗಳನ್ನು ಆಗಿನ ಆರ್ಯರು ಕೊಡುವರು.

ಮುಂದೆ ಕಾಲಗತಿಯಿಂದ ಈ ಆರ್ಯಕುಲದ ಹಿಂದೂ ಜನರು ಹಿಳತಾಗಿ ನಾಗರಿಕತ್ವವುಳ್ಳವರಾಗಿ, ತಮ್ಮ ಸಂಪತ್ತಿಯು ಬೆಳಿದಹಾಗೆ ಸುಖೋಪಭೋಗಕ್ಕೆ ಮೆಚ್ಚಿಕೊಂಡರು. ಆರ್ಯಕಾಲದ ಕಡೆಯಭಾಗದಲ್ಲಿ ಉತ್ತರಹಿಂದುಸ್ತಾನವೆಂದಿರೆ ಆರ್ಯಾವರ್ತವೆಲ್ಲ ಈ ಜಯಶಾಲಿಗಳ ಕೈ ಶೇರಿದ ಬಳಿಕ ಇವರ ರಾಜ್ಯದೊಳಗೆ ಉಳಿದಂಥ ಮೂಲ ನಿವಾಸಿಗಳು ಇವರ ಗುಲಾಮರೆಯಾಳುಗಳು (ಗುಲಾಮರು)ಆದರು, ಅರಮನೆಗಳಲ್ಲಿ ಸುಖ ಸಂಪತ್ತುಗಳು ಬೆಳಿದವು, ಜಮೀದಾರರು ಬಲಾಢ್ಯರಾದರು, ಮತ್ತೂ ವರ್ತಕರು ಶಿಲ್ಪಿಗರೂ ತಮ್ಮತಮ್ಮ ಉದ್ಯೋಗಗಳಲ್ಲಿ ಬಹಳ ಹಣಗಳಿಸಿ ವೈಶ್ಯರೆಂಬ ಹೆಸರಿನಿಂದಪ್ರಬಲರಾದರು. ಬ್ರಾಹ್ಮಣಕ್ಷತ್ರಿಯ, ಇವೆರಡು ಜಾತಿಗಳ ಕೆಳಗೆ ಈ ವೈಶ್ಯರ ಜಾತಿಯು ಮೂರನೇದೆಂದು ಎಣಿಸಲ್ಪಡುವದು. ಆದರೂ ಈ ಮೂರು ಜಾತಿಗಳಿಗೆ ದ್ವಿಜತ್ವವು, ಅಂದರೆ ಉಪನಯನ ಮಾಡಿಕೊಳ್ಳುವ ಅಧಿಕಾರವು ಉಂಟು.

—o—

Notices:
ನೋಟೀಸು.

ಕೊಲ್ಲಾಪುರ, ಬೆಳಗಾವಿ, ಧಾರವಾಡ, ಕಲಾದಗಿ, ಕಾರವಾಡ, ಈ ಐದೂಸ್ಥಳಗಳಲ್ಲಿ, ಕಡಿಮೆ ಪ್ರತಿಯು ಸರಕಾರೀ ಶಾಲೆಕರಿಯು ಸರಟೀಫಿಕೇಟಿನ ಪರೀಕ್ಷೆಯು (ಮುಲಜೀ ಪರೀಕ್ಷೆಯು) ಮುಂಡಿನ ಸಪ್ಟಂಬರ ತಿಂಗಳಿನ ೧೯ನೇ ತಾರೀಖಲ್ಲಿ ಆರಂಭವಾಗುವದು. ಮುಂಬಯಿ ಸರಕಾರೀ ಗ್ಯಾಜೆಟ್ಟಿನಲ್ಲಿ ಕಳಿದ ಎಪ್ರೀಲತಿಂಗಳಿನ ೨೧ನೇ ತಾರೀಖಿನ ಅಂಕದಲ್ಲಿ

ನೇ ಪುಟದಲ್ಲಿ ಧಾಖಲಿಸಿದ ವಿಷಯಗಳಲ್ಲಿ ಪರೀಕ್ಷೆಯಾಗುವದು.
ಮು. ಬೆಳಗಾವಿ. ತಾ. ಖಾನಾಪೂರ ಸನ್ ೧೮೮೮.

W. A. Russell.
ಇ. ಇನ್‌ಸ್ಪೆಕ್ಟರ ದಕ್ಷಿಣಭಾಗ.

—೦—

ಜಿ. ನಂಬರು. ೭೮೦

ಅಜಂ ಧಾರವಾಡಜಿಲ್ಲೆಯ ಸ್ಕೂಲಮಾಸ್ತರರರಿಗೆ ಸನ್ ೧೮೮೮.
೮೨ ಇಸವಿ ಪರ್ಯಂತಾ ಕೆಳಗೆ ಬರೆದ ಸಾಲಿಗಳಿಗೆ ಆಧಾರವೇ ಪ
ದವೇ ಯೆತ್ತೆಗಳಷ್ಟನಕ ಕಲಿಸೋದಕ್ಕೆ ಪರವಾನಗಿ ಕೊಟ್ಟಿರುತ್ತದೆ.

ಆರವೇ ಯೆತ್ತೆಗಳಷ್ಟನಕ ಕಲಿಸುವ ಸಾಲಿಗಳ ಹೆಸರು.

ತಾ. ಗದಗ.

೧ ಧಾರವಾಡ ಮುರಾಲಿಸಾಲಿ
೨ ಸದರ ಕನ್ನಡ ನಂಬರು.೧
೩ ಸದರ ಕನ್ನಡ ನಂಬರು ೨
೪ ಉಪ್ಪಿವಬೇಟಗೇರಿ
೫ ಗರಗ
೬ ಹೆಬ್ಬಳ್ಳಿ.

ತಾ. ನವಲಗುಂದ.

೧ ನವಲಗುಂದ ಸೇಕಂಡ ಗ್ರೇಡ.
೨ ನರಗುಂದ ಮುರಾಲೀ.
೩ ನರಗುಂದ ಸೇಕಂಡಗ್ರೇಡ
೪ ಅರಣಗೇರಿ.
೫ ಮುಳಗುಂದ ಸೇಕಂಡಗ್ರೇಡ

ತಾ. ಹುಬ್ಬಳ್ಳಿ.

೧ ಹುಬ್ಬಳ್ಳಿ ಕನಂಕಡ ನಂಬರು
೨ ಡೋಣಕೊಪ್ಪ

ತಾ. ಕಲಘಟಗಿ.

೧ ಕಲಘಟಗೀ
೨ ಮಿಶ್ರೀಕೋಟಿ.

ತಾ. ಬಂಕಾಪೂರ.

೧ ಶಿಗ್ಗಾಂವ ಸೇಕಂಡಗ್ರೇಡ.
೨ ತಡಸ.
೩ ಬಂಕಾಪೂರ ಸೇಕಂಡಗ್ರೇಡ
೪ ಇಂಗಳಗಿ ಸೇಕಂಡಗ್ರೇಡ

ಸಾರಬ.
ಲ್ಲಪಡೀ.
ಹೋಗಾನೂರ
ತಾ. ರೋಣ
ೋಣ ಸೇಕಂಡಗ್ರೇಡ.
ಸರಗಲ್ಲ.
ತಾ. ಗದಗ
ಗದಗ ಸೇಕಂಡಗ್ರೇಡ.
ಬೇಟಗೇರಿ.
ಮುಂಡರಗೀ ಸೇ. ಗ್ರೆ.
ತಾ. ಹಾನಗಲ್ಲ.
ಹಾನಗಲ್ಲ ಸೇ. ಗ್ರೇ.
ಆಲೂರ.
ತಿಳವಳ್ಳಿ.

೫ ಕಳಸ.
೬ ಬಂಕಾಪೂರ ಹಿಂದುಸ್ತಾನಿ.
೭ ಘುಂಡಸೀ ಸೇಕಂಡಗ್ರೇಡ.
ತಾ. ಕರ್ಜಗೀ.
೧ ಹಾಂಬೇರಿ ಸೇಕಂಡಗ್ರೆಡ.
೨ ಕರ್ಜಗೀ ಸೇಕಂಡಗ್ರೇಡ.
೩ ಗುತ್ತಲ.
೪ ನೆಗಳೂರ.
ತಾ. ರಾಣೇಬಿನ್ನೂರ.
೧ ರಾಣೇಬಿನ್ನೂರ ಸ್ರೇ. ಗ್ರೇ.
೨ ಹೊಸೇಟಿಬಿನ್ನೂರ.
೩ ಬ್ಯಾಡಗೀ.
೪ ತುಮ್ಮಿನಕಟ್ಟಿ.
ತಾ. ಕೊಡ.
೧ ಹಿರೇಕೆರೂರ.

ಐಹನೇ ಯೆತ್ತೆಗಳತನಕ ಕಲಸುವ ಸಾಲಿಗಳ ಹೆಸರು.

ತಾ. ಧಾರವಾಡ.
ೋಟೂರ.
ತಡಕೋಡ.
ಅಮಿನಭಾಂವಿ.
ರೇಂದ್ರ
ನವಲೂರೂ.
ತಾ. ನವಲಗುಂದ.

ತಾ. ಗದಗ
೬ ಕುರ್ತಕೋಟಿ.
ತಾ. ಹುಬ್ಬಳ್ಳಿ.
೧ ಹುಬ್ಬಳ್ಳಿ ಕಂನಡ ನಂಬರ.೨
೨ ಹೆಬಸೂರ.
೩ ಅರಳಿಕಟ್ಟಿ.
೪ ಅಂಗಳಹಳ್ಳಿ.

೧ ಕೊಂಣೂರು.
೨ ಶಿರೋಳ.
೩ ತಿಲ್ಲಾಪೂರ.

ತಾ. ರೋಣ.

೧ ಅಬ್ಬಿಗೇರಿ.
೨ ಮೂಳವಾಡ.
೩ ಬೆಳವಣಕಿ.
೪ ಸವಡಿ.
೫ ಆಲೂರ.

ತಾ. ಗದಗ.

೧ ಅಂತೂರ ಬೆಂತೂರ.
೨ ಡಂಬಳ.
೩ ಲಕ್ಕುಂಡಿ.
೪ ಆಲೂರ.
೫ ಹಳ್ಳಿಕೇರಿ.

ತಾ. ಕಲಘಟಗಿ.

೧ ಬೊಂಬಿಗಟ್ಟಿ.

ತಾ. ಬಂಕಾಪೂರ.

೧ ಹುಲಗೂರು.
೨ ಅತ್ತಿಗೇರಿ.
೩ ಮುತ್ತಿಗಟ್ಟಿ.
೪ ಹಿರೇಹರಕುಣಿ.
೫ ಹಿರೇಬೆಂಡಿಗೇರಿ.

ತಾ. ಕಡ್ಲಿಗಿ.

೧ ಶೇವಗೇರಿ.
೨ ಅಗಡಿ.
೩ ಹೇವಿಹೊಸೂರ.

ತಾ. ಹಾನಗಲ್ಲ.

೧ ಬೊಮ್ಮನಹಳ್ಳಿ.

ತಾ. ಕೋಡ.

೧ ಚಿಕ್ಕೇರೂರ. ೨ ಮುಸಣಗಿ ೩ ನಾಗವಂದ.

ತಿಳಿಯುವದು ತಾ. ೩೦ನೇ ಜೂನ ೧೮೮೧ ಇ.

S. K. Rodd

ಡಿ. ಇ. ಇ. ಜಿಲ್ಹಾ ಧಾರವಾಡ

ಸರಕ್ಯೂಲರ ನಂಬರು.೩೬೨

ಅಜಂ ಕಾನಡಾ ಜಿಲ್ಲೇದ ಯಾವತ್ತು ಸ್ಕೂಲ ಮಾಸ್ತರರಿಗೆ.
ಪಬ್ಲಿಕ ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಕಾನಡಾ ಇವರ

ಂದ ತಿಳಿಯಪಡಿಸುವೆನಂದರೆ—— ಯಲ್ಲಾಪುರ ತಾಲೂಕಿ
ಯ ಹಳ್ಳಿಸ್ಕೂಲ ಮಾಸ್ತರರ ಪೈಕಿ ಹಿಬ್ಬನು ತನ್ನ ಶಾಲೆ
ಲ್ಲಿ ಹುಡುಗರ ಸಂಖ್ಯೆ ಹೆಚ್ಚು ತೋರಿಸ ಬೇಕೆಂಬ ಆರಾಧೆ
ಂದ ಮೂರು ಸಾಲು ತಿಂಗಳವರೆಗೂ ಬಾರದೇ ಇದ್ದಹುಡ
ಿ ರಜಿಷ್ಟರದಲ್ಲಿ ಅವರಹೆಸರಿನ ಮುಂದೆ 'ರ' 'ರ' ಎಂ
ಬರೆದು ಸುಳ್ಳು ರಜಿಷ್ಟರ ಮಾಡಿರುವದರಿಂದ ಸದರಿ ಮಾಸ್ತ
ಿ ತಿರುಪಾಯಿ ಪಗಾರು ಕಡಿಮೆ ಮಾಡಿ ಅಶಿಷ್ಟಾಂಟಿಕೆಲಸಕ್ಕೆ ಪ
ಮಾಡಿರುತ್ತದೆ. ಈ ಸಂಗತಿಯನ್ನು ಎಲ್ಲಾ ಮಾಸ್ತರರು ಧ್ಯಾ
ಲ್ಲಿಟ್ಟು ಇಂಥಾ ತಪ್ಪನ್ನು ಮಾಡದಹಾಗೆ ಜಾಗ್ರತೆಇಡಬೇಕು.

ತಿಲ್ಲಿಲಿಗ ಮೊ { K. M. Raghavendrarao.
ಸ್ಕಾರವಾ. { ಅಗ. ವಿ. ಎ. ಇನಸ್ಪೆಕ್ಟರ ಕಾ.

Correspondence.

ಪತ್ರವ್ಯವಹಾರವು.

ರಾಮಸಾಹೇಬ ಕನ್ನಡ ಶಾಲಾಪತ್ರಿಕೇ ಯಾಪಟರಿಗೆ.

ವಿ. ರಾಮಸಾಹೇಬ ಯಿ. ಎ. ಇ. ಜಿಲ್ಲಾ ಧಾರವಾಡ
ರ ಜಾವಕ ನಂಬರು ೨೦೦೬ ಹುಕುಂ ಪ್ರಕಾರ ಕೆಳಗೆ ಬರ
ಕೊಳ್ಳುವ ಸಂಗ್ತಿ ಶಾಲಾಪತ್ರಿಕೆಯಲ್ಲಿ ಮುದ್ರಿಸುವ ಬಗ್ಗೆ
ಹಂಸಿಸ್ಟೇನೆ ದಯವಾಯಿ ಸ್ಥಳ ಕೊಡಿಯಬೇಕು.

ಇಲ್ಲಿಯ ಸೇಕಂಡ ಗ್ರೇಡ ಅಂಗ್ಲೋ ವ್ಹ. ನಾಲಿಯ ಗೆರ್ಲ
ಲಿನ ಮತ್ತು ಬ್ರಾಂಚಸಾಲಯ ವಾರಷೀಕ ಪರಿಕ್ಷೆಯು ಸ
ಜಕೂರ ಸೇಬ್ರುವರಿ ತಿಂಗಳದ ತಾ. ೭।೮।೯ ಈ ಮುರ ದಿ
ಮೇಹಬರ್ಖಾನ ಬಾಬಾಚಾರ್ಯ ಅಶಿಷ್ಟಾಂಟ ಪೆಷ್ಟರ ಇ
ಂದ ಪೂರ್ಣವಾಯಿತು ನಂತರ ಶಾಲೆಯಲ್ಲಿ ಸಭೆಕುಡಿಸಿ

ಬಗ್ಗೆ ಗ್ರಾಮಸ್ಥರಿಗೆ ಸೂಚಿಸಿದ ಪ್ರಕಾರ ತಾ. ೧೧ನೇ ದಿವ
ಊರ ದೊಡ್ಡದೊಡ್ಡ ಸಾಹುಕಾರಶಟ್ಟಿ ಮುಂತಾದವರು ಕೂಡಿ
ಕ ಸಹರೀ ಅಶಿಸ್ಟಾಂಟ ದಿಪೂಟಿಯವರು ಬಂದುಸಾಲಿಗ
ರಟೀಕ ಪರೀಕ್ಷೆ ಪರಿಣಾಮವನ್ನು ಸ್ವಲ್ಪದರಲ್ಲಿ ತಿಳಸಿದ
ಷ್ಟು ಇಂಗ್ಲಿಷ ವರ್ಗಗಳ ಅಬ್ಯಾಸ ಸ್ವಲ್ಪದಿವಸದಲ್ಲಿ ಬಹಳ
ಗಿ ಆಗಿಹೆ ಯೆಂಬ ಸಂಗ್ತಿಕೇಳಿ ಗ್ರಾಮಸ್ಥರು ಬಹಳ ಕ್ರತಜ್ಞ
ನ್ನು ತೋರಿಸಿ ಕೆಳಗೆ ಬರೆದ ಜನರು ಸಂತೋಷದಿಂದ ಪ
ಹುಡುಗಳಿಗೆ ಇನಾಮು ಕೊಡುವಬಗ್ಗೆ ವರ್ಗಣಿಕೊಟ್ಟವರಹೆ

ಹೆಸರು.	ರು.	ಹೆಸರು.
ರಾಘವೇಂದ್ರ ಬಾಬುರಾ. ಸಾ.	೪	ನಾರಾಯಣರಾವಘಡಣಿ
ಬಸಲಿಂಗಪ್ಪಪೂಮುಲೆಪಟ್ಟಣ	೪	ಶ. ಸಂಗಪ್ಪಾ ಚನ್ನೂರ
ಗುರಪ್ಪಾ ಸಪಣೂರ	೪	ಬಸಪ್ಪಾ ಪಾರ್ವತಿ
ಗುರಬಸಪ್ಪಾ ಶಟ್ಟಿ	೩	ವೀರಬದ್ರಪ್ಪಾ ತಡಸದ
ಫಕೀರಪ್ಪಾ ಸಿರಸಂಗಿ	೨	ಉಕಡಾ ಶೇಟಜಿ
ಗುರಸಾಂತಪ್ಪಾ ಹಾನಗಲ್	೨	ಭಕ್ತಾಜಿ ಮೂರಪಾಯಿ
		ಹಿಂದೊಜಿ ಮೂರಪಾಯಿ

ಈ ಪ್ರಕಾರಾ ಕೂತಬೈತಕಿನಲ್ಲಿ ೨೬ ರೂಪಾಯಿ ಕೊಟ್ಟಿದ
ಸದರಿ ಅಶಿಸ್ಟಾಂಟ ದಿಪೂಟಿಯವರು ಬಹಳ ಸಂತೋಷ
ಸ್ತ್ರೀ ಶಿಕ್ಷಣದ ಬಗ್ಗೆ ಸ್ವಲ್ಪದರಲ್ಲಿ ಬಹುಸರಸಾಗಿ ಪ್ರ
ಪಕೊಟ್ಟು ಸದರೀ ರಕಮಿನಲ್ಲಿ ಪಾಸಾದ ಹುಡುಗರಿಗೆ ೪
ಗಳನ್ನು ಹುಡಿಗಿಯರಿಗೆ ಖಣಗಳನ್ನು ಕೊಟ್ಟು ಸಬಾವಿಸರ್ಜ
ಯಿತು ತಾ. ೨೦/೬/೮೧

ಮೆಹಬರ್ಬಾನ್ ರಾವಸಾಹೇಬ ಕನ್ನಡ ಶಾಲಾಪತ್ರಕದ ಎಂಟ
ರರ ಸನ್ನಿಧಾನಕ್ಕೆ.

ಎಂಕಾಸೂರ ಹಿಂಡೂಸ್ಥಾನಿ ಸ್ಕೂಲ ಹೆಡ್ಡಪೂಸ್ತರನ ಸಲ್ಲಾಮು
ಳ್ಳಿ ಕೆಳಗೆ ಬರೆದ ನಾಲ್ಕಪ್ಪಾಗ್ಗಳಿಗೆ ಸನ್ನಿಧಾನದಿಂದ ಉತ್ತ
ರಸುವ ವಿಷಯವಾವ ಇದೇತಿಂಗಳ ಶಾಲಾಪತ್ರಕದಲ್ಲಿ ಸ್ವಲ್ಪಸ್ಥಳ
ಮಯಮಾಲಿಸಬೇಕೆಂದು ವಿನಯವಾಕ್ಯಗಳಿಂದ ಬೇಡಿಕೊಂಡಿ
ದ್ದೇನೆ ತಾರೀಖು ೨೧ನೇ ಮಾರ್ಚಿಯಮೊದಲು ಸನ್ನಿಧಾನದಲ್ಲಿ ಇಸವಿ
ಯಸ ಮೆಹಬರ್ಬಾನ್ ರಾವಸಾಹೇಬ ಡಿಸ್ಟ್ರಿಕ್ಟ ಎಜ್ಯುಕೇಶನಲ್
ಇನಸ್ಪೇಕ್ಟರ ಸಾಹೇಬರವರು ನಮ್ಮ ಸಾಲಯ ವಾರ್ಷಿಕ ಪ
ರೀಕ್ಷೆಯನ್ನು ಶಾಲಾ ಕಮಿಟೀ ಯವರ ಸಮಕ್ಷತಕ್ಕೊಂಡು ಉತ್ತ
ಮವಾದ ಶರಾ ಬರೆದು ವಿದ್ಯಾ ವೃದ್ಧಿ ಸಲುವಾಗಿ ಸರಸವಾದ
ಸಂಭಾವಣೆಯನ್ನು ಮಾಡಿದರುಇದನ್ನು ಕಂಡು ಕಮಿಟೀದಾರರು
ಬಂತೋಷಪಟ್ಟು ವಾಸಾದವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಇ
ನಾಮುಕೊಡುತ್ತೇವೆಂದು ಮೆಹಬರ್ಬಾನ್‌ರ ಸಮಕ್ಷ ಹೇಳಿಕೊಂಡ
ಪ್ರಕಾರ ತಾರೀಖು೭।೮।೮೧ ಇಸವಿ ದಿವಸ ಕಮಿಟೀದಾರರೂ
ಮತ್ತು ಊರಸಖ್ಯಜನರೂ ವರ್ಗಣಿಯನ್ನು ಕೂಡಿಸಿ ಸಭಾ ಮಾಡಿ
ವಾಸಾದ ಹುಡುಗರಿಗೆ ಹನ್ನೊಂದು ರುಪಾಯಿಯ ಪುಸ್ತಕಗಳ
ನ್ನೂ ಉಳಿದ ಯಾವತ್ತು ಹುಡುಗರಿಗೆ ಎರಡು ರುಪಾಯಿಯ
ಖಿರಾಯಿಯನ್ನೂ ಬಕ್ಷೀಸುಕೊಟ್ಟು ಈ ಮಾಸ್ತರರು ಬಂದಾಗಿ
ನಿಂದ ಮೆಹನತಿಂದಿಂದ ವಿದ್ಯಾಭ್ಯಾಸ ಮಾಡಿಸುವದಲ್ಲದೆ ಜ
ನರಿಗೆ ವಿದ್ಯದ ಉತ್ತೇಜನ ಕೊಡುವದನ್ನು ನೋಡಿ ನಾವು ಅವಂ
ಗಾಗಿದ್ದೇವೆ ಎಂದು ಶರಾ ಬರಿದು ವಿದ್ಯಾರ್ಥಿಗಳಿಗೆ ಸುಬೋ
ಧಿಸೇಳಿದರು ಸದರಿ ಇನಾಮುದ ಬಗ್ಗೆ ವರ್ಗಣಿ ಕೊಟ್ಟವರ ಹೆಸ
ರು ಮತ್ತು ಕೊಟ್ಟ ರಕಮು ಕೆಳಗೆ ಬರಿದಿದ್ದೇನೆ.

ಹೆಸರು.	ರೂಪಾಯಿ
೧ ಥೀನ ಅಲಿಷಾ ಮುಕಾನದಾರ.	೬ ೮
೨ ಖೂರಸಾಹೇಬ ಖಾಜಿ ಕುಂದಗೊಳ.	೧ ೬
೩ ಫಕೀರಸಾಹೇಬ ಜಮಾದಾರ.	೨ ೬
೪ಮುಹಮ್ಮದ ಖಾನ್ ಕಾಕಡ.	೨ ೬
೫ ಮುದರ್ಖಾನಸಾಹೇಬ ಲಾಲಾನವರ	೨ ೬
೬ ಹಿಂಸಾ ಮೊಹಯೀನಸಾಹೇಬ ಚೌಧ್ರಿ.	೧ ೬
೭ ಕಮಾಲಸಾಹೇಬ ಖಲೀಫಾ.	೧ ೬
೮ ಹಜರತಸಾಹೇಬ ಅಂಗಡಿಗೇರಿ	೬ ೮
೯ ರಾಜೇಖಾನ್ ಮುಜಾವರ ಬಾಡ	೬ ೮
೧೦ ಅಲ್ಲಿಸಾಹೇಬ ಹೊಟ್ಟೂರ	೧ ೬
೧೧ ಮೊಹಯೀನಸಾಹೇಬ ಮುಂಡಾಲೆ	೬ ೪
೧೨ ಮುಲೀಕಸಾಹೇಬ ನದಾಫ ಪಟೇಲ.	೬ ೪
೧೩ ನಬೀಸಾಹೇಬ ಮೋಮಿನ.	೬ ೪
೧೪ ಸುಸೇನಸಾಹೇಬ ಮುಳಗಿ	೬ ೪
೧೫ ಮಿಯಾಜಿ ಬಾಗವಾನ.	೬ ೪
೧೬ ಸಿದ್ಧಲಿಂಗಪಾ ಅಂಕಲಕೋಟಿ.	೬ ೪

ಈ ಪ್ರಕಾರ ವಿದ್ಯಾರ್ಥಿಗಳಿಗೆ ಉತ್ತೇಜನಾರ್ಥವಾಗಿ ಪಗ
ಣಿಯನ್ನು ಕೂಡಿಸಿ ಬಕ್ಷೀಸು ಕೊಟ್ಟಿದ್ದು ನೋಡಿ ನನಗೆ ಪ
ಮ ಸಂತೋಷ ಪಾಯಿತು ಇದೇ ಪ್ರಕಾರ ಎಲ್ಲಾ ಕಡೆಯು
ಯ ಕಮಿಟೀದಾರರೂ ಗ್ರಾಮಸ್ಥರೂ ಮೇಲೆ ಮೇಲೆ ಸಾಲ
ಬಂದು ಹುಡಗರ ಪರೀಕ್ಷೆಯನ್ನು ತಕ್ಕೊಂಡು ವಿದ್ಯಾರ್ಥಿಗಳ
ಉತ್ತೇಜನ ಕೊಡುವರೆಂದು ಪೂರ್ಣ ಆಶೆಗೈಯುತ್ತೇನೆ ಜಗ
ಶ ಇಂಥಜನರಿಗೆ ಚಿರಕಾಲ ಆನಂದವನ್ನು ಕೊಡು ಎಂದು ಪ

ಳಸುತ್ತೇನೆ. ಪತ್ರಕರ್ತ ಮಹಾರಾಯರೇ ಪತ್ರ ವಿಸ್ತಾರಕ್ಕೆ ಕ್ಷ
ೂ ಇರಲಿ ಎಂದು ಬೇಡಿಕೊಳ್ಳುತ್ತೇನೆ ಇಂತಿ ನಲ್ಲಾಮ.

ಾರೀಖು ೨೩|೬|೮೧ ಇಸವಿ. { ಮುಹಮ್ಮದಅ ಮಿನಾವುದ್ದೀನ
ಾಲೂಕ ಬಂಕಾಪುರ ಜಿಲ್ಲಾ { ವ. ಇಮಾಮುಸಾಹೇಬ ಹೆ.
ಾರವಾಡ. { ಹಿ. ಸಾಲಿ ಬಂಕಾಪುರ.

ಜಾಪತ ನಂಬರ.(೬೬)

ಮೆ. ರಾವಸಾಹೇಬ ಡಿಪುಟೀ ಎಜ್ಯುಕೇಶನಲ್. ಇನಸ್ಪೇ
ಟರ ಜಿಲ್ಲಾ ಧಾರವಾಡ ಇವರ ಹುಜೂರಿಗೆ.

ಹುಬಳ್ಳೀ ೨ನೇ ನಂಬರ ಗೆರ್ಲಸ್ಕೂಲ ಪಂಸ್ತರನ ರಿಪೋ
ರ್ಟ ತಾ. ೧೯ನೇ ಮೂಹೆ ಮೂರ್ಚ ಸನ್ನ ೧೮೮೧ನೇ ಇ. ತರು
ವಾಯೂ——

ಮೇ. ಹಾಯಕೋರ್ಟಿನ ವಕೀಲ ಸಾಹೇಬರವರು ತಾ.
೨೬|೨|೮೧ನೇ ಇ. ದಿವಸ ಈ ಸಾಲಿಯ ಪರೀಕ್ಷೆಯನ್ನು ತೆ
ಗುಕೊಂಡು, ಹುಡುಗರ ಉತ್ತೇಜನಾರ್ಥವಾಗಿ, ಮಿತಾ
ಯಿ ಹಂಚುವದಕ್ಕೂ, ಕೆಲವು ಅಭ್ಯಾಸಿನ ಪುಸ್ತಕಗಳಬಗ್ಗೂ
(೬)ರೂಪಾಯಿ ಇನಾಮು ಕೊಟ್ಟು ಪ್ಲಿಜಿಟಿರ್ಸ ಬುಕ್ಕಿನಲ್ಲಿ
ಪರಾ ಬರೆದದ್ದರ ಉತಾರ ಲಗತು ಇಟಿದ್ದೇನೆ ಮೆ.ರವರಿಗೆ ಅರಿ
ಕೆ ಇರಬೇಕು. ತಾ. ಸದರ

ಹಣಮಂತ ಭೀವ.ಕಿಂಗ
ಥಾ. ಹೆ. ಮೂ. ಮು. ಹು. ನ. ೨

—೦—

ೇರೆಗಳ ಉತಾರಗಳು ಇಂಗ್ರಜಿಯಲ್ಲಿ ಇರುವದರಿಂದ ಅವ್ರಗ
ಳನ್ನು ಈ ಮಿನಲಿಕ್ಕೆ ಅನುಕೂಲವಿಲ್ಲ. ರಾ.ರಾ. ಶಾಮರಾವ

ಮಿಕ್ಕಲ ಇಹರ ಅಭಿಪ್ರಾಯವು ಶಾಲೆಯ ಸ್ಥಿತಿ ನೆಟ್ಟಗಿರುತ್ತದೆ ಮುಗುಟವು. ಇಬ್ಬರು ಕವಿಮೀದಾರರ ಲೆಖಗಳಲ್ಲಿ ಮೇಲೆ ಬರಿ ೧೦೦ ತೆ ೬ ರೂಪಾಯಿ ಮಿಶಾಯಿ ಬುಕ್ಕುಗಳ ನಲುವಾಗಿ ಕೊಟ್ಟ ಬಾಬಿಕುರು ಇರುತ್ತದೆ.

ಶಾ. ಮ. ಎ.

ರಾವಸಾಹೇಬ ಕಂನಡ ಶಾಲಾಪತ್ರಿಕದ ಎಡಿಟರ ಸ್ಥಾನಕ್ಕೆ:

ಅಯ್ಯಾ ಕೆಳಗೆ ಬರದ ಬಹು ಆಶ್ಚರ್ಯ ಕರವಾದ ನಾಲ್ಕು ವಿಷಯಗಳಂನು ತನ್ನ ಕರಕಮಲದಲ್ಲಿ ಉದ್ಭವಿಸುವ ಸುಂದರ ಶಾಲಾಪತ್ರಿಕೆಯಲ್ಲಿ ಇದೇ ತೆರಗಳಲ್ಲಿ ಥಾಪಿಸಿ ಪ್ರಸಿದ್ಧ ಪಡಿಸುವಿರೆಂದು ಕೋರುತ್ತೇನೆ.

ನಿನ್ನೆ ರಾತ್ರಿ [೧೦] ಘಂಟೆಸುಮಾರಕ್ಕೆ ಆಕಾಶದಲ್ಲಿ ಪೂರ್ವ ಉತ್ತರಗಳ ನಡುವಿನ ಮೂಲೆ [ಈಶಾನ್ಯ] ದಿಕ್ಕಿನಿಂದ ಹಿರಿಯ ನಕ್ಷತ್ರವು ಪೂರ್ಣ ಚಂದ್ರನ ಜ್ಯೋತ್ಸ್ನೆಯಲ್ಲಿ ಪ್ರಕಾಶಮಾಯವಾದದ್ದು ೧-೨ ನಿಮಿಟುಗಳವರಿಗೂ ದ್ದು ಪಡುಬಾಣ ದೇಶದಲ್ಲಿ ಪ್ರಕಾಶವು ಕಡಿಮೆ ಯಾಗಿ ಪತಿಪಡಾಯುತು. ಅದು ಹುಂಗಾವಿಯಲ್ಲಿ ಉದ್ಭವಿಸುವ ಚಂದ್ರನಷ್ಟು ಇತ್ತು. ಇದನ್ನ ನಾನು ನನ್ನ ವಿದ್ಯಾರ್ಥಿಗಳೂ ಮಿತ್ರ ಜನರೂ ಕಂಡಿದ್ದಾರೆ ನೋಡಿದೆವು. ಇಂಥಾ ನಕ್ಷತ್ರ ಪನ್ನು ಬಳ್ಳಿ ಪೃಥ್ವಿಜನರು ಎಂದು ನೋಡಿಲ್ಲವೆಂದು ಹೇಳುತ್ತಾರೆ. ಹಿಂಗಾಗುವ ಕಾರಣವನ್ನು ನಮ್ಮ ದೇಶಬಾಂಧವರಾದ ಮಾಸ್ತರ ವ ಅಸಿಸ್ಟಂಟುಮಾಸ್ತರ ಜನರು ತಿಳುಹಿಸಿ ಮನಸ್ಸು ತೃಪ್ತಿ ಪಡಿಸುವಿರೆಂದು ಅಭಿಲಾಷಿಸುತ್ತೇನೆ ಪತ್ರಕರ್ತರೇ ಪತ್ರವಿಸ್ತಾರ

ಹೂಂ ಇರಬೇಕು. ಇಂತಿ ವಿನಂತಿ ತಾರೀಖು ತಿಳಿನೇ ಹೂಂ
ೀ ಸನ್ನಗಲಲಂಗಳಿಸ್ವಿ

ಗುರಾಚ್ಯಾರ್ಯ ತಿಪ್ಪಣಾಚ್ಯಾರ್ಯ ಹುಯಿಲಗೋಳ
ಕರ ಅ. ಹೆ. ಮೂ. ಹೊಂಬಳ ತಾ. ಗದಗ ಜಿ. ಧಾ.

—೧—

ಈ ನಕ್ಷತ್ರ ಪತನವನ್ನು ಧಾರವಾಡದಲ್ಲಿಯೂ ಕೆಲವ
ನೋಡಿದರು ಇದಕ್ಕೆ ಆಗ್ನಿಶರದಲ್ಲಿ ಮಿಂಟಿಯರ ಎಂದೆ
ತ್ತಾರೆ. ನೀರಿನ ಉಗಿಯು ಸಂಗಡ ಮೇಲಕ್ಕೆ ಹೋಗು
ತ್ತಿಕಾಲಿ ಷನ ಪದಾರ್ಥಗಳ ಕಣಗಳು ಹಬೆಯಲ್ಲಿ ಬಿಟ್ಟು
ು, ಕಲ್ಲಿನ ಬಂಡೆಗಳಾಗಿ, ಹಬೆಯೊಳಗೆ ವಿಲ್ಲಡಪ್ಪು ಜಡ
ಲಿಕ ಭುವಿಯಮೇಲೆ ಬೀಳುತ್ತವೆ. ಅಥವಾ ಭೂಮಿ
ಸುತ್ತುಮುತ್ತು ಬಹು ಅಲ್ಲ ಪರಿಮಾಣವುಳ್ಳ ಉಪಗ್ರಹ
ಚಂದ್ರನಂತೆ ತಿರಗುತ್ತವೆಂದು ಲಿಪ್ಲಾಂಸರ ಅನುಮಾನವ
ಅವು ಬಹಳ ಸಣ್ಣ ವಿರುವಾಗಿರ ಹುರ್ಜನ್ಮೆಯಲ್ಲಿನ
ಗಾಣಿಸುವದಿಲ್ಲ. ಅವುಗಳಿಂದ ಕಲ್ಲಿನ ಬಂಡೆಗಳು ಕಳಚಿ
ಯುಮೇಲೆ ಬಂದು ಬೀಳುತ್ತವೆ. ಈ ಬಗೆಯಾಗಿ ಬಿಳುವ ಬಂ
ಳು ಸೂರ್ಯನ ಪ್ರಕಾಶದೊಳಗೆ ಇರುವ ಮಟ್ಟಿಗೆ ಪ್ರಕಾಶ
ವದಾಗಿ ಕಾಣುತ್ತವೆ. ಇಷ್ಟೇಅಲ್ಲ; ಅವು ಭೂಮಿಯನ
ಕ್ಕೆ ಬಂದಹಾಗೆ ಕ್ಷಣಮಾತ್ರದೊಳಗೆ ಅವುಗಳ ಆಕಾರವು
ರ್ಗಮೆಯ ಚಂಡನಷ್ಟು ದೊಡ್ಡದಾಗಿ ಬೆಳೆಯುತ್ತವೆ ಆದ
ತೀರ ಭೂಮಿಯ ಸಮೀಪದಲ್ಲಿ ಕತ್ತಲೊಳಗೆ ಬಂದಕೂಡಲೆ
ು ಅದ್ರಶ್ಯವಾಗುತ್ತವೆ. ಈ ಬಂಡೆಗಳು ಬಿಬ್ಮಾಮ್ಸ್ ಅಷ್ಟ
ೀಹ ಚುಂಬಕ ಕಬ್ಬಿಣದವೇ ಇರುತ್ತವೆ.

ಮಿ. ಶಿ. ಪಿ.

ರಾ. ಸಾ. ಮಾಸಪತ್ರಿಕದ ಎಡಿಟರರ ಚರಣಾರವಿಂದ
ಬಿ. ಬಿ. ಕೆಳಗೆ ಬರೆದ ಸಾಲ್ಕಾರಿಗಳನ್ನು
ಕರಕಮಲದಲ್ಲಿ ಇಟ್ಟು ವಿನಮ್ರಭಾವ ಮಾಸಪತ್ರಿಕೆಯಲ್ಲಿ
ಸಿ ಪ್ರಸಿದ್ಧಿ ಪಡಿಸುವೆರೆಂದು ಕೋರುತ್ತೇನೆ.

ಬಾಗೇಪಾಡಿ ತಾಲೂಕ ವಿಂಗಳೇಶ್ವರ ಈ ಊರಿಗೆ
ಸಾಹೇಬ ಮೆಂಕಾಜಿ ವಿರುಪಾಕ್ಷ ಮೂಮಲೇದಾರ ಇವರು
ಯ ಪರಿಕ್ಷೆಕ್ಕೆ ಕೂತಿದ್ದರು ಅವರಸಂಗಡ ನಾವು ಕ
ಪ್ಪೆವು ಸಾಲಿಯಲ್ಲಿ [೫೦] ಹುಡುಗರು ಹಾಜರ ಇದ್ದ
ಳನೇ ಈ ಯತ್ತೆದ ಹುಡುಗ ಪರಿಕ್ಷೆ ತೆಗದುಕೊಂಡರು
ಸ ಬುಕ್ಕಿನಲ್ಲಿ ಮೂಸ್ತಾದ ಶಾಳಜಿಯಿಂದ ಅಭ್ಯಾಸ
ಸುತ್ತಾರೆ ಅಂತ ಸೆರಾಬರಾ ಕೊಡಿರುತ್ತಾರೆ.

ಈ ಊರಲ್ಲಿ ಸರಕಾರಿ ಶಾಲೆಯೂಗಿ ಅಜಮೂಸ ಎರಡ
ಪಾಯತು ಹಣಮಂತ ಭೂಮಾಜೀ ಮುರಾದಖಾನ ಇವರ
ನ್ನ ಸ್ಮರಕೆಲಸದ ಮೇಲೆ ಈ ಊರಿಗೆಬಂದು ಇದ ಪರ್ಷ ಪಾ
ಇಪ್ಪರಲ್ಲಿ ಹುಡುಗರನ್ನು ಸುಧಾರಿಸುವದು ನೋಡಿ ನಾವು
ಳ ಆನಂದಭರಿತರಾದೆವು ಇವರ ವಗಾರ ಸ್ವಲ್ಪಯಿದ್ದು ಬರ
ಡುವದರಕಯಿಗೆ ಇವರ ಮೇಲಅಧಿಕಾರಿಗಳು ಮರ್ಜಿಮೇರೆ
ಗತಕ್ಕದ್ದು ಮುತಪತ್ರಿಕಕರ್ತರಿಗೆ ಆಯಾಸ ವಾಗಿರಬಹ
ಕ್ಷಮೂಬೇಡಿಕೊಳ್ಳುತ್ತೇನೆ ರಾ. ೧೭೫೦ರಂಗನೇ ಇಸವಿ

ಬೆಂಗಳೂರಿನವರನಮಿಂ
ಸುಬ್ಬಣ್ಣ ಗುರುಪಿದ್ದಪ್ಪಾ ಬೆಂಬರ
ಬಿಪಾಲ ಮುರಮೋತ್ತಮ ಕುಲಕರ್ಣಿ ಬೆಂಬ

—o—

ಶಾಲಾಪತ್ರಕವ್ಯ.

——— ೦ * ೦ ———

ಸ್ತಕ ೧೬] [ಸಂಚಿಕೆ ೭

ಜೂಲಯಿ ೧೮೮೧

nduct to be modeled according to time.

ಕಾಲಾನುಸಾರ ವರ್ತನವು.

ನಡತೆಗಳು ಕಾಲವೆಂಬ ಸ್ತ್ರೀಯಳ ಮಕ್ಕಳು ಎಂದು ಳಬಹುದು. ಮನುಷ್ಯರು ಹುಟ್ಟಿದಾಗ ಹ್ಯಾಗೆ ತೀರ ನದ್ದಾ ದ್ದಾ ಇರುತ್ತಾನೋ, ಹಾಗೇ ನಡತೆಗಳಾವರು ಆರಂಭದ ತೀರ ನದ್ದಾಮುದ್ದಾ ಇರುತ್ತವೆ. ಸೂಲಗಿತ್ತಿಯ ಹಸ್ತ ಶಲ್ಯದಿಂದಲೂ, ಕಾಲಕ್ರಮದಿಂದಲೂ, ಮನುಷ್ಯನ ಶರೀ ಮಾಟಹುಟ್ಟಿ ಚಂದ ತೋರುತ್ತದೆ. ಇದೇ ಮೇರೆಗೆ ಏಮಂತ ಪುರುಷರ ಯೋಗದಿಂದಲೂ, ಕಾಲಗತಿಯಿಂದ , ನಡತೆಗಳು ಸುಧಾರಣೆಯನ್ನು ಹೊಂದುತ್ತವೆ. ಯಾ ಪುರುಷ ತನ್ನ ಬಾಹುಬಲದಿಂದ ದೊಡ್ಡ ಲೋಕೋತ್ತರ ಸಾಮ್ರಾಜ್ಯವನ್ನು ಮಾಡಿ, ತನ್ನ ಮನೆತನವನ್ನು ಹೆಸರಿಗೆ ತ ಪುರಷನು ಜನರ ಸ್ತುತಿಗೂ ಮರ್ಯಾದೆಗೂ ಪಾತ್ರನಾ ಮುಂದೆ ಅವನ ವಂಶಜರು ಆಗುವದಿಲ್ಲಾ. ಹುತ್ತು ವಾಸ್ತವಿಕವೇ ಸರಿ. ಮಹಾರಾಷ್ಟ್ರ ರಾಜದ ಮೂಲ ಕನಾದ ಸಿವಾಜಿ ಮಹಾರಾಜನಿಗೆ ಮಾಡುವಷ್ಟು ಮಾನ ವಂಶಜರಿಗೆ ಯಾರೂ ಮಾಡಲಿಕ್ಕಿಲ್ಲ.

ದೇ ಮೇರೆಗೆ ಜನರಲ್ಲಿ ಒಳ್ಳೀ ನಡತೆಗಳನ್ನು ಮೊದಲು
ಚಾರಣಲ್ಲಿ. ತಂದವರು ಬಹಳ ಪುಜ್ಯರೆಂದು ತಿಳಿಯುತ್ತಾ
ಆ ನಡತೆಗಳನ್ನು ಮುಂದೆ ತಿದ್ದಿ ತೀಡಿ ಸುಧಾರಿಸುವು
ಮೂಲ ಪ್ರವರ್ತಕರ ಯೋಗ್ಯತೆ ಎಂದಿಗೂ ಬಾರದು
ಮಾತು ಸ್ಪಷ್ಟವಾಗಿ ತಿಳಿಯುವದಕ್ಕಾಗಿ ಒಂದು ಸಣ್ಣ
ಧಾರಣ ವ್ಯವಹಾರದೊಳಗಿನ ದೃಷ್ಟಾಂತ ಹೇಳುತ್ತೇವೆ.
ರಿಯರ ಕಾಲದ ಹುಡುಗ ವ್ಯಾಪಾರದೊಳಗೆ ಹಾಕಿ,
ನ್ನು ಅಭಿವೃದ್ಧಿಗೊಳಿಸುವದು ಜಾಣತನದ ಕೆಲಸವೆಂ
ಲ್ಲಾರೂ ಬಲ್ಲರು. ಆದರೆ ಕೈಯಾಳಗೆ ಒಂದು ಕಾ
ಹ ಇಲ್ಲದಲೆ ಹೊಸದಾಗಿ ಘಳಕೇಮಾಡಿ ದೊಡ್ಡಸಿ
ಪಡಿಯುವದು ಸಾಧಾರಣ ಬುದ್ಧಿಯುಪನ ಕೈಲಿ
ಪ ಮಾತಲ್ಲ ಎಂದು ಯಾರೂ ಒಪ್ಪಿಕೊಳ್ಳದೇ
ಆದರಂತೆಯೂ, ಯಾವದಾದರೊಂದು ಅದ್ಭುತ ಕೆಲ
ತನ್ನ ಸ್ವಂತ ಬುದ್ಧಿಬಲದಿಂದ ಹೊಸದಾಗಿ ಮಾಡಿ,
ರಲ್ಲಿ ಹೆಸರು ಹೊಂದುವದು ದೊಡ್ಡ ಪರಾಕ್ರಮದ
ವ್ರ ಜನರಲ್ಲಿ ಕೆಟ್ಟದೊಂದು ನಡತೆಯೇನಂದರೆ, ಬ
ಎಲ್ಲರೂ ಆದಷ್ಟು ಮಾಡಿ, ಮೊದಲಿನಿಂದ ನಡೆದು
ದ್ದನ್ನೇ ಮುಂದೆ ಸಾಗಿಸ ಹೋಗುತ್ತಾರೆ; ಹೊಸದೊಂದ
ರು ಸ್ವೀಕರಿಸಹೇಳಿದರೆ, ಜೀವದ ಸುತ್ತು ಬಂದಂತೆ ಮಾ
ರೆ. ಆದಾಗ್ಯೂ ಹೊಸನಡತೆಗಳನ್ನು ಪ್ರಚಾರದಲ್ಲಿ ತರ
ದು ಮನುಷ್ಯರ ಮನಸಿನಲ್ಲಿ ಸಾಭಾವಿಕ ಆಚೆಯ
ಅಸು ಇರಹೇ ಹೋಗಿರ್ತಾರೆ, ಮನುಷ್ಯರಲ್ಲಿ ತಿದ್ದುವಿಕೆ
ಬಾಗಲಿಕ್ಕೆ ಬಲು ಜಡತಾ ಹರಿಯುತ್ತಿರುತ್ತ; ಕದಾಚಿತ್
ಮಾತ್ರವಾದರೂ ತಿದ್ದುವಿಕೆ ಆಗುತ್ತಿರಲಿಲ್ಲ.

ಈ ಇಚ್ಛೆಯು ದೊಡ್ಡ ಪರಾಕ್ರಮಶಾಲಿ ಪುರುಷರ ಮನ
ಲ್ಲಿ ಯಾವಾಗಲೂ ಜಾಗರೂಕವಾಗಿಯೂ ಪ್ರಬಲವಾಗಿ
ಇರುತ್ತದೆ. ಅದನ್ನು ತೃಪ್ತಿಗೊಳಿಸುವದಕ್ಕಾಗಿ ಅವರು
ದೆ ಮುಂದೆ ಅನೇಕ ಸಂಕಟಗಳನ್ನೂ ದುಃಖಗಳನ್ನೂ ಅ
ಭೋಗಿಸುವದಕ್ಕೆ ಹಿಂಜರಿ ಮುಂದೆ ನೋಡುವದಿಲ್ಲ. ಹೊಸ
ಯವನ್ನು ಹುಡುಕಿ ತೆಗೆಯುವ ಇಚ್ಛೆಯಿಂದ ಕೋಲಂ
ನ ಅಪ್ರತಿಷ್ಠೆಯ ಅಂಜಿಕೇ ಹಿಡಿಯುದೆ, ಜೀವದ ಹಂ
ಸಹ ತೊರೆದು ಲೋಕೋತ್ತರ ಸಾಹಸವಮಾಡಲಿಕ್ಕೆ ಸಿದ್ಧ
ನಿಂತನು. ಅದರಿಂದ ಕಡೆಯಲ್ಲಿ ಅವನ ಮನೋರಥ
ಗಿಬಂದು ಜನರಲ್ಲಿ ದೊಡ್ಡ ಹೆಸರಾಯಿತು. ಅವನು
ತ್ತು ಹಚ್ಚಿದ ಅಮೇರಿಕಾ ಖಂಡದಿಂದ ಜನರಿಗೆ ಹೇಳ
ತೀರದಷ್ಟು ಉಪಯೋಗವಾಯಿತು. ಉಗೆಯಸಹಾಯದಿಂದ
ಬಿಗಳನ್ನು ನಡಿಸಬಹುದೆಂಬ ವಿಚಾರವನ್ನು ಜಾರ್ಜ ಸ್ವಿಷ
ಮೊದಲಿಗೇ ಜನರಲ್ಲಿ ತಿಳಿಸಿದಾಗ, ಎಲ್ಲರು ಪಾಪ!
ನ ಉಪಹಾಸ ಮಾಡಹತ್ತಿದರು. ಆದರೆ ಅವನು ಎಷ್ಟೆ
ದನೇ ತನ್ನ ಯತ್ನವನ್ನು ಮುಂದೆ ಸಾಗಿಸಿ ಕಡೆಯ
ಉಗೇ ಯಂತ್ರವನ್ನು ಸಿದ್ಧಮಾಡಿದನು. ಉಗೇಯಂ
ನದಿಂದ ಆಗುವ ಅದ್ಭುತ ಚಮತ್ಕಾರಗಳು ಎಲ್ಲರಿಗೂ
ತ್ತಾಂಟು. ಅವುಗಳನ್ನು ಕೊರಿತು ಇಲ್ಲಿ ಹೇಳತಕ್ಕ ಅ
ಇಲ್ಲ.

ಹೀಗಿಲಾಗಿ, ಪೂರ್ವಾಪರ ನಡೆದು ಬಂದದ್ದೇ ಹಿಂತಪ್ಪು;
ನ್ನು ಬಿಟ್ಟು ಎಷ್ಟು ಮಾತ್ರವಾದರೂ ಹೊಸದನ್ನು ಅಂಗಿ
ಸಬಾರದೆಂದು ಯಾರಾದರು ಪ್ರತಿಪಾದಿಸಿದರೆ, ಅದು ಸ
ಮುಂದು ತೋರವಸ್ಸೇ? ಯಾವ ಮನುಷ್ಯನೂ ಹುಟ್ಟಿ

ಎಲ್ಲಿ ರೋಗಗಳಿಗೂ ಬೀಡು ಆಗಿರುವದಿಲ್ಲ; ಮತ್ತು
ತರದ ಔಷಧಗಳನ್ನು ತಕ್ಕೊಂಡಿರುವದಿಲ್ಲ. ಔಷಧಗ
ಹೊಸವೇ, ಸೊಲು ಯಾರೂ ತಕ್ಕೊಂಡಂಥವು ಆ
ಆದದರಿಂದ ರೋಗಿಯು ವೈದ್ಯನಿಗೆ, ಸ್ವಾಮಿ, ಈ ಔ
ಥ ನಾನು ಈಹೊತ್ತಿನ ತನಕ ಎಂದೆಂದೂ ತಕ್ಕೊಂಡಿ
ಆದದರಿಂದ ಅದನ್ನು ಈಗ ತಕ್ಕೊಳ್ಳಲಾರೆನು, ಎಂದು
ಳಿದರೆ, ಹಿಪ್ಪುಪಸೋ? ಆ ಔಷಧದ ಹೊತ್ತು ಅವನ
ವೆ ಹೋಗುವದೋ? ಇಲ್ಲ. ಅಂದಮೇಲೆ ಇಂಥವರನ್ನ
ಯುಕ್ತಿಯಲ್ಲ, ಅಪ್ಪಾ ಈ ಜೇನೆ ಮೊದಲು ಎಂದಾ
ನಿನಗೆ ಹುಟ್ಟಿತ್ತೇನು ಎಂದು ಕೇಳಬೇಕು. ಅದಕ್ಕೆ ಅವ
ಸ್ವಾಭಾವಿಕವಾಗಿ ಇಲ್ಲವೆಂದು ಹೇಳುವನು. ಆ ಬಳಿಕ ವ
ನಿಗೆ, ಅಪ್ಪಾ, ಈ ರೋಗವು ನಿನಗೆ ಪೂರ್ವದಲ್ಲಿ ಎಂದೂ
ಆಗಿದ್ದಿಲ್ಲ. ಆದದರಿಂದ ಈ ಔಷಧ ತಕ್ಕೊಳ್ಳುವ ಪ್ರಸಂ
ನಿನಗೆ ಬರಲಿಲ್ಲ. ಆದರೆ ಈಗ ರೋಗ ಹುಟ್ಟಿದ್ದರಿಂದ,
ದು ಪರಿಹಾರವಾಗುವದಕ್ಕೆ ಈ ಔಷಧ ತಕ್ಕೊಳ್ಳಲಕ್ಕೆ ಬ
ಕು, ಎಂದು ಹೇಳಿದರೆ, ಅವನ ತಪ್ಪು ಅವನಿಗೆ ತ
ಯುವದು.

ಯಿನ ಯಿನಕ್ಕೆ ಪ್ರಸಂಜದಲ್ಲಿ ಮನುಷ್ಯರಿಗೆ ದುಃಖವು ಹೆಚ್ಚ
ಗುತ್ತಾ ನಡೆದದೆ. ಅದನ್ನು ನಿವಾರಣ ಮಾಡುವದಕ್ಕಾಗಿ ಜ
ಣತನದ ಬಗೆಬಗೆಯ ಹದಬಿಕೆಗಳನ್ನು ಯೋಚಿಸದೇ ಹೊ
ದರೆ, ಮುಂದೆ ಬರುಬರುತ್ತಾ ಮನುಷ್ಯರ ನಿರ್ವಾಹವೇ ಸ
ಗದಂತೆ ಆಗುವದು. ಈ ಮಾತು ಸಾಂಪ್ರತದಲ್ಲಿ ನಮ್ಮ ದೇ
ವನ್ನಾಳುತ್ತಿರುವ ಇಂಗ್ಲಿಶ ಸರಕಾರದವರ ರಾಜ್ಯಪದ್ಧತಿಯನ್ನ
ಚನ್ನಾಗಿ ಲಕ್ಷಕೊಟ್ಟು ನೋಡಿದರೆ ಸಹಜದಲ್ಲಿ ತಿಳಿದು ಬರು

ಈಗಿನ ಸರಕಾರದವರು ಇಲಾಖೆ ಇಲಾಖೆಗೆ ಜನರಿಗಾಗಿ
ಯದೆಗಳನ್ನು ಮಾಡುವದಕ್ಕಾಗಿ ಸ್ವತಂತ್ರ ಕೌನಿಲಗಳನ್ನು
ಖಿಸಿರುತ್ತಾರೆ. ಅಲ್ಲಿಂದ ಪ್ರತಿವರ್ಷ ಏನಿಲ್ಲೆಂದರೂ ನಾ
ಕ್ಕಾರದರು ಹೊಸ ಕಾಯಿದೆಗಳು ಆಗಿಯೇ ಆಗುತ್ತವೆ. ಈ
ಯಿದೆಗಳಲ್ಲಿ ರಾಜ್ಯವ್ಯವಸ್ಥೆಯ ವಿಷಯದವು ಕ್ಷೀರ ಸ್ವಲ್ಪ
ರುತ್ತವೆ; ಆದರೆ ತರತರದ ಅಪರಾಧಗಳನ್ನು ಕ್ರಿತೂ,
ಅಪರಾಧಗಳಿಗೆ ಪ್ರತಿಬಂಧಕವಾಗಿ ಮಾಡತಕ್ಕ ಶಾಸನಗ
ನ್ನು ಕುರಿತೂ ಇರುವವೇ ಬಹಳ. ಇದರಿಂದ ಹೊರಡುವ
ನುಮಾನವು ಸ್ಪಷ್ಟವಿದೆ. ಈ ಮೇರೆಗೆ ದಿನೇ ದಿನೇ ಜನರಲ್ಲಿ
ನರ್ಮಡತೆಗಳು ದುರಾಚರಣೆ ಹೆಚ್ಚಾಗುತ್ತಾನಡೆದರೆ, ಹೊಸದು
ಕಳೇದು ಎಂಬ ವಿಚಾರ ನೋಡದೆ, ಸುಜ್ಞರಾದವರು ತಕ್ಕ ಉ
ಪಾಯಗಳನ್ನು ಯೋಜಿಸತಕ್ಕದ್ದು ಎಂಬ ಮಾತಿಗೆ ಯಾರಾಡ
ದು ಬಿಟ್ಟುಕೊಳ್ಳರು.

ಜನರಿಗೆ ಬಹಳ ಪ್ರಾಚೀನ ಕಾಲದಿಂದ ಸಾಗಿ ಬಂದ ನಡತೆ
ಉತ್ತಮವೆಂದು ತೋರುವದು; ಮತ್ತು ಪ್ರಚಾರದೊಳಗಿನ ಇತ
ರ ರೀತಿಗಳೊದನೆ ಅದು ಚನ್ನಾಗಿ ಕೂಡಿರುವದು. ಇದಕ್ಕೆ ಉ
ದಾಹರಣೆ ಹುಡಕುವದಕ್ಕಾಗಿ ಬಹಳ ದೂರ ಹೋಗುವ ಅವಶ್ಯ
ವಿಲ್ಲ. ನಮ್ಮಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವದಿಲ್ಲ. ಮು
ತ್ತು ಲಗ್ನವಾದ ಬಳಿಕ ಅವರನ್ನು ದಾಸಿಗಳಂತೆ ಲೆಕ್ಕಿಸುವರು.
ವಿಚಾರ ಮಾಡಿ ನೋಡಲಾಗಿ ಇವೆಂದೂ ನಡತೆಗಳು ಒಂದಕೊಂ
ದು ಬಹಳೇ ಸಾಪೇಕ್ಷವಾಗಿಯವೆ. ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಿ
ಜ್ಞಾನಿಯಾಗಿ ಮಾಡಿದರೆ, ಅವರು ತಾಯಿತಂದೆಗಳು ತಮ್ಮ ಬು
ದ್ಧಿಯಿಂದ ಹುಡುಕಿ ನೇಮಿಸಿದ ಪತಿಯ ಮಾದುವೆಯಾಗಿ ತಮ್ಮ ಬೆಲೆ
ಯಿಲ್ಲದ ಸ್ವಾತಂತ್ರ್ಯ ಸುಖಕ್ಕೆ ಎಂದೂ ಎರವಾಗರು. ಇನ್ನು

ವಿದ್ಯೆಯಿಲ್ಲದೆ ಇರುವ ಕಾರಣ, ಅವರಿಗೆ ವಿಚಾರವೂ ಸಾರಾಸಾರ ಜ್ಞಾನವೂ ಇರುವದಿಲ್ಲ. ಆದದರಿಂದ ಗಂಡದಿರಿಗೆ ಅವರನ್ನು ದಾಸಿಗಳಂತೆ ತಮ್ಮ ಅಧೀನದಲ್ಲಿ ಇಟ್ಟು ಕೊಳ್ಳದೇ ಎರಡನೆ ಮಾರ್ಗವಿಲ್ಲ.

